
ಪ್ರಬೋಧನೆ

# ಲಂಕೇಶ್


14 ಮೇ 2014 ಪುಟ 20 ರೂ. 15/-



ನಿಮ್ಹಾನ್ಸ್‌ನಲ್ಲಿ ಹುಚ್ಚನ ವರ್ಕ್‌ಶಾಪ್




# ಕಾಮುಕ ಪಿಂಡಗಳು ಅರೆಸ್ಟ್




# ಮಂಡ್ಯ: ಬೆಂಕಿ ಇಟ್ಟ ಜಾತಿ ವ್ಯವಸ್ಥೆ



## ಈಡಿಗರು: ಆರ್ಯರಾ, ಅನಾರ್ಯರಾ?



# ಕೊನೆಗಾಲಕ್ಕೆ ಕಾಶಿಯಾತ್ರೆ!




## ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ

# ಸರ್ಕಾರೀ ಅಧಿಕಾರಿಗಳೋ ಅಥವಾ ಕಂಪೆನಿ ಯಜಮಾನರೋ?

ಈ ರಾಜ್ಯದ ಅತೀ ದೊಡ್ಡ ಸಾರಿಗೆ ಕಂಪೆನಿಯೆಂದರೆ ಅದು ಕೆಎಸ್‌ಆರ್‌ಟಿಸಿ. ವಹಿವಾಟು, ಬಸ್‌ಗಳ ಸಂಖ್ಯೆ ಕಾರ್ಮಿಕರ ಸಂಖ್ಯೆ, ಪ್ರತಿನಿತ್ಯ ಸಾಗಿಸುವ ಪ್ರಯಾಣಿಕರ ಸಂಖ್ಯೆ, ರಾಜ್ಯವ್ಯಾಪಿ ಅಸ್ತಿತ್ವ ಸೇರಿದಂತೆ ಇನ್ನೂ ಹಲವು ಅಂಶಗಳಲ್ಲಿ ಇದನ್ನು ಸರಿಗಟ್ಟುವ ಇನ್ನೊಂದು ಕಂಪೆನಿ ರಾಜ್ಯದಲ್ಲಿಲ್ಲ. ಸಾಮಾನ್ಯವಾಗಿ 'ಸರ್ಕಾರಿ' ಆಗಿರುವ ಎಲ್ಲವನ್ನೂ ದೂರುವ ಅಭ್ಯಾಸ ಒಂದಿದೆ. ಸರ್ಕಾರಿ ಬಸ್ ಸರಿಯಾದ ಸಮಯಕ್ಕೆ ಬರುವುದಿಲ್ಲ; ಸರಿಯಾದ ನಿರ್ವಹಣೆ ಇಲ್ಲ; ಭ್ರಷ್ಟಾಚಾರ ಮಿತಿಮೀರಿದೆ ಇತ್ಯಾದಿ ಇತ್ಯಾದಿ ದೂರುಗಳು ಇವೆ. ಭ್ರಷ್ಟಾಚಾರ ಇರುವುದು ನಿಜವಾದರೂ ಉಳಿದ ಆರೋಪಗಳೂ ನೂರಕ್ಕೆ ನೂರು ಸರಿ ಎಂದು ಹೇಳಲಾಗದು.


ಹೆಚ್ಚಿನ ಬಸ್‌ಗಳು ಸರಿಯಾದ ಸಮಯಕ್ಕೆ ಓಡುತ್ತವೆ. ಗ್ರಾಮಾಂತರ ಪ್ರದೇಶದಲ್ಲಿ ಓಡಾಡುವ ಬಸ್ಸುಗಳಲ್ಲಿ ಹಲವು ಕಳಪೆಯಾಗಿವೆ ಎಂಬುದು ನಿಜವಾದರೂ, ಇದ್ದುದರಲ್ಲಿ ಬಸ್‌ಗಳ ನಿರ್ವಹಣೆ ಪರವಾಗಿಲ್ಲ, ಹಾಗೆ ನೋಡಿದರೆ, ಸ್ವಚ್ಛತೆಯ ವಿಚಾರದಲ್ಲಿ ಭಾರತೀಯ ರೈಲ್ವೇಗಿಂತ ಕೆಎಸ್‌ಆರ್‌ಟಿಸಿ ಉತ್ತಮವಾಗಿದೆ. ಸಾಧಾರಣ ಕರ್ನಾಟಕ ಸಾರಿಗೆ ಮಾತ್ರವಲ್ಲದೇ, ರಾಜಹಂಸ, ಐರಾವತ ಇತ್ಯಾದಿ ಹಲವು ಮಾದರಿಯ ಬಸ್ಸುಗಳು ರಾಜ್ಯಾದ್ಯಂತ ಓಡಾಡುತ್ತವೆ. ಯಾವ ಖಾಸಗೀ ಕಂಪೆನಿಗೂ ಕಡಿಮೆಯಿಲ್ಲದಂತೆ ಎಸಿ ಬಸ್‌ಗಳು, ಸ್ಲೀಪರ್ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ನಿರ್ವಹಿಸುತ್ತಿದೆ.


ಮುಂಗಡ ಬುಕಿಂಗ್ ಅನ್ನು ಮಾಡಲು ಬೇಕಾದಷ್ಟು ಕೌಂಟರ್‌ಗಳು ಬಸ್‌ಸ್ಟಾಂಡ್‌ಗಳಲ್ಲಿ ಮಾತ್ರವಲ್ಲದೇ, ಹೊರಗಡೆ ಏಜೆಂಟರ ಮೂಲಕ ಸಹ ತೆರೆಸಲಾಗಿದೆ. ಅದರ ಜೊತೆಗೆ ಇಂಟರ್ನೆಟ್ ಮುಖಾಂತರ ನೇರವಾಗಿ ಬುಕಿಂಗ್ ಮಾಡಿಕೊಳ್ಳಬಹುದಾಗಿದೆ. ಐಷಾರಾಮಿ ಬಸ್‌ಗಳಲ್ಲಿ ಬುಕಿಂಗ್ ಮಾಡಿದರೆ, ಬಸ್ ಸಂಖ್ಯೆ, ಸಮಯ, ಪ್ಲಾಟ್‌ಫಾರಂ ಇತ್ಯಾದಿಗಳೆಲ್ಲವನ್ನೂ ಎಸ್ಸೆಮ್ಮೆಸ್ ಮುಖಾಂತರ ಕಳಿಸುವ ವ್ಯವಸ್ಥೆ ಇದೆ. ಈ ರೀತಿಯಾಗಿ ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಈ ಸರ್ಕಾರೀ ಸಂಸ್ಥೆ ಹಿಂದೆ ಬಿದ್ದಿಲ್ಲ. ಬಸ್ ಸ್ಟಾಂಡ್‌ಗಳೂ ಸಹ 10-15 ವರ್ಷಗಳ ಹಿಂದೆ ಇದ್ದಂತೆ ಈಗ ಇಲ್ಲ. ಸುಸಜ್ಜಿತ ಬಸ್ ನಿಲ್ದಾಣಗಳನ್ನು ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಿರ್ಮಿಸುವ ಕಡೆ ಸಾಗಲಾಗಿದೆ. ಎಲ್ಲೆಡೆ ಶೌಚಾಲಯಗಳೂ ಇವೆ. ಉತ್ತರ ಕರ್ನಾಟಕ ಭಾಗದಲ್ಲಿ ಆದರ ನಿರ್ವಹಣೆ ಬಹಳ ಕಳಪೆ ಇದೆಯಾದರೂ, ಉಳಿದ ಭಾಗಗಳಲ್ಲಿ ಇದ್ದುದರಲ್ಲಿ ಸ್ವಚ್ಛವಾಗಿಟ್ಟುಕೊಳ್ಳುವ ಪ್ರಯತ್ನ ನಡೆದಿದೆ.

ಈ ರೀತಿಯಾಗಿ ನೋಡಿದರೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಗಳು ಈ ದೇಶದ ಅತ್ಯುತ್ತಮ ಸಾರಿಗೆ ವ್ಯವಸ್ಥೆಗಳಲ್ಲೊಂದಾಗಿದೆ. ಸರ್ಕಾರಿ ಆಗಿರುವ ಎಲ್ಲವೂ ಕಳಪೆಯೆಂಬಂತೆ ನೋಡುವ, ಬಿಂಬಿಸುವವರ ಮುಖಕ್ಕೆ ಹೊಡೆಯುವ ಹಾಗೆ ಹಲವು ಸರ್ಕಾರಿ ಸಂಸ್ಥೆಗಳಿವೆ. ರಾಜ್ಯದ ಹಲವಾರು ಕಡೆ ಸರ್ಕಾರೀ ಶಾಲೆಗಳು ಮತ್ತು ಕಾಲೇಜುಗಳು ಖಾಸಗಿಯವರನ್ನು ಮೀರಿಸುತ್ತವೆ. ಆರೋಗ್ಯ ಕ್ಷೇತ್ರದಲ್ಲಿ ಕೇಂದ್ರ ಸ್ವಾಮ್ಯದ ನಿಮ್ಹಾನ್ಸ್, ರಾಜ್ಯ ಸ್ವಾಮ್ಯದ ಜಯದೇವ ಹೃದ್ರೋಗ ಆಸ್ಪತ್ರೆಗಳು ಯಾರಿಗೂ ಕಡಿಮೆಯಿಲ್ಲ. ದೆಹಲಿ (ಏಮ್ಸ್), ಚಂಡೀಗಢ (ಪಿಜಿಐ), ಪಾಂಡಿಚೇರಿ (ಜಿಪ್‌ಮರ್) ಮುಂತಾದೆಡೆಗಳ ಸರ್ಕಾರೀ ಆಸ್ಪತ್ರೆಗಳು ದೇಶದ ಅತ್ಯುತ್ತಮ ಆಸ್ಪತ್ರೆಗಳ ಸಾಲಿನಲ್ಲಿವೆ. ಇನ್ನು ಇಂಜಿನಿಯರಿಂಗ್ ಕ್ಷೇತ್ರಕ್ಕೆ ಬರುವುದಾದರೆ ಐಐಟಿಗಳು, ಎನ್‌ಐಟಿಗಳು ಮತ್ತು ಬೆಂಗಳೂರಿನ ಐಐಎಸ್‌ಸಿಗಳೇ ಇಂದಿಗೂ ದೇಶದ ಅತ್ಯುತ್ತಮ ಸಂಸ್ಥೆಗಳಾಗಿವೆ. ಇವೆಲ್ಲಕ್ಕೆ ಕಾರಣರಾಗಿರುವ ಅಲ್ಲಿನ ಸಿಬ್ಬಂದಿ, ಕಾರ್ಮಿಕರು ಮತ್ತು ಮುನ್ನಡೆಸಿದ ಮುಖ್ಯಸ್ಥಾನಗಳಲ್ಲಿ ಇರುವವರಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕು.

ಖಾಸಗೀಕರಣ ಮಾತ್ರ ಎಲ್ಲಕ್ಕೂ ಪರಿಹಾರವೆಂಬಂತೆ, ಖಾಸಗಿ ಕ್ಷೇತ್ರದಲ್ಲಿ ಮಾತ್ರ ಅತ್ಯುತ್ತಮ ಸರಕು ಸೇವೆ ದೊರೆಯಲು ಸಾಧ್ಯವೆಂಬಂತೆ ವಾದಿಸುವವರಿಗೆ ಇವತ್ತಿಗೂ ಅತ್ಯುತ್ತಮವಾಗಿ ನಡೆಯುತ್ತಿರುವ ಈ ಸಂಸ್ಥೆಗಳೆಲ್ಲವೂ ಉತ್ತರ ನೀಡುತ್ತವೆ. ಎಲ್ಲವೂ ರಾಷ್ಟ್ರೀಕರಣವಾದರೆ, ದೇಶಕ್ಕೆ ಒಳ್ಳೆಯದೇ ಆಗಲು ಸಾಧ್ಯ ಎಂದು ವಾದಿಸಬಯಸುವವರಿಗೆ ಪೂರಕವಾಗಿ ಈ ಅಂಶಗಳು ನೆರವಿಗೆ ಬರುತ್ತವೆ.

ಆದರೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಯ ವಿಚಾರದಲ್ಲಿ ಇವೆಲ್ಲವೂ ಒಟ್ಟು ಸನ್ನಿವೇಶದ ಒಂದು ಮುಖ ಮಾತ್ರ. ಅದನ್ನೂ ಚರ್ಚಿಸುವುದು ಬಹಳ ಮುಖ್ಯವಾಗಿದೆ. ಇಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಗಳ ಟಿಕೆಟ್ ದರ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು. ಉದಾಹರಣೆಗೆ ಪಕ್ಕದ ತಮಿಳುನಾಡಿನ ಚೆನ್ನೈನಲ್ಲಿ ಕನಿಷ್ಠ ಟಿಕೆಟ್‌ದರ 3 ರೂ. ಇದ್ದರೆ, ಬೆಂಗಳೂರಿನಲ್ಲಿ 6 ರೂ. ಇದೆ. ಇನ್ನೂ ಕೆಲವು ರಾಜ್ಯಗಳಲ್ಲಿ ಕರ್ನಾಟಕದ ಬಸ್ ದರದ ಅರ್ಧ ದರ ಮಾತ್ರ ಇದೆ. ನೀವು ಮೈಸೂರಿನಿಂದ ಅಂಕೋಲಕ್ಕೆ ಹೋಗಬೇಕಿದ್ದರೆ ಸಂಜೆ 4.30 ಮತ್ತು 5.30ರ ಸುಮಾರಿಗೆ ಮೈಸೂರು ಬಸ್‌ನಿಲ್ದಾಣದಿಂದ ಗೋವಾಕ್ಕೆ ಹೊರಡುವ ಕೆಎಸ್‌ಆರ್‌ಟಿಸಿ ಬಸ್ ಮತ್ತು ಗೋವಾ ಸಾರಿಗೆ ಬಸ್‌ಗಳು ಇವೆ. ಅವೆರಡರ ನಡುವಿನ ಟಿಕೆಟ್‌ದರದಲ್ಲಿನ ವ್ಯತ್ಯಾಸ 100 ರೂ.ಗಳಿಗೂ ಹೆಚ್ಚು. ಹೆಚ್ಚಿನ ದರ ಕೆಎಸ್‌ಆರ್‌ಟಿಸಿದು ಎಂದು ಪ್ರತ್ಯೇಕವಾಗಿ ಹೇಳುವ ಆಗತ್ಯವಿಲ್ಲವಷ್ಟೇ.






ಬಿಎಂಟಿಸಿಯ ದರವನ್ನು ಕಳೆದ 3 ವರ್ಷಗಳಲ್ಲಿ 4 ಬಾರಿ ಹೆಚ್ಚಿಸಲಾಗಿತ್ತು. ಈಗ ಒಂದು ವಾರದ ಹಿಂದೆ ಮತ್ತೊಮ್ಮೆ ಹೆಚ್ಚಿಸಲಾಗಿದೆ. ಇದಕ್ಕೆ ಕಾರಣವೇನೆಂದರೆ ಕಳೆದ ವರ್ಷ ಬಿಎಂಟಿಸಿಗೆ 140 ಕೋಟಿ ರೂ. ನಷ್ಟವಾಗಿದೆಯಂತೆ. ಡೀಸೆಲ್ ದರ ಏರಿಕೆಯಾಗಿರುವುದರಿಂದ ಮತ್ತು ಕಾರ್ಮಿಕರ ಸಂಬಳದ ಹೊರೆ ಹೆಚ್ಚಾಗಿರುವುದರಿಂದ ಇದು ಅನಿವಾರ್ಯವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ವಾಸ್ತವ ಏನೆಂದರೆ ಈ 3 ವರ್ಷಗಳಲ್ಲಿ ಡೀಸೆಲ್ ಬೆಲೆ ಏರಿಕೆಯಾಗಿರುವುದು ಶೇ.30. ಬಿಎಂಟಿಸಿ ದರ ಏರಿಕೆ ಶೇ.70ರಿಂದ 80! ಕಾರ್ಮಿಕರ ಸಂಬಳಗಳಲ್ಲಿ ಗಮನಾರ್ಹ ಹೆಚ್ಚಳವಾಗಿಲ್ಲ ಮಾತ್ರವಲ್ಲ, ಅವರಿಗೆ ಡಿ.ಎ ಹಣದ ಬಾಕಿ ನೀಡಿಲ್ಲ; ಪಿ.ಎಫ್ ಸಹ ಪಾವತಿಸಿಲ್ಲ!!

ಹಾಗಿದ್ದರೆ, ಬೇರೆ ರಾಜ್ಯಗಳಲ್ಲಿ ಸರ್ಕಾರಗಳೇ ನಡೆಸುವ ಸಾರಿಗೆ ಸಂಸ್ಥೆಗಳು ಇದರ ಅರ್ಧ ಟಿಕೆಟ್ ದರಗಳಲ್ಲಿ ಹೇಗೆ ನಡೆಸುತ್ತಿದ್ದಾರೆ? ಏಕೆಂದರೆ ಭ್ರಷ್ಟಾಚಾರವೇ ಇದಕ್ಕೆ ಕಾರಣ ಎನ್ನುವುದಾದರೆ ಅಲ್ಲೂ ಭ್ರಷ್ಟಾಚಾರವು ಸಮಸ್ಯೆಯಾಗಿರಬೇಕಿತ್ತಲ್ಲವೇ? ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿಗಳಲ್ಲೂ ಭ್ರಷ್ಟಾಚಾರ ಸಾಕಷ್ಟು ಇದೆ. ಸಾಮಾನ್ಯ ಜನರಿಗೆ ಟಿಕೆಟ್ ಕೊಡದೇ ಹಣ ಜೇಬಿಗಿಳಿಸುವ ಅಥವಾ 1 ರೂ., 2 ರೂ., ಚಿಲ್ಲರೆ ವಾಪಸ್ ನೀಡದ ಕಂಡಕ್ಟರ್‌ಗಳು ಈ ಭ್ರಷ್ಟಾಚಾರದ ಅಪರಾವತಾರಗಳಾಗಿ ಕಾಣುತ್ತಾರೆ. ಆದರೆ ವಾಸ್ತವದಲ್ಲಿ ಈ ಹಣದಲ್ಲಿ ಗಮನಾರ್ಹ ಪಾಲನ್ನು ಅವರು ಮೇಲಧಿಕಾರಿಗಳಿಗೆ ಬೇರೆ ಬೇರೆ ರೂಪದಲ್ಲಿ ನೀಡಬೇಕಿರುತ್ತದೆ. ಇನ್ನೂ ಮೇಲುಮೇಲಕ್ಕೆ ಹೋದಂತೆಲ್ಲಾ ವಿವಿಧ ರೂಪಗಳಲ್ಲಿ ಹಣ ಮಾಡುವ ಕಲೆಗಳಲ್ಲಿ ಮೇಲಿನವರು ಪರಿಣಿತರಾಗಿದ್ದಾರೆ. ಅದನ್ನು ತಡೆಗಟ್ಟುವುದಾದರೆ ಒಂದು ಮಟ್ಟಿಗಿನ ಆರ್ಥಿಕ ಅನುಕೂಲ ಸಂಸ್ಥೆಗೆ ಆಗುತ್ತದೆ.

ಆದರೆ ಅದಕ್ಕಿಂತ ಮುಖ್ಯವಾದ ಮತ್ತೊಂದು ಸಂಗತಿಯಿದೆ. ಅದೇನೆಂದರೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಗಳಿಗೆ ಕರ್ನಾಟಕ ಸರ್ಕಾರದಿಂದ ಯಾವುದೇ ವಿನಾಯ್ತಿ ಅಥವಾ ಸಬ್ಸಿಡಿಗಳಿಲ್ಲ. ಉದಾಹರಣೆಗೆ ತಮಿಳುನಾಡಿನಲ್ಲಿ ಅಲ್ಲಿನ ಸರ್ಕಾರವೇ ಸಿಬ್ಬಂದಿಯ ವೇತನವನ್ನು ಭರಿಸುತ್ತದೆ. ಕರ್ನಾಟಕ ಸರ್ಕಾರವು ಚಿಕ್ಕಾಸನ್ನೂ ನೀಡುವುದಿಲ್ಲ. ಇನ್ನಿತರ ರಾಜ್ಯಗಳಲ್ಲೂ ಇಂತಹ ಹಲವು ರಿಯಾಯ್ತಿಗಳನ್ನು ಅಲ್ಲಿನ ಸರ್ಕಾರಿ ಸಾರಿಗೆ ಸಂಸ್ಥೆಗಳು ಪಡೆದುಕೊಳ್ಳುತ್ತವೆ. ಅವ್ಯಾವೂ ಇಲ್ಲಿಲ್ಲ. ಆ ಅರ್ಥದಲ್ಲಿ ಕೆಎಸ್‌ಆರ್‌ಟಿಸಿ ಒಂದು ಸಂಪೂರ್ಣ ಖಾಸಗಿ ಸಂಸ್ಥೆಯಾಗಿಬಿಟ್ಟಿದೆ. ಸ್ವಾಯತ್ತತೆಯ ಹೆಸರಿನಲ್ಲಿ ಸರ್ಕಾರೀ ಕಾಲೇಜುಗಳು ಮತ್ತು ಆಸ್ಪತ್ರೆಗಳನ್ನೂ ಸಹ ಇದೇ ರೀತಿಯಲ್ಲಿ ಖಾಸಗಿ ಸಂಸ್ಥೆಗಳನ್ನಾಗಿಸುವ ಹುನ್ನಾರವನ್ನೂ ಸರ್ಕಾರವು ನಡೆಸುತ್ತಿದೆ.

## 50 ಪೈಸೆ ಆಂದ... ಮತ್ತು ಕನಿಷ್ಠ ...

ಕಳೆದ ಒಂದು ವರ್ಷದಿಂದ ಬಿ...
ಮಾಡುತ್ತಿರುವ ಬೆಂಗಳೂರು ಬ...
ವೇದಿಕೆಯು 50 ಪೈಸೆ ಆಂದೋಲ...
ಅದರ ಪ್ರಕಾರ ಕಿ.ಮೀ.ಗೆ 50 ಪೈಸೆ ದ...
ಮೊದಲ 10 ಕಿ.ಮೀ.ಗೆ 5 ರೂ...
ಕಿ.ಮೀ.ಗಳಿಗೆ 10 ರೂ., 20 ಕಿ.ಮೀ...
15 ರೂ., ದಿನದ ಪಾಸ್‌ಗೆ 25 ರ...
ಪಾಸ್‌ಗೆ 250 ರೂಗಳನ್ನು ನಿಗದಿ...
ಈ ಆಂದೋಲನದ ಒತ್ತಾಯ...
ನಿಗದಿಮಾಡಿರುವ ಕನಿಷ್ಠ ವೇತನವು 4...
ಅದರ 5% ಅನ್ನು ಸಾರಿಗೆಗೆ ಖರ್ಚ...
ಇಟ್ಟುಕೊಂಡು ಮೇಲಿನ ದರ ನಿಗ...
ಈಗಿನ ಮಾಸಿಕ ಬಸ್‌ಪಾಸ್ ದರ ಬೆಂ...
ರೂ. ಆಗಿದೆ. ಹಾಗಾದರೆ ಸರ್ಕಾರವು...
ಕನಿಷ್ಠ 20,000 ರೂ.ಗಳಿಗೆ ಕೂ...
ಇಲ್ಲದಿದ್ದರೆ ಕನಿಷ್ಠ ವೇತನ ಪಡೆ...
ಪಡೆಯದವರೂ ಇದ್ದಾರೆ) ಕಾರ್ಮಿಕ...
ಸಂಪಾದನೆಯ ಶೇ.25ನ್ನು ಕೇವಲ...
ವ್ಯಯ ಮಾಡಬೇಕಾಗುತ್ತದೆ.

## ಕಾರ್‌ಗೆ ಸರ್ಕಾರ ... ಕೊಟ್ಟಿದೆ; ಬಸ್‌ಚಾಜಿ...


ಹೌದು ಕಾರ್‌ನಲ್ಲಿ ಓಡಾಡು...
ಅನುದಾನವಿದೆ. ಉದಾಹರಣೆಗೆ ಟಿ...
ಕಂಪೆನಿಗಳಿಗೆ ಅಗ್ಗದ ಬೆಲೆಯ...
ಕೊಟ್ಟಿರುವುದಲ್ಲದೇ, ಹಲವಾರು...
ತೆರಿಗೆಯನ್ನೇ ಕಟ್ಟಬೇಕಿಲ್ಲ ಎಂಬ...
ಸರ್ಕಾರವು ನೀಡಿದೆ. ಭಾರತದಲ್ಲಿ ಕಾರ್‌ಗ...
ಘಟಕ ಆರಂಭಿಸಿದ ಫೋರ್ಡ್ ಕಂಪೆ...
ಕಾಲ ಎಲ್ಲ ಬಗೆಯ ತೆರಿಗೆಗಳಿಂದ ವಿನಾ...
ಆದರೆ ಬಿಎಂಟಿಸಿಯು ಕಳೆದ ವ...
ತೆರಿಗೆಯಾಗಿ 185 ಕೋಟಿ ಹಣ ನ...
ಮೋಟಾರು ವಾಹನ ತೆರಿಗೆ ಕಟ್ಟಿದ...
ನ್ಯಾನೋ ಕಾರಿಗೆ ಗುಜರಾತ್‌ನ ಸರ್ಕಾರ...
ವಿನಾಯಿತಿ, ಸಬ್ಸಿಡಿಗಳ ಮೊತ್ತ 69.0...
ಆದರೆ ಬಿಎಂಟಿಸಿ ನೌಕರರ ವೇತನವ...
ತೆರಿಗೆಗಳಿಂದ ವಿನಾಯಿತಿ ನೀಡಿ ಮ...
ಈಗಿರುವ ದರವನ್ನು 50 ಪೈಸೆ ಆಂದ...
ಇಳಿಸಿ ಎಂದು ಒತ್ತಾಯಿಸುವುದರಲ್ಲಿ...


ಆದರೆ ಇಲ್ಲಿ ಗಮನಿಸಬೇಕಾದ ಒಂ...
ಅದು ನಮ್ಮ ಅಧಿಕಾರಶಾಹಿಯ...
ಕುರಿತಾದ್ದು. ಇಂದು ಸರ್ಕಾರೀ ಸಾರಿಗೆ ಸ...
ಹುದ್ದೆಗಳಲ್ಲಿರುವವರು ಕೆಎಎಸ್...
ಅಧಿಕಾರಿಗಳೇ ಆಗಿದ್ದಾರೆ. ಇಲಾಖಾ ಪ್ರ...
ಮಟ್ಟದ ಹಿರಿಯ ಐಎಎಸ್ ಅಧಿಕಾರಿ...
ನಿರ್ದೇಶಕರಾಗಿರುತ್ತಾರೆ. ಇದರ ನಂತರ...
ಬಡ್ತಿ ಪಡೆದುಕೊಂಡು ಮೇಲೆ ಬಂದ ಅ...
ಈ ಇಡೀ ಕೂಟವು ಸಾಕಷ್ಟು ಉದ...
ಪ್ರದರ್ಶಿಸಿ ಸಂಸ್ಥೆಯ ಆದಾಯ ಹೆಚ್ಚಳ...

ಟಿಟಿಎಂಸಿಗಳೆಂದು ಕರೆಯಲಾಗು...
ಕಟ್ಟಡಗಳನ್ನು ಕಟ್ಟಿ ಬಾಡಿಗೆಗೆ ನೀ...
ಸಂಸ್ಥೆಗಳಂತೆಯೇ ಬಸ್‌ಗಳನ್ನು ಬಾಡಿಗೆ...
ಸುಸಜ್ಜಿತ ವ್ಯವಸ್ಥೆಯು ಬಿಎ...
ಕೆಎಸ್‌ಆರ್‌ಟಿಸಿಗಳಲ್ಲಿದೆ. ತನ್ನ ವೆಬ್...
ಆನ್‌ಲೈನ್ ಬುಕಿಂಗ್‌ಗೆ ವ್ಯವಸ್ಥೆ ಕಲ್ಪಿಸಿದ...
ಮೂಲಕ ಸಂಸ್ಥೆಯು ಸಾಕಷ್ಟು ಹಣ...
ಹೆಚ್ಚು ಹಣ. ಸುರಿದುಕೊಂಡಿರ...
ವೋಲ್ವೋಗಳಂಥವೂ ಹಾಕಿದ ದುಡ್ಡಿಗೆ...
ಇಷ್ಟೆಲ್ಲಾ ಆದ ಮೇಲೂ ಎಲ್ಲಾ...
ಖಾಸಗಿಯವರಿಗಿಂತ ಕೆಎಸ್‌ಆರ್‌ಟಿಸಿ...
ಬಸ್‌ದರ ಹೆಚ್ಚೇ ಇದೆ. ಹೆಚ್ಚಾಗುತ್ತಲೇ...

ಇದಕ್ಕೆ ಸೋರಿಕೆ, ಭ್ರಷ್ಟಾಚಾರ ...
ಅದಕ್ಕಿಂತ ಹೆಚ್ಚು ಕಾರಣ ಸಂಸ್ಥೆಯ...
ನಡೆಸುತ್ತಿರುವುದು. ಬಸ್ ದರ ಏರಿಕೆ...
ಪ್ರತಿಭಟಿಸಿ ಅಧಿಕಾರಿಗಳ ಮುಂದೆ...
ಸರ್ಕಾರದಿಂದ ಯಾವ ಸಬ್ಸಿಡಿ ಅಥವಾ...
ಇಲ್ಲವೆಂಬುದನ್ನು ಮುಂದಿಡುತ್ತಾರೆ. ಅ...
ದೂರಲ್ಲ; ಬದಲಿಗೆ ಹೆಮ್ಮೆಯ ವಿಚಾ...
ಒಂದು ಪೈಸೆಯೂ ನಮಗೆ ಬೇಡ, ...

# ದಲಿತ ವಿರೋಧಿ ಮೋದಿ





## ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಬೂಸಿ ಬಸ್ಯ ನರೇಂದ್ರ ಮೋದಿ ತಾನು ಅಭಿವೃದ್ಧಿ ಮಾಡಿದ್ದೇನೆಂದು ಹೇಳುವ ಗುಜರಾತ್ ರಾಜ್ಯದಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರ ಸ್ಥಿತಿಗತಿಗಳ ಬಗ್ಗೆ ಈ ನಿಮ್ಮ ಪತ್ರಿಕೆ ಸಾಕಷ್ಟು ಬರೆದಿದೆ. ಆದ್ದರಿಂದ ಈಗ ಮೋದಿಯ ರಾಜ್ಯದಲ್ಲಿ 'ಹಿಂದೂ ಧರ್ಮ'ದಲ್ಲಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಅತಿ ಹಿಂದೆ ಉಳಿದಿರುವ ದಲಿತರ ಸ್ಥಿತಿಗತಿ ಹೇಗಿದೆ ಎಂದು ನೋಡುವ ಅವಶ್ಯಕತೆ ಇದೆ.

ಕ್ರೂರ ಜಾತಿ ವ್ಯವಸ್ಥೆಯನ್ನೇ ತನ್ನ ಅಸ್ತಿತ್ವಕ್ಕೆ ಆಧಾರವಾಗಿಟ್ಟುಕೊಂಡಿರುವ ಸಂಘಪರಿವಾರ ಜನರನ್ನು ತಪ್ಪು ದಾರಿಗೆ ಎಳೆಯಲು 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂದು ಸುಳ್ಳು ಹೇಳುತ್ತಿರುತ್ತದೆ. ಈಗ ಎಲ್ಲರಿಗೂ ಗೊತ್ತಿರುವಂತೆ ಸಂಘಪರಿವಾರಿಗಳಿಗೆ ಅಂಬೇಡ್ಕರ್ ನೇತೃತ್ವದಲ್ಲಿ ರೂಪಗೊಂಡ ಜಾತ್ಯತೀತ ಸಂವಿಧಾನದ ಬಗ್ಗೆ ಕಿಂಚಿತ್ತೂ ಮರ್ಯಾದೆ ಇಲ್ಲ. ಬದಲಾಗಿ ಅವರು ಮೊದಲಿನಿಂದಲೂ ಅಂಬೇಡ್ಕರ್ ಅವರ ಸಂವಿಧಾನದ ಬದಲಾಗಿ ಅಸಮಾನತೆ ಮತ್ತು ಅಸ್ಪೃಶ್ಯತೆಯನ್ನು ಪೋಷಿಸುವ ಮನುಸ್ಮೃತಿಯೇ ನಮ್ಮ ದೇಶದ ಸಂವಿಧಾನವಾಗಬೇಕೆಂದು ವಾದಿಸುತ್ತಲೇ ಬಂದಿದ್ದಾರೆ. ಮೋದಿ ಕೂಡ ಅಪ್ಪಟ ಸಂಘಪರಿವಾರಿಯಾದ್ದರಿಂದ ಆತ ಬಾಯಿಮಾತಿಗೆ ದಲಿತರ ಪರ ಮಾತನಾಡಬಹುದೇ ಹೊರತು ಆತನ ಮನಸ್ಸಿನಲ್ಲಿ ದಲಿತೋದ್ಧಾರದ ಬಗ್ಗೆ ಲವಲೇಶವೂ ಕಾಳಜಿ ಇಲ್ಲ. ಅದಕ್ಕೆ ಗುಜರಾತಿನಲ್ಲಿ ದಲಿತರ ಪ್ರಸ್ತುತ ಸ್ಥಿತಿಯೇ ಸಾಕ್ಷಿ ನೀಡುತ್ತದೆ.

ಎಲ್ಲರಿಗೂ ಗೊತ್ತಿರುವಂತೆ ಮೋದಿ ಗುಜರಾತಿನಲ್ಲಿ ಸರ್ದಾರ್ ವಲ್ಲಭಾಯ್ ಪಟೇಲರ ಬೃಹತ್ ಪ್ರತಿಮೆಯನ್ನು ಮೂರು ಸಾವಿರ ಕೋಟಿ ರೂಪಾಯಿಗಳಲ್ಲಿ ಸ್ಥಾಪಿಸುತ್ತೇನೆಂದು ಹೇಳಿದ್ದಾನೆ. ಅದನ್ನು ಅವನು ಮಾಡುತ್ತಾನೋ, ಇಲ್ಲವೋ ಎಂಬುದು ಬೇರೆ ಮಾತು. ಆದರೆ ಅದೇ ಮೋದಿ ಗುಜರಾತಿನ ಮುಖ್ಯಮಂತ್ರಿಯಾದ ಮೇಲೆ ಅಂಬೇಡ್ಕರ್ ಹೆಸರಲ್ಲಿ ಎಷ್ಟು ದುಡ್ಡು ವೆಚ್ಚ ಮಾಡಿದ್ದಾನೆಂದು ನೋಡಿದರೆ ಶಾಕ್ ಆಗುತ್ತದೆ.

2007ರ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ದಲಿತರ ಬೆಂಬಲ ಗಿಟ್ಟಿಸಲು ಮೋದಿ ಗುಜರಾತಿನ ಎಲ್ಲಾ 26 ಜಿಲ್ಲೆಗಳಲ್ಲಿ ಮತ್ತು 225 ತಾಲೂಕುಗಳಲ್ಲಿ ಉಪಯುಕ್ತವಾಗುವ ಅಂಬೇಡ್ಕರ್ ಭವನಗಳನ್ನು ನಿರ್ಮಿಸುತ್ತೇನೆ ಎಂದು ಹೇಳಿದ್ದ. ಇತ್ತೀಚೆಗೆ ಕಿರಿತ್ ರಾಥೋಡ್ ಎಂಬುವವರು ಗುಜರಾತಿ ಎಷ್ಟು ಜಿಲ್ಲೆ ಮತ್ತು ತಾಲೂಕುಗಳಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲಾಗಿದೆ ಎಂದು ಪ್ರಶ್ನಿಸಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರು. ಅವರ ಪ್ರಶ್ನೆಗೆ ಸಿಕ್ಕ ಉತ್ತರ ಕಳೆದ ಹದಿಮೂರು ವರ್ಷಗಳಲ್ಲಿ - ಮೋದಿ ಅಧಿಕಾರಕ್ಕೆ ಬಂದ ನಂತರದಲ್ಲಿ – ಗುಜರಾತಿನಲ್ಲಿ ನಿರ್ಮಿಸಲಾಗಿರುವ ಅಂಬೇಡ್ಕರ್ ಭವನಗಳ ಸಂಖ್ಯೆ ಬರೋಬ್ಬರಿ 12 ಮಾತ್ರ. ಅಂಬೇಡ್ಕರ್ ಭವನಗಳ ಮಾತು ಬದಿಗಿರಲಿ, ಅಂಬೇಡ್ಕರ್ ಪ್ರತಿಮೆಗಳಿಗೆಂದು ಎಷ್ಟು ಹಣವನ್ನು ನೀಡಲಾಗಿದೆ ಎಂಬ ಪ್ರಶ್ನೆಗೂ ಸಿಕ್ಕ ಉತ್ತರ "ಬಜೆಟ್‌ನಲ್ಲಿ ಅಂಬೇಡ್ಕರ್ ಪ್ರತಿಮೆಗೆಂದು ಯಾವ ಹಣವನ್ನೂ ತೆಗೆದಿಟ್ಟಿಲ್ಲ." ಅಂದರೆ, ಅಂಬೇಡ್ಕರ್ ನೆನಪಿನಲ್ಲಿ ಮೋದಿ ನಯಾಪೈಸೆಯನ್ನೂ ಸರ್ಕಾರಿ ಬೊಕ್ಕಸದಿಂದ ಬಿಡುಗಡೆ ಮಾಡಿಲ್ಲ.

ಭವನ, ಪ್ರತಿಮೆ ಬೇಡ ಬಿಡಿ... ಗುಜರಾತಿನಲ್ಲಿ ಅಸ್ಪೃಶ್ಯತೆ, ಅಸಮಾನತೆಯಾದರೂ ಕಡಿಮೆ ಆಗಿ ದಲಿತರ ಬದುಕು ಕಿಂಚಿತ್ತಾದರೂ ಸುಧಾರಿಸಿದೆಯಾ ಎಂದು ನೋಡಿದರೆ ಆಘಾತವಾಗುತ್ತದೆ. ಗುಜರಾತಿನ ಶೇ 98 ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆಯಲ್ಲದೆ ನಗರಗಳನ್ನೂ ವ್ಯಾಪಿಸಿದೆ. ಅಂದಹಾಗೆ ಗುಜರಾತಿನ ನಗರಗಳಲ್ಲಿ ದಲಿತ ಕೇರಿಗಳು ತಲೆ ಎತ್ತಿದ್ದೂ 2002 ಕೋಮುಗಲಭೆಗಳ ನಂತರವೇ. ರಾಜಧಾನಿ ಅಹಮದಾಬಾದಿನಲ್ಲಿ 'ರಾಮದೇವ್‌ನಗರ್' ಎಂಬ ಹೆಸರನ್ನು ಇಟ್ಟುಕೊಂಡಿರುವ ಬಡಾವಣೆಯಲ್ಲಿ ಒಂದು ದಲಿತ ಕೇರಿ ಇದ್ದು ಅಲ್ಲಿ ಮಾತ್ರ ನಿವೃತ್ತ ಐಎಎಸ್ ಅಧಿಕಾರಿ ಪಿ.ಕೆ.ವಲೆರಾ ಎಂಬುವವರಿಗೆ ವಾಸಿಸಲು ಬಾಡಿಗೆ ಮನೆ ಸಿಕ್ಕಿದೆ.

ಇವತ್ತು ಅಸ್ಪೃಶ್ಯತೆ ಗುಜರಾತಿನಲ್ಲಿ ಎಂತಹ ಕರಾಳ ಮುಖ ಪಡೆದಿದೆ ಎಂದರೆ ದಲಿತರ ಕೇರಿಗಳನ್ನು ಕಟ್ಟಲೂ ದಲಿತ ಕಟ್ಟಡ ನಿರ್ಮಾಣ ಸಂಸ್ಥೆಗಳು ಹುಟ್ಟಿಕೊಂಡಿವೆ. ಇದರರ್ಥ ದಲಿತರ ಮನೆ ನಿರ್ಮಿಸಲು ಮೇಲುವರ್ಗದ ಜನರ ಸಂಸ್ಥೆಗಳು ಅಸಹ್ಯ ಪಡುತ್ತಾವೆಂದು.

ಇನ್ನು ದಲಿತರೇ ವಾಸಿಸುವ ನಗರ ದಲಿತ ಪ್ರದೇಶಗಳು ಅಭಿವೃದ್ಧಿಯಿಂದ ದೂರವೇ ಉಳಿದಿವೆ. ಇದಕ್ಕೊಂದು ಉದಾಹರಣೆ ಈಗ ಮೋದಿ ಚುನಾವಣೆಗಳನ್ನು ಎದುರಿಸುತ್ತಿರುವ ವಡೋದರ ನಗರ. ಹದಿನೇಳು ವರ್ಷಗಳ ಹಿಂದೆ ವಡೋದರ ನಗರಪಾಲಿಕೆಯು ಅಂಬೇಡ್ಕರ್ ಅವರ ಪ್ರತಿಮೆಗೆಂದು ಒಂದು ಪ್ರಮುಖ ಸ್ಥಳವನ್ನು ಆಯ್ಕೆ ಮಾಡಿತ್ತು. ಆದರೆ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸುವ ಮುನ್ನ ಮೇಲು ಜಾತಿಯ ಜನರ ಗುಂಪೊಂದು ಆ ಜಾಗದಲ್ಲಿ ಸರ್ದಾರ್ ಪಟೇಲರ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ದಲಿತರ ಆಶಯಗಳಿಗೆ ಅಡ್ಡ ಬಂದಿತ್ತು. ಈಗ ಅಂಬೇಡ್ಕರ್ ಅವರ ಪ್ರತಿಮೆಯನ್ನು ಪದ್ರಾ ಎಂಬ ದಲಿತರ ಕೇರಿಯಲ್ಲಿ ಸ್ಥಾಪಿಸಲಾಗಿದೆ. ಹಾಗೆಯೇ ಹೆಚ್ಚಿನ ದಲಿತ ಕೇರಿಗಳಲ್ಲಿ ಸರಿಯಾದ ರಸ್ತೆ, ಫುಟ್‌ಪಾತ್, ಕುಡಿಯುವ ನೀರು ಇತರೆ ಸೌಲಭ್ಯಗಳ್ಯಾವುವೂ ಇಲ್ಲದಂತಾಗಿದೆ.

ದಲಿತರ ಮೇಲಿನ ದಾಳಿ, ದಮನ ಇತ್ಯಾದಿ ಕೃತ್ಯಗಳೂ ಕುಗ್ಗದೆ ಮುಂದುವರೆದಿದೆ. ಉದಾಹರಣೆಗೆ 2009ರಲ್ಲಿ ದೇಶದಾದ್ಯಂತ ದಲಿತರ ಮೇಲೆ ದೈಹಿಕ ದಾಳಿಗೆ ಸಂಬಂಧಪಟ್ಟಂತೆ 94,559 ಪ್ರಕರಣಗಳು ದಾಖಲಾಗಿದ್ದವು. ಅವುಗಳಲ್ಲಿ 3,813 ಗುಜರಾತಿನಲ್ಲೇ ಸಂಭವಿಸಿದ್ದವು. ಆ ವರ್ಷ ಉತ್ತರಪ್ರದೇಶ ಮತ್ತು ದೆಹಲಿ ಗುಜರಾತಿಗಿಂತ ಹೆಚ್ಚು ಪ್ರಕರಣಗಳನ್ನು ಕಂಡಿದ್ದವು. ಕನಿಷ್ಠ 77 ಹಳ್ಳಿಗಳಲ್ಲಿ ದಲಿತರ ವಿರುದ್ಧ ಸಾಮಾಜಿಕ ಬಹಿಷ್ಕಾರ ಹಾಕಿದ್ದರಿಂದ ಆ ಹಳ್ಳಿಯಲ್ಲಿನ ಎಲ್ಲಾ ದಲಿತರು ತಮ್ಮ ಮನೆಗಳನ್ನು ತೊರೆದು ನಗರದ ಸ್ಲಮ್‌ಗಳನ್ನು ಸೇರಿದ್ದಾರೆ.

ಇಂತಹ ಹತ್ತಾರು ಪ್ರಕರಣಗಳು ಗುಜರಾತಿನಲ್ಲಿ ಪ್ರತಿದಿನ ಸಂಭವಿಸುತ್ತಿರುತ್ತವೆ. ಸರ್ಕಾರೇತರ ಸಂಘಟನೆಗಳ ಪ್ರಕಾರ ಗುಜರಾತಿನ ಪೊಲೀಸರು ಸರಿಯಾಗಿ ದೂರುಗಳನ್ನು ದಾಖಲಿಸಿಕೊಂಡಿದ್ದರೆ ದಲಿತರ ದಮನದಲ್ಲಿ ಗುಜರಾತ್ ಮೊದಲ ಸ್ಥಾನ ಪಡೆಯುತ್ತಿತ್ತು!

ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ದಲಿತರ ಮೇಲಿನ ದಮನಗಳನ್ನು ಕುರಿತಂತೆ ವಿಚಾರಣೆ ನಡೆಸಲು ಪ್ರತ್ಯೇಕ ನ್ಯಾಯಾಲಯಗಳಿರಬೇಕು. ಆದರೆ ಗುಜರಾತಿನಲ್ಲಿ ಅಂತಹ ನ್ಯಾಯಾಲಯಗಳು ಇಲ್ಲವೇ ಇಲ್ಲ. 'ಯಾಕೆ ಹೀಗೆ?' ಎಂದು ಪ್ರಶ್ನಿಸಿದರೆ ಮೋದಿ ಸರ್ಕಾರದಿಂದ ಬರುವ ಉತ್ತರ 'ಅದಕ್ಕೆಲ್ಲ ನಮ್ಮಲ್ಲಿ ಹಣವಿಲ್ಲ.' ಪಟೇಲರ ಪ್ರತಿಮೆಗೆ 3,000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ಸಿದ್ಧವಿರುವ ಮೋದಿಗೆ ದಲಿತರ ಹಿತರಕ್ಷಣೆಗೆ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಲು ಹಣವಿಲ್ಲ ಎಂದರೆ ಆತನ ದಲಿತ ವಿರೋಧಿ ಮನಸ್ಸು ಎಂತಹದ್ದು ಎಂದು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಸರ್ಕಾರಿ ಶಾಲೆಗಳಲ್ಲಿ ದಲಿತ ಮತ್ತು ಅಲ್ಪಸಂಖ್ಯಾತರ ಮಕ್ಕಳನ್ನು ಪ್ರತ್ಯೇಕವಾಗಿ ಕೂರಿಸಲಾಗುತ್ತದೆಯಲ್ಲದೆ ಹಲವೊಮ್ಮೆ ಶೌಚಾಲಯವನ್ನು ಸ್ವಚ್ಛ ಮಾಡುವ ಕೆಲಸವೂ ಆ ಮಕ್ಕಳ ಮೇಲೆ ಬೀಳುತ್ತದೆ. ಹ್ಯೂಮನ್ ರೈಟ್ಸ್ ವಾಚ್ ಎಂಬ ಸಂಸ್ಥೆಯ ಪ್ರಕಾರ ಬಹಳಷ್ಟು ದಲಿತ ಮಕ್ಕಳು ಶಾಲೆಯಲ್ಲಿ ನಡೆಯುವ ಅನ್ಯಾಯವನ್ನು ಸಹಿಸದೇ ಶಾಲೆಯನ್ನು ತೊರೆದು ಕೆಲಸಕ್ಕೆ ಸೇರುತ್ತಿದ್ದಾರೆ. ಆ ಕಾರಣಕ್ಕೂ ಗುಜರಾತಿನಲ್ಲಿ ಶಾಲೆಯಿಂದ ಹೊರ ಉಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ಹೀಗೆ ಬದುಕಿದ್ದಾಗ ಅಸ್ಪೃಶ್ಯತೆ, ಅನ್ಯಾಯ, ಅವಮಾನವನ್ನು ಸಹಿಸಿಕೊಂಡು ಸಾಗುತ್ತಿರುವ ಗುಜರಾತಿನ ದಲಿತರಿಗೆ ಸಾವಿನಲ್ಲೂ ನೆಮ್ಮದಿ ಸಿಗುತ್ತಿಲ್ಲ. ಉದಾಹರಣೆಗೆ 2001ರಲಿ ಹೂಡಾ ಎಂಬ ಹಳ್ಳಿಯಲ್ಲಿ ಎರಡೂವರೆ ವರ್ಷದ ದಲಿತ ಬಾಲಕ ತೀರಿಕೊಂಡ. ಆ ಬಾಲಕನ ಶವವನ್ನು ಸಾರ್ವಜನಿಕ ಸ್ಮಶಾನದಲ್ಲಿ ಹೂಳಿದ ಮನೆಯವರು ಮನೆಗೆ ವಾಪಸ್ ಆದರು. ಆಗ ಬಂತು ಮೇಲುಜಾತಿಯ ಪಟೇಲರ ಅಮಾನುಷ ವರ್ತನೆಯ ಸುದ್ದಿ. ದಲಿತ ಬಾಲಕನನ್ನು ಸಾರ್ವಜನಿಕ ಸ್ಮಶಾನದಲ್ಲಿ ಹೂತಿದ್ದರಿಂದ ಆಕ್ರೋಶಗೊಂಡಿದ್ದ ಪಟೇಲರು ಟ್ರ್ಯಾಕ್ಟರ್ ಬಳಸಿ ಆ ಬಾಲಕನ ಶವವನ್ನು ಹೊರ ತೆಗೆದಿದ್ದರು. ಅವತ್ತಿನಿಂದ ಇವತ್ತಿನವರೆಗೂ ಹೂಡಾದ ದಲಿತರು ಪ್ರತ್ಯೇಕ ಸ್ಮಶಾನಕ್ಕೆ ಜಾಗ ಕೊಡಬೇಕೆಂದು ಬೇಡಿಕೊಳ್ಳುತ್ತಲೇ ಇದ್ದರೂ ಮೋದಿ ಸರ್ಕಾರ ಅದರತ್ತ ಕಿವಿ ಕೊಟ್ಟಿಲ್ಲ. ಇತ್ತೀಚೆಗೆ ಆ ಊರಿನ ಹಿರಿಯ ದಲಿತರೊಬ್ಬರು ತೀರಿಕೊಂಡಾಗ ಅವರ ಶವವನ್ನು ದಲಿತರಿಗೆ ಪ್ರತ್ಯೇಕ ಸ್ಮಶಾನವಿರುವ ಇನ್ನೊಂದು ಹಳ್ಳಿಯಲ್ಲಿ ಹೂತು ಬರಬೇಕಾಯಿತು.


ಇದು ಹೂಡಾ ಹಳ್ಳಿಯ ದಲಿತರಿಗೆ ಮಾತ್ರ ಸೀಮಿತವಾಗಿರುವ ವಿಷಯವಲ್ಲ. ಗುಜರಾತಿನ ಬಹಳಷ್ಟು ಹಳ್ಳಿಗಳಲ್ಲಿ ದಲಿತರಿಗೆ ತಮ್ಮ ಅಗಲಿದವರನ್ನು ಮಣ್ಣು ಮಾಡಲು ಸ್ಥಳವಿಲ್ಲ. ಅಷ್ಟೇ ಅಲ್ಲ ಇದೇ ಸ್ಥಿತಿ ಗುಜರಾತಿನ ಮುಸಲ್ಮಾನರದ್ದೂ ಆಗಿದೆ. ಅವರಿಗೂ ಕಬರಸ್ಥಾನಗಳು ಇಲ್ಲದಂತಾಗಿದೆ.

ಇತ್ತೀಚೆಗೆ ಅಹಮದಾಬಾದಿನಲ್ಲಿ ದಲಿತರ ಸಮಾವೇಶವೊಂದು ನಡೆಯಿತು. ಆ ಸಮಾವೇಶದಲ್ಲಿ "ಗುಜರಾತ್ ಸರ್ಕಾರ ದಲಿತರನ್ನು ಕಡೆಗಣಿಸುತ್ತಿದೆ. ಇಲ್ಲಿನ ದಲಿತರನ್ನು ಅಭಿವೃದ್ಧಿ ಮಾಡಲು ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಿಲ್ಲ" ಎಂದು ಮನವಿಯನ್ನು ಸಿದ್ಧಪಡಿಸಲಾಯಿತಲ್ಲದೆ, ಕನಿಷ್ಠ ಒಂದು ಸಾವಿರ ದಲಿತರು ತಮ್ಮ ಹೆಬ್ಬೆಟ್ಟನ್ನು ರಕ್ತದಲ್ಲಿ ಒತ್ತಿ ಮನವಿಗೆ ಅಂಟಿಸಿ ಅದನ್ನು ರಾಜ್ಯದ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಸಿದ್ದರು.

ಇದೆಲ್ಲದರ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಮೋದಿ ಪ್ರತಿಪಾದಿಸುವ ಹಿಂದೂ ಸಾಮ್ರಾಜ್ಯವನ್ನು ಕುರಿತು ಎಂತಹ ಎಚ್ಚರಿಕೆ ನೀಡಿದ್ದರು ಎಂಬುದನ್ನು ಎಲ್ಲರೂ ನೆನೆದರೆ ಒಳಿತು. ಅಂಬೇಡ್ಕರ್ ಹೀಗೆ ಹೇಳಿದ್ದರು: "ಹಿಂದೂ ರಾಜ್ಯ ಅಸ್ತಿತ್ವಕ್ಕೆ ಬಂದರೆ ಈ ದೇಶಕ್ಕೆ ಒಂದು ಪೀಡೆ ತಗುಲಿದಂತೆ. ಹಿಂದೂಗಳು ಅದೇನನ್ನೇ ಹೇಳಿದರೂ ಹಿಂದೂತ್ವ ಎಂಬುದು ಸ್ವಾತಂತ್ರ್ಯಕ್ಕೆ, ಸಮಾನತೆಗೆ, ಭ್ರಾತೃತ್ವಕ್ಕೆ ವಿರೋಧಿಯಾದದ್ದು. ಅದು ಪ್ರಜಾಪ್ರಭುತ್ವಕ್ಕೆ ವೈರಿಯಾದದ್ದು. ಆದ್ದರಿಂದ ಹಿಂದೂ ರಾಜ್ಯ ಅಸ್ತಿತ್ವಕ್ಕೆ ಬಾರದಂತೆ ತಡೆಯಲು ನಾವೆಲ್ಲರೂ ಪ್ರಯತ್ನಿಸಬೇಕಿದೆ."

ಮೋದಿಯ ಅಮಲೇರಿಸಿಕೊಂಡಿರುವ ದಲಿತರು ಅಂಬೇಡ್ಕರ್ ಅವರ ಮಾತನ್ನು ನೆನಪಿನಲ್ಲಿಟ್ಟುಕೊಳ್ಳುವ ಜರೂರತ್ತು ಈಗಿದೆ...

(ಮಾಹಿತಿ ಆಧಾರ: ಸುಭಾಷ್ ಗಾಟಡೆ ಅವರ 'ಸೋ ಯುರ್ ನಮೋ: ದಲಿತ್ಸ್ ಇನ್ ಸರ್ಚ್ ಆಫ್ 'ಗುಜರಾತ್ ಮಾಡಲ್'')












2002ರ ಗಲಭೆ ನಂತರ ಗುಜರಾತ್ ರಾಜಧಾನಿ ಅಹ್ಮದಾಬಾದ್‌ನಲ್ಲಿ ತಲೆಯೆತ್ತಿದ ದಲಿತರ ಕೇರಿಯ ದೃಶ್ಯಗಳು

ರಂಜನೆ | ಬೋಧನೆ | ಪ್ರಬೋಧನೆ ಲಂಕೇಶ್





(2) ಆಸ್ಪತ್ರೆಯಲ್ಲಿ ಶಿಲ್ಪಾ ನಾಯಕ್



ಸಂಬಂಧಿಯೊಂದಿಗೆ ರೋಧಿಸುತ್ತಿರುವ ಶಿಲ್ಪಾ ತಾಯಿ

# ಸುಂದರ ಭವಿಷ್ಯಕ್ಕೆ ಬೆಂಕಿ ಇಟ್ಟ ಜಾತಿ ಕಿರಾತಕರು!



ಶಿಲ್ಪಾ ನಾಯಕ್

'ನನ್ನನ್ನು ಬಿಟ್ಬಿಡಿ... ದಮ್ಮಯ್ಯ ಅಂತೀನಿ... ನನಗೇನೂ ಮಾಡ್ಬೇಡಿ... ಬೇಕಾದ್ರೆ ಈ ಎಲ್ಲಾ ಒಡವೆಗಳನ್ನು ನಿಮಗೆ ಕೊಡ್ತೀನಿ... ನಮ್ಮಪ್ಪ-ಅಮ್ಮನ ನೋಡ್ಬೇಕು ಬಿಟ್ಬುಡಿ ಎಂದು ಕೈಮುಗಿದು ಬೇಡಿಕೊಂಡರೂ ವೇಲ್ ಹಾಗೂ ಹಗ್ಗದಿಂದ ನನ್ನ ಕುತ್ತಿಗೆ ಬಿಗಿದು, ಚಾಕುವಿನಿಂದ ಚುಚ್ಚಲು ಪ್ರಯತ್ನಿಸಿದರು. ತಪ್ಪಿಸಿಕೊಂಡು ಸುಮಾರು ದೂರ ಓಡಿದೆ. ಅಟ್ಟಿಸಿಕೊಂಡು ಬಂದ್ರು. ಓಡುತ್ತಿರುವಾಗ ಹಳ್ಳಕ್ಕೆ ಬಿದ್ದುಬಿಟ್ಟೆ. ನನ್ ಮೇಲೆ ಪೆಟ್ರೋಲ್ ಸುರಿದ್ರು. ದಯವಿಟ್ಟು ಸಾಯಿಸ್ಬೇಡಿ ಅಣ್ಣಾ ಅಕ್ಕಾ ಅಂದೆ... ಎಷ್ಟೇ ಬೇಡಿಕೊಂಡ್ರೂ ಬಿಡಲಿಲ್ಲ ಬೆಂಕಿ ಹಚ್ಚೇ ಬಿಟ್ರು.'

ಇದು ನಿರ್ದೇಶಕ ಸಾಯಿಪ್ರಕಾಶ್ ಸಿನಿಮಾ ಡೈಲಾಗ್ ಅಲ್ಲ, ಮಳವಳ್ಳಿಯ ಕನ್ನಹಳ್ಳಿಯಲ್ಲಿ ಜಾತಿ ಭೂತಕ್ಕೆ ಬಲಿಯಾದ ಅಮಾಯಕ ಹುಡುಗಿ ಶಿಲ್ಪಾಳ ಆಕ್ರಂದನ. ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾದ ತಪ್ಪಲ್ಲದ ತಪ್ಪಿಗೆ ಆತನ ತಂದೆತಾಯಿ, ಚಿಕ್ಕಪ್ಪ-ಚಿಕ್ಕಮ್ಮರಿಂದ ಬರ್ಬರವಾಗಿ ಸುಟ್ಟು ಕರಕಲಾದ ಶಿಲ್ಪಾಳ ದಾರುಣ ಪ್ರಕರಣ ಕೇವಲ ಒಂದು ಕೊಲೆಯಲ್ಲ, ಜಾತಿಯ ಭೂತಕ್ಕೆ ಬೆಂದುಹೋದ ಒಂದು ಮರ್ಯಾದಾ ಹತ್ಯೆ! ಈ ಹತ್ಯೆಯ ವಿಪರ್ಯಾಸವೆಂದರೆ, ಸಾಮಾನ್ಯವಾಗಿ ತಮಗಿಂತ ಕೀಳುಜಾತಿಯವರನ್ನು ಮದುವೆಯಾದವರಿಗೆ ಮೇಲ್ಜಾತಿಯವರ ಕಿರುಕುಳ, ಬಹಿಷ್ಕಾರಗಳಿದ್ದರೆ ಇಲ್ಲಿ ದಲಿತ ಹುಡುಗನನ್ನು ಮದುವೆಯಾದ ತಪ್ಪಿಗೆ ನಾಯಕ ಜನಾಂಗದ ಶಿಲ್ಪಾ ದಲಿತರಿಂದ ಹೆಣವಾಗಬೇಕಾಗಿ ಬಂದಿದೆ.

ಮೈಸೂರಿನ ಮೇಟಗಳ್ಳಿ ಬಳಿಯಿರುವ ಭೈರವೇಶ್ವರ ನಗರದ ಮಂಗಳಮ್ಮ ಹಾಗೂ ಮುರುಗೇಶ್ ದಂಪತಿಯ ಏಕೈಕ ಪುತ್ರಿಯೇ ಆ ನತದೃಷ್ಟೆ ಶಿಲ್ಪಾ. ಇವರು ಮೂಲತಃ ನಾಯಕ ಜನಾಂಗದವರು. ತಂದೆ-ತಾಯಿ ಇಬ್ಬರೂ ಕೂಲಿ ಕೆಲಸ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದರೆ ನೋಡಲು ಸುಂದರವಾಗಿದ್ದ ಶಿಲ್ಪ ಖಾಸಗಿ ಕಂಪನಿಯೊಂದರಲ್ಲಿ ದುಡಿಯುತ್ತ ಹೆತ್ತವರಿಗೆ ಆಸರೆಯಾಗಿದ್ದಳು. ಆಕೆಯ ಬದುಕಿಗೆ ಪ್ರೀತಿಯ ಹೆಸರಲ್ಲಿ ಅಭಿಜಿತ್ ಎಂಬ ದಲಿತ ಹುಡುಗ ಆಗಮನ ಇಡೀ ಭವಿಷ್ಯವನ್ನೇ ಸುಟ್ಟು ಕರಕಲಾಗಿಸಿದೆ.

ಆದೇ ಭೈರವೇಶ್ವರ ನಗರದಲ್ಲಿ ವಾಸವಿದ್ದ ದಲಿತ ಜನಾಂಗದ ಬಿಲ್ಲಯ್ಯ ಹಾಗೂ ನಾಗಮ್ಮ ದಂಪತಿಗಳ ಮಗ 21ರ ಪೋರ ಅಭಿಜಿತ್ ಹಾಗೂ ಶಿಲ್ಪಾ ನಡುವೆ ಪರಿಚಯ ಉಂಟಾಗಿ ಪ್ರೇಮಕ್ಕೆ ತಿರುಗಿತ್ತು. ಇದಾದನಂತರ ಅಭಿಜಿತ್ ಹಾಗೂ ಶಿಲ್ಪಾ ನಾಯಕ್ ಒಂದಷ್ಟು ತಿಂಗಳ ಕಾಲ ಎಲ್ಲಾ ಪ್ರೇಮಿಗಳಂತೆ ಸಿನಿಮಾ, ಪಾರ್ಕ್ ಎಂದೆಲ್ಲಾ ಅಲೆದಿದ್ದರು. ಈ ವಿಷಯ ಅಭಿಜಿತ್ ತಂದೆ-ತಾಯಿಗೆ ಗೊತ್ತಾಗಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅತ್ತ ದಲಿತ ಜನಾಂಗಕ್ಕೆ ಸೇರಿದ ಅಭಿಜಿತ್‌ನನ್ನು ಮದುವೆಯಾಗುವುದಾಗಿ ಶಿಲ್ಪ ನಾಯಕ್ ತನ್ನ ತಂದೆ-ತಾಯಿಗಳಿಗೆ ಹೇಳಿದಾಗ ಅವರಿಂದಲೂ ವಿರೋಧ ವ್ಯಕ್ತವಾಗಿತ್ತು. ಆದರೆ ಎಲ್ಲಾ ನೈಜ ಪ್ರೇಮಿಗಳಂತೆ ಪ್ರೀತಿಯ ಸೆಳೆತಕ್ಕೆ ಸಿಕ್ಕ ಅಭಿಜಿತ್ ಮತ್ತು ಶಿಲ್ಪ ನಾಯಕ್ ಅಂತಹ ವಿರೋಧಗಳನ್ನು ಲೆಕ್ಕಿಸುವ ಸ್ಥಿತಿಯಲ್ಲಿರಲಿಲ್ಲ. ಅಷ್ಟಕ್ಕೂ ಮೈಸೂರಿನ ಕಾವೇರಿ ಫೋರ್ಡ್ ಕಾರ್ ಷೋರೂಂನಲ್ಲಿ ಕೆಲಸ ಮಾಡಿಕೊಂಡಿದ್ದ ಅಭಿಜಿತ್‌ಗೆ ಹೇಳಿಕೊಳ್ಳುವ ಆದಾಯವೇನೂ ಇರಲಿಲ್ಲ. ಆದರೂ ಶಿಲ್ಪಾ ಅವನ ಮೇಲೆ ಅಪಾರ ನಂಬಿಕೆಯಿಟ್ಟು ಪ್ರೀತಿಸಿದ್ದಳು. ಅಭಿಜಿತ್ ಕೂಡ 'ಯಾರೇ ನಮ್ಮಿಬ್ಬರ ಪ್ರೀತಿಗೆ ವಿರೋಧಿಸಿದರೂ ನಾನು ಮಾತ್ರ ನಿನ್ನ ಕೈ ಬಿಡುವುದಿಲ್ಲ' ಎಂದು ಭರವಸೆ ನೀಡಿದ್ದ.

## ನಂಜನಗೂಡಲ್ಲಿ ಮದುವೆಯಾದರು

ಈ ನಡುವೆ ಅಭಿಜಿತ್‌ನ ತಂದೆತಾಯಿ 'ಶಿಲ್ಪಾಳನ್ನು ಮರೆತು ಬಿಡು. ಅವಳು ನಮ್ಮ ಜಾತಿಗೆ ಸೇರಿದವಳಲ್ಲ. ನೀನೊಂದು ವೇಳೆ ಅವಳನ್ನೇ ಮದುವೆಯಾದರೆ ನಿನ್ನ ತಂಗಿ ಅಭಿಲಾಷಳ ಮದುವೆಗೆ ತೊಂದರೆಯಾಗುತ್ತದೆ. ಬಂಧು-ಬಳಗದವರಲ್ಲೂ ಮರ್ಯಾದೆ ಹೋಗುತ್ತದೆ' ಎಂದೆಲ್ಲಾ ಜಾತಿಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಮಗನ ತಲೆಕೆಡಿಸಲು ಆರಂಭಿಸಿದ್ದರು. ಅತ್ತ ಶಿಲ್ಪಾಳ ಹೆತ್ತವರೂ ಮಗಳಿಗೆ ಸಾಕಷ್ಟು ತಿಳಿಹೇಳಿದ್ದರು. ಯಾವಾಗ ಎರಡೂ ಮನೆಯಲ್ಲಿ ಇಂತಹ ಘಟನೆಗಳು ದಿನನಿತ್ಯ ನಡೆಯತೊಡಗಿದವೋ ಅಭಿಜಿತ್, ಶಿಲ್ಪಾ ಓಡಿಹೋಗಿ ಮದುವೆಯಾಗುವ ತೀರ್ಮಾನಕ್ಕೆ ಬಂದುಬಿಟ್ಟರು. ಈ ಸಂದರ್ಭದಲ್ಲಿ ಅಭಿಜಿತ್ ತನ್ನ ಮತ್ತು ಶಿಲ್ಪಾಳ ಮದುವೆಗೆ ಸಹಾಯ ಮಾಡಬೇಕೆಂದು ಚಿಕ್ಕಪ್ಪ ಪುಟ್ಟಸ್ವಾಮಿ ಹಾಗೂ ಚಿಕ್ಕಮ್ಮ ಪ್ರಮೀಳಾರನ್ನು ಕೇಳಿಕೊಂಡಿದ್ದ. ಅಭಿಜಿತ್ ಪರ ನಿಂತ ಪುಟ್ಟಸ್ವಾಮಿ ಮತ್ತು ಪ್ರಮೀಳಾ 'ನಿನ್ನ ಅಪ್ಪ-ಅಮ್ಮ ಹೊರಹಾಕಿದರೇನಂತೆ ನಮ್ಮ ಮನೆಯಲ್ಲಿರುವಿರಂತೆ' ಎಂದು ಅಭಯ ನೀಡಿದ್ದರು. ಚಿಕ್ಕಪ್ಪ-ಚಿಕ್ಕಮ್ಮನ ಸಹಕಾರ ಸಿಕ್ಕಿದ್ದೇ ತಡ ಜನವರಿ 1ರಂದು ನಂಜನಗೂಡಿನ ಶ್ರೀಕಂಠೇಶ್ವರ ಸನ್ನಿಧಿಯಲ್ಲಿ ಅಭಿಜಿತ್ ಹಾಗೂ ಶಿಲ್ಪಾ ನಾಯಕ್ ಮದುವೆಯಾಗಿದ್ದರು. ಆ ಮದುವೆಯಲ್ಲಿ ಅಭಿಜಿತ್‌ನ ಚಿಕ್ಕಪ್ಪ ಹಾಗೂ ಚಿಕ್ಕಪ್ಪಮ್ಮರೇ ಖುದ್ದು ಹಾಜರಿದ್ದು ಆಶೀರ್ವದಿಸಿದ್ದಲ್ಲದೆ ತಮ್ಮ ಮನೆಯಲ್ಲೇ ನವದಂಪತಿಗಳಿರಲು ಅವಕಾಶ ಮಾಡಿಕೊಟ್ಟಿದ್ದರು. ಮದುವೆಯಾದ ಹೊಸತರಲ್ಲಿ ಇಬ್ಬರು ಖುಷಿಯಲ್ಲೇ ದಿನಗಳನ್ನು ಕಳೆಯುತ್ತಿದ್ದರು.

## ಕಾಡಿದ ತಂದೆ-ತಾಯಿ ನೆನಪು

ತಂದೆ ತಾಯಿ ಮಾತಿಗೆ ಬೆಲೆ ಕೊಡದೆ ತಾನು ಪ್ರೀತಿಸಿದ ಅಭಿಜಿತ್‌ನನ್ನು ಮದುವೆಯಾದ ಶಿಲ್ಪಾಳಿಗೆ ಕೆಲ ತಿಂಗಳಲ್ಲೇ ಹೆತ್ತವರ ನೆನಪು ಕಾಡತೊಡಗಿತ್ತು. ಕಷ್ಟಪಟ್ಟು ಬೆಳೆಸಿದ ಮಗಳು ನಮ್ಮನ್ನು ಕೈಬಿಟ್ಟು ಇಷ್ಟಕ್ಕೆ ವಿರುದ್ಧವಾಗಿ ಮದುವೆಯಾದಳಲ್ಲ ಎಂದು ಕೊರಗುತ್ತಾ ಮುರುಗೇಶ್ ಮತ್ತು ಮಂಗಳಮ್ಮ ನೋವಿನಲ್ಲೇ ದಿನಕಳೆಯುತ್ತಿದ್ದರು. ಈ ಮಧ್ಯೆ ಅಕ್ಕಪಕ್ಕದ ಜನ, ಬಂಧುಗಳು ಕೂಡ ದಲಿತ ಹುಡುಗನನ್ನು ಮದುವೆಯಾದ ಶಿಲ್ಪಾಳ ಬಗ್ಗೆ ಚುಚ್ಚುಮಾತುಗಳನ್ನು ಆಡುತ್ತಿದ್ದರಿಂದ ಬೇಸತ್ತ ಮುರುಗೇಶ್ ತಮಿಳುನಾಡಿನತ್ತ ಮುಖಮಾಡಿದ್ದರು. ತಂದೆ ಮುರುಗೇಶ್ ಇಲ್ಲದ ಸಮಯದಲ್ಲಿ ಆಗಾಗ್ಗೆ ಬಂದು ಹೋಗುತ್ತಿದ್ದ ಶಿಲ್ಪಾ ತಾಯಿಯನ್ನು ಭೇಟಿಯಾಗಿ ಬರುತ್ತಿದ್ದಳು. ಮದುವೆಯಾಗಿ ಮಗಳು ಸುಖದಿಂದ ಇದ್ದಾಳಲ್ಲ ಎಂದುಕೊಂಡ ಮಂಗಳಮ್ಮ ಕೂಡ ಎಲ್ಲವನ್ನೂ ಮರೆತು ಮಗಳೊಂದಿಗೆ ಮಾತು ಮುಂದುವರೆಸಿದ್ದರು.

## ಒಂದಾದರೂ ಅಣ್ಣ-ತಮ್ಮ

ಮದುವೆಯಾಗಿ ಮೂರು ತಿಂಗಳ ನಂತರ ಚಿಕ್ಕಪ್ಪ-ಚಿಕ್ಕಮ್ಮನ ಮನೆ ಬಿಟ್ಟ ಅಭಿಜಿತ್ ಮತ್ತು ಶಿಲ್ಪಾ ಮೈಸೂರಿನ ಬೆಳವಾಡಿಯಲ್ಲಿ ಮನೆ ಮಾಡಿದ್ದರು. 'ಇದಕ್ಕೆ ಶಿಲ್ಪಾಳೇ ಕಾರಣ, ಅವಳೇ ಅಭಿಜಿತ್‌ನ ತಲೆ ಕೆಡಿಸಿ ಬೇರೆ ಮನೆ ಮಾಡಿಸಿದ್ದಾಳೆ' ಎಂಬ ಅನುಮಾನ ಚಿಕ್ಕಪ್ಪ ಪುಟ್ಟಸ್ವಾಮಿಯಲ್ಲಿ ಮೊಳೆತದ್ದೇ ತಡ ಆತ ತನ್ನ ಅಣ್ಣ ಬಿಲ್ಲಯ್ಯನತ್ತ (ಅಭಿಜಿತ್‌ನ ತಂದೆ) ಮತ್ತೆ ಬಾಂಧವ್ಯ ಬೆಳೆಸಲು ಆರಂಭಿಸಿದ್ದ. ಆದರೆ 'ನನ್ನ ಮಗ ಅನ್ಯ ಜಾತಿಯವಳನ್ನು ಮದುವೆಯಾಗಲು ನೀನೇ ಕಾರಣ. ನೀವಿಬ್ಬರೂ ಸೇರಿ ನನ್ನ ಮರ್ಯಾದೆ ಕಳೆದಿದ್ದೀರಿ' ಎಂದೆಲ್ಲಾ ಬಿಲ್ಲಯ್ಯ ಪುಟ್ಟಸ್ವಾಮಿ-ಪ್ರಮೀಳರನ್ನು ಬೈದರೂ ಹೇಗಾದರು ಮಾಡಿ ಅವರಿಬ್ಬರನ್ನು ಬೇರೆ ಮಾಡಬೇಕೆನ್ನುವ ಕಾರಣಕ್ಕೆ ತಮ್ಮನೊಡನೆ ರಾಜಿ ಮಾಡಿಕೊಂಡಿದ್ದ ಅಣ್ಣನ ಗೋಳಾಟಕ್ಕೆ ಮರುಳಾದ ತಮ್ಮ ಪುಟ್ಟಸ್ವಾಮಿ ಕೂಡಾ ತಾನೇ ನಿಂತು ಮಾಡಿಸಿದ್ದ ಅಭಿಜಿತ್ ಮತ್ತು ಶಿಲ್ಪಾಳ ಮದುವೆಯನ್ನು ಮುರಿಯುವ ಪ್ರಯತ್ನಕ್ಕೆ ಮುಂದಾದ. ಅಭಿಜಿತ್‌ನಿಂದ ಶಿಲ್ಪಾಳನ್ನು ದೂರಮಾಡಿ ಅಣ್ಣನ ಜೊತೆ ಬಾಂಧವ್ಯ ಸರಿಮಾಡಿಕೊಳ್ಳುವ ಆಲೋಚನೆಯಲ್ಲಿ ದಿನನಿತ್ಯ ಮುಳುಗಿದ ಪುಟ್ಟಸ್ವಾಮಿ ಹೇಗಾದರೂ ಸರಿಯೇ ಇದಕ್ಕೊಂದು ಅಂತ್ಯ ಹಾಡಬೇಕೆಂದುಕೊಂಡ. ಇದಕ್ಕೆ ಅವನ ಹೆಂಡತಿ ಪ್ರಮೀಳಾ ಕೂಡ ಸಾಥ್ ನೀಡಿದ್ದಳು. ಹೀಗೆ ಕೆಲವೇ ದಿನಗಳ ಹಿಂದೆ ಪ್ರೇಮಿಗಳ ಪಾಲಿಗೆ ಆಪದ್ಬಾಂಧವರಂತೆ ನೆರವಾಗಿ ಮದುವೆ ಮಾಡಿಸಿದ್ದ ಚಿಕ್ಕಮ್ಮ-ಚಿಕ್ಕಪ್ಪರೇ ಈಗ ವಿಲನ್‌ಗಳಾಗಲು ಅಣಿಯಾಗಿದ್ದರು.


ಅಣ್ಣ ಬಿಲ್ಲಯ್ಯನಿಗೆ ಅಭಿಜಿತ್-ಶಿಲ್ಪಾ ದಾಂಪತ್ಯವನ್ನು ಹೇಗಾದರೂ ಮಾಡಿ ಮುರಿಯುವ ಭರವಸೆ ನೀಡಿದ ಪುಟ್ಟಸ್ವಾಮಿ ಅದಕ್ಕೋಸ್ಕರ ಪ್ಲಾನ್ ಹೆಣೆಯತೊಡಗಿದ್ದ. ಕೊನೆಗೆ ಶಿಲ್ಪಾಳನ್ನು ಮುಗಿಸುವುದೇ ಸರಿಯಾದ ದಾರಿ ಎಂಬ ತೀರ್ಮಾನಕ್ಕೆ ಅಣ್ಣ ತಮ್ಮಂದಿರು ಬಂದಿದ್ದರು.

ತಮ್ಮ ಕೃತ್ಯಕ್ಕೆ ಅವರು ಆಯ್ದುಕೊಂಡದ್ದು ಇದೇ ಏಪ್ರಿಲ್ 22ನೇ ತಾರೀಕನ್ನು. ಅಂದು ಚಿಕ್ಕಪ್ಪ ಪುಟ್ಟಸ್ವಾಮಿ ಹಾಗೂ ಪ್ರಮೀಳಾ ಅಭಿಜಿತ್‌ನ ಬೆಳವಾಡಿಯ ಮನೆಗೆ ಬಂದವರೆ 'ನಾವಿಬ್ಬರೂ ಮುಡುಕುತೊರೆ ಜಾತ್ರೆಗೆ ಹೋಗುತ್ತಿದ್ದೇವೆ, ಜೊತೆಯಲ್ಲಿ ಶಿಲ್ಪಾಳನ್ನು ಕಳುಹಿಸು' ಎಂದು ಅಭಿಜಿತ್‌ಗೆ ಹೇಳಿದ್ದಾರೆ. ಶಿಲ್ಪಾಳನ್ನು ಮುಗಿಸಲು ತನ್ನ ತಂದೆ-ತಾಯಿ, ಚಿಕ್ಕಪ್ಪ-ಚಿಕ್ಕಮ್ಮ ಸ್ಕೆಚ್ ಹಾಕಿದ್ದಾರೆಂದು ತಿಳಿಯದ ಅಭಿಜಿತ್ ಅವರೊಂದಿಗೆ ಶಿಲ್ಪಾಳನ್ನು ಕಳುಹಿಸಿಕೊಟ್ಟಿದ್ದ. ಅಂದು ದೇವಸ್ಥಾನಕ್ಕೆ ಹೋಗಿ ಬಂದ ಮೂವರೂ ನೇಣೂರಿನ ಸಂಬಂಧಿಕರ ಮನೆಯಲ್ಲಿ ತಂಗಿದ್ದಾರೆ. ನಂತರದ ದಿನ ಮಳವಳ್ಳಿ, ಬ್ಲಫ್ ಮೊದಲಾದ ಕಡೆ ಶಿಲ್ಪಾಳನ್ನು ಸುತ್ತಿಸಿದ ಪುಟ್ಟಸ್ವಾಮಿ ಹಾಗೂ ಪ್ರಮೀಳಾ ಅಂದು ರಾತ್ರಿ ನೆಲಮಾಕನಹಳ್ಳಿಯ ಮತ್ತೊಬ್ಬರ ಸಂಬಂಧಿಕರ ಮನೆಯಲ್ಲಿ ತಂಗಿದ್ದಾರೆ.


ಅಂದು ರಾತ್ರಿಯೇ ಅಣ್ಣ-ತಮ್ಮ ಮಾತನಾಡಿಕೊಂಡು ಬೆಳಗಿ ಜಾವವೇ ಶಿಲ್ಪಾಳನ್ನು ಕೊಲೆ ಮಾಡಿಬಿಡಲು ಸ್ಕೆಚ್ ಹಾಕಿಕೊಂಡಿದ್ದರು. 'ಬೆಳಕು ಹರಿಯುವುದರೊಳಗೆ ಮೈಸೂರಿಗೆ ತೆರಳಬೇಕು' ಎಂಬ ಸಬೂಬು ಹೇಳಿದ ಪುಟ್ಟಸ್ವಾಮಿ ಸಂಬಂಧಿಕರ ಮನೆಯಿಂದ ಶಿಲ್ಪಾಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೊರಟಿದ್ದ. ಜೊತೆಗೆ ಅವನ ಹೆಂಡತಿ ಪ್ರಮೀಳಾ ಕೂಡಾ ಬೈಕನ್ನೇರಿದ್ದಳು. ಅತ್ತ ಅಭಿಜಿತ್‌ನ ತಂದೆ ಬಿಲ್ಲಯ್ಯ ಕೂಡ ಮೈಸೂರಿನಿಂದ ಅದೇ ಸಮಯಕ್ಕೆ ಹೊರಟಿದ್ದ. ಇಬ್ಬರೂ ಸೇರಿ ಮಾರ್ಗ ಮಧ್ಯೆ ಶಿಲ್ಪಾಳನ್ನು ಹತ್ಯೆ ಮಾಡುವ ಪ್ಲಾನ್ ಮೊದಲೇ ಹಾಕಿಕೊಂಡಿದ್ದರು. ಆದರೆ ಮೈಸೂರಿನಿಂದ ಹೊರಟ ಬಿಲ್ಲಯ್ಯ ಬರುವುದು ತಡವಾಗಿತ್ತು. ಬೆಳಗಾದರೆ ಶಿಲ್ಪಾಳನ್ನು ಮುಗಿಸಲು ಸಾಧ್ಯವಿಲ್ಲವೆಂದು ತಿಳಿದ ಪುಟ್ಟಸ್ವಾಮಿ ಹಾಗೂ ಪ್ರಮೀಳಾ ಕನ್ನಹಳ್ಳಿ ಮತ್ತು ಉಪ್ಪನಹಳ್ಳಿಗಳ ನಡುವೆ ಬೈಕ್ ನಿಲ್ಲಿಸಿದ್ದ. ಮೂತ್ರ ವಿಸರ್ಜನೆಯ ನೆಪದಲ್ಲಿ ಪ್ರಮೀಳಾ, ಶಿಲ್ಪಳನ್ನು ಕರೆದೊಯ್ದಿದ್ದಳು. ಹಿಂದಿನಿಂದ ಬಂದ ಪುಟ್ಟಸ್ವಾಮಿ ಮೊದಲೇ ನಿರ್ಧರಿಸಿಕೊಂಡಂತೆ ವೇಲ್‌ನಿಂದ ಶಿಲ್ಪಾಳ ಕತ್ತನ್ನು ಬಿಗಿದು ಕೊಲೆ ಮಾಡಲು ಯತ್ನಿಸಿದ್ದ. ಅದ್ಹೇಗೊ ಅವರಿಂದ ತಪ್ಪಿಸಿಕೊಂಡ ಶಿಲ್ಪಾ ಓಡತೊಡಗಿದವಳು ಮೇಲೆ ಉಲ್ಲೇಖಿಸಿದಂತೆ ಪರಿಪರಿಯಾಗಿ ಬೇಡಿಕೊಂಡಿದ್ದಳು. ಶಿಲ್ಪಾಳ ಆಕ್ರಂದನಕ್ಕೆ ಕರಗದ ದುರುಳ ಪುಟ್ಟಸ್ವಾಮಿ ಹಾಗೂ ಪ್ರಮೀಳಾ ಕೊಲೆ ಮಾಡಿ ಸುಡಲೆಂದು ತಂದಿದ್ದ ಪೆಟ್ರೋಲನ್ನು ಶಿಲ್ಪಾಳ ಮೇಲೆ ಸುರಿದು ಬೆಂಕಿ ಹಚ್ಚಿ ಅಲ್ಲಿಯೇ ಹಳ್ಳಕ್ಕೆ ತಳ್ಳಿ ಹೊರಟುಹೋಗಿದ್ದರು. ಕಿರುಗಾವಲುವರೆಗೆ ಬೈಕ್‌ನಲ್ಲಿ ಬಂದ ಪುಟ್ಟಸ್ವಾಮಿ ಪತ್ನಿ ಪ್ರಮೀಳಾಳನ್ನು ಮೈಸೂರಿಗೆ ಹೋಗುವಂತೆ ತಿಳಿಸಿ ತಾನು ಬನ್ನೂರಿಗೆ ತೆರಳಿ ಅಲ್ಲಿಗೆ ಬಂದ ಅಣ್ಣ ಬಿಲ್ಲಯ್ಯನ ಜೊತೆ ಬೆಂಗಳೂರಿಗೆ ಪರಾರಿಯಾಗಿದ್ದ.

ಬೆಂಕಿಯ ಜ್ವಾಲೆಗೆ ಸಿಲುಕಿ ನರಳುತ್ತಿದ್ದ ಶಿಲ್ಪಾಳನ್ನು ಬೆಳಿಗ್ಗೆ ಜಮೀನಿನ ಕಡೆ ಬಂದ ಕನ್ನಹಳ್ಳಿ ಗ್ರಾಮಸ್ಥರು ಗಮನಿಸಿ ಕಿರುಗಾವಲು ಪೊಲೀಸ್ ಠಾಣೆಗೆ ಸುದ್ದಿ ಮುಟ್ಟಿಸಿದ್ದರು. ಸ್ಥಳಕ್ಕೆ ಬಂದ ಎಸ್‌ಐ ದೇವರಾಜು ಶಿಲ್ಪಾಳನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದರಾದರೂ ಶೇ.60ರಷ್ಟು ಸುಟ್ಟುಗಾಯಗಳಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆತಂದಿದ್ದರು. ಅಲ್ಲಿಯೂ ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನ 1 ಗಂಟೆ ಸುಮಾರಿಗೆ ಶಿಲ್ಪಾ ಕೊನೆಯುಸಿರೆಳೆದಿದ್ದಳು.


ಮಗಳ ದೇಹವನ್ನು ಮೈಸೂರಿಗೆ ತೆಗೆದುಕೊಂಡು ಹೋಗಲಿಕ್ಕೂ ಹಣವಿಲ್ಲದೆ ಶಿಲ್ಪಾಳ ಹೆತ್ತವರು ಸ್ಥಳೀಯರ ಮುಖಂಡರು, ಪತ್ರಕರ್ತರ ನೆರವಿನಿಂದ ಮಂಡ್ಯದಲ್ಲಿ ಶಿಲ್ಪಾ ಅಂತ್ಯಕ್ರಿಯೆ ನಡೆಸಿದ್ದು ಆ ಅಮಾಯಕ ಕುಟುಂಬದ ಅಸಹಾಯಕತೆಗೆ ಸಾಕ್ಷಿಯಾಗಿತ್ತು.




ಪುಟ್ಟಸ್ವಾಮಿ



ಪ್ರಮೀಳ



ಬಿಲ್ಲಯ್ಯ



ನಾಗಮ್ಮ

## ಸಾಯುವ ಮುನ್ನ ಶಿಲ್ಪಾ ಹೇಳಿದ್ದು.....

'ನಾವು ಅಂತರ್ಜಾತಿ ಮದುವೆಯಾದದ್ದು ಅಭಿಜಿತ್ ಮನೆಯವರಿಗೆ ಇಷ್ಟವಿರಲಿಲ್ಲ. ಚಿಕ್ಕತ್ತೆ ಚಿಕ್ಕಮಾವ ದೇವಸ್ಥಾನಕ್ಕೆ ಕರೆದೊಯ್ದರು. ಗುರುವಾರ ಮುಂಜಾನೆ ಇನ್ನು ನಿದ್ದೆಯಲ್ಲಿದ್ದಾಗಲೇ ನೆಲಮಾಕನಹಳ್ಳಿಯಿಂದ ಮೈಸೂರಿಗೆ ಹೋಗೋಣವೆಂದು ಬೈಕ್‌ನಲ್ಲಿ ಕರೆದುಕೊಂಡು ಹೊರಟು, ಮಾರ್ಗ ಮಧ್ಯೆ ಬೈಕ್ ನಿಲ್ಲಿಸಿ ಹಗ್ಗದಿಂದ ಕತ್ತು ಬಿಗಿದರು. ನಾನು ತಪ್ಪಿಸಿಕೊಂಡು ಓಡಿದರೂ ಬಿಡದೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು' ಎಂದು ಜಿಲ್ಲಾಸ್ಪತ್ರೆಯಲ್ಲಿ ಶಿಲ್ಪಾ ವೈದ್ಯರ ಸಮ್ಮುಖದಲ್ಲಿ ಮಂಡ್ಯ ಎಸ್ಪಿ ಭೂಷಣ್ ಜಿ.ಬೊರಸೆಯವರಿಗೆ ಹೇಳಿಕೆ ನೀಡಿದ್ದಾಳೆ. ಆ ಪ್ರಕಾರ ಸೆಕ್ಷನ್ 302 ಪ್ರಕಾರ ಕೊಲೆ ಪ್ರಕರಣ ದಾಖಲಾಗಿದೆ.

ಎಸ್ಪಿ ಭೂಷಣ್ ಬೊರಸೆಯವರು ಪ್ರಕರಣದ ತನಿಖೆ ನಡೆಸಲು ಮಂಡ್ಯ ಡಿವೈಎಸ್ಪಿ ಶೋಭರಾಣಿ, ಮಳವಳ್ಳಿ ಡಿವೈಎಸ್ಪಿ ಅಪ್ಪಣ್ಣನಾಯಕ್, ಇನ್ಸ್‌ಪೆಕ್ಟರ್ ದೇವರಾಜು, ಮಂಡ್ಯ ಪಶ್ಚಿಮಠಾಣೆ ಪಿಎಸ್ಐ ವೆಂಕಟೇಗೌಡ ನೇತೃತ್ವದಲ್ಲಿ ತಂಡ ರಚಿಸಿದ್ದಾರೆ. ಆ ಟೀಮು ಅಂದು ರಾತ್ರಿಯೇ ಅಭಿಜಿತ್ ಚಿಕ್ಕಮ್ಮ ಪ್ರಮೀಳಾ ಹಾಗೂ ತಾಯಿ ನಾಗಮ್ಮರನ್ನು ಬಂಧಿಸಿತ್ತು. ಅದಾದ ನಂತರದ ದಿನ ಅಂದರೆ ಭಾನುವಾರದಂದು ಬೆಂಗಳೂರಿನಲ್ಲಿ ಅವಿತುಕೊಂಡಿದ್ದ ಬಿಲ್ಲಯ್ಯ ಹಾಗೂ ಪುಟ್ಟಸ್ವಾಮಿಯನ್ನೂ ಬಂಧಿಸಿದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ತನಿಖೆಯ ವೇಳೆ ಶಿಲ್ಪಾಳ ಹತ್ಯೆಯಲ್ಲಿ ಪತಿ ಅಭಿಜಿತ್ ಪಾತ್ರ ಏನೂ ಇಲ್ಲದಿರುವುದು ತಿಳಿದುಬಂದಿದ್ದರಿಂದ ಆತನನ್ನು ಬಿಡುಗಡೆಗೊಳಿಸಲಾಗಿದೆ.

### ಜಾತಿ ಎಂಬ ಪೆಡಂಭೂತ

'ಅನ್ಯ ಜಾತಿಗೆ ಸೇರಿದ ಹುಡುಗಿಯನ್ನು ತನ್ನ ಮಗ ಅಭಿಜಿತ್ ಮದುವೆಯಾಗಿದ್ದರಿಂದ ಮಗಳಾದ ಅಭಿಲಾಷ ಮದುವೆಗೆ ಅಡ್ಡಿಯಾಗಿತ್ತು. ಬಂಧು-ಬಳಗ ಸಮಾಜದಲ್ಲಿ ಮರ್ಯಾದೆ ಹೋಯಿತೆಂಬ ಕಾರಣದಿಂದ ಶಿಲ್ಪಾಳನ್ನು ಹತ್ಯೆ ಮಾಡಿದೆವು' ಅಂತ ಶಿಲ್ಪಾಳ ಮಾವ ಬಿಲ್ಲಯ್ಯ ಹಾಗೂ ಪುಟ್ಟಸ್ವಾಮಿ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿರೋದು ಜಾತಿ ವ್ಯವಸ್ಥೆಯ ಕರಾಳತೆಯನ್ನು ತೆರೆದಿಡುತ್ತದೆ.

ನಾಯಕ ಜನಾಂಗಕ್ಕೆ ಸೇರಿದ 19ರ ಹರೆಯದ ಶಿಲ್ಪಾ ನೋಡಲು ಸ್ಫುರದ್ರೂಪಿಯಾಗಿದ್ದಳು. ಸಿನಿಮಾದಲ್ಲಿ ನಟಿಸುವ ಆಸೆಯಿತ್ತು. ಕಳೆದ ವರ್ಷ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದ ಸಿನಿಮಾವೊಂದರ ಹಾಡಿನಲ್ಲಿ ಕುಣಿದಿದ್ದಳು. ಅಂತಹ ಚಂದದ ಹುಡುಗಿಯನ್ನು ಜಾತಿಯ ಕಾರಣಕ್ಕೆ ಕೊಂದು ಹಾಕಿದ ಬಗ್ಗೆ ಕೆಲವೊಂದು ಸಂಘಟನೆಗಳು ಪ್ರತಿಭಟನೆ ನಡೆಸಿ ಖಂಡಿಸಿವೆ. ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ.

ಎರಡು ವರ್ಷಗಳ ಹಿಂದೆ ಮದ್ದೂರು ತಾಲ್ಲೂಕಿನ ಆಬಲವಾಡಿ ಗ್ರಾಮದಲ್ಲಿ ಒಕ್ಕಲಿಗರ ಜಾತಿಗೆ ಸೇರಿದ ಸುವರ್ಣ ಎಂಬಾಕೆ ತನ್ನದೇ ಗ್ರಾಮದ ದಲಿತ ಜನಾಂಗದ ಗೋವಿಂದರಾಜು ಎಂಬಾತನನ್ನು ಪ್ರೀತಿಸಿದ ತಪ್ಪಿಗೆ ಆಕೆಯ ತಂದೆ ಮರ್ಯಾದೆ ಹತ್ಯೆಯ ಹೆಸರಿನಲ್ಲಿ ಬರ್ಬರವಾಗಿ ಆಕೆಯನ್ನು ಕೊಂದು ಹಾಕಿದ್ದ. ಈ ಘಟನೆ ಇನ್ನು ಜನರ ನೆನಪಿನಲ್ಲಿರುವಾಗಲೇ ದಲಿತ ಜನಾಂಗಕ್ಕೆ ಸೇರಿದ ಬಿಲ್ಲಯ್ಯ ಹಾಗೂ ಪುಟ್ಟಸ್ವಾಮಿ ಸೊಸೆ ಶಿಲ್ಪಾಳನ್ನು ಮರ್ಯಾದೆ ಹತ್ಯೆಯ ಹೆಸರಿನಲ್ಲಿ ಕೊಂದುಹಾಕಿದ್ದಾರೆ.


ಶೋಷಿತ ಸಮುದಾಯದಲ್ಲೂ ಜಾತಿ ವ್ಯವಸ್ಥೆ ಆಳವಾಗಿ ಬೇರೂರಿರುವುದು ಈ ಘಟನೆಯಿಂದ ಸಾಬೀತಾಗಿದೆ. ನಾಯಕ ಜನಾಂಗದ ಶಿಲ್ಪಾ ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗಿದ್ದಾಳೆ. ಮುಂದುವರೆದ, ಆಧುನಿಕ ಎಂದೆಲ್ಲಾ ಕರೆಯಲ್ಪಡುವ ಪ್ರಸ್ತುತ ಸಮಾಜದಲ್ಲಿ ಜಾತಿವ್ಯವಸ್ಥೆಯನ್ನು ಪ್ರೋಷಿಸಲಾಗುತ್ತಿದೆ. ನಿಜಕ್ಕೂ ಇದೊಂದು ಅಪಾಯಕಾರಿ ಸಂಗತಿ. ಪ್ರಸ್ತುತ ಸಮಾಜದಲ್ಲಿ ಜಾತಿ-ಜಾತಿಗಳ ನಡುವೆ ದೊಡ್ಡ ಕಂದಕ ಸೃಷ್ಟಿಯಾಗುತ್ತಿರುವುದು, ಅಂತರ್ಜಾತಿ ವಿವಾಹವಾದರೆ ಕೊಂದರೆ ಎಂಬ ಭಾವನೆ ಬೇರೂರುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ತನ್ನನ್ನು ತಾನು ನಾಗರಿಕ ಎಂದುಕೊಳ್ಳುವ ಸಮಾಜ ಈಗಲಾದರೂ ಎಚ್ಚೆತ್ತುಕೊಂಡು ಜಾತಿ ವ್ಯವಸ್ಥೆಯ ವಿರುದ್ಧ ಪರ್ಯಾಯ ಜನಜಾಗೃತಿ ಚಳವಳಿ ಕಟ್ಟಲು ಮುಂದಾದರೆ ಅದರ ಕ್ರೌರ್ಯಕ್ಕೆ ಬಲಿಯಾದ ಶಿಲ್ಪಾಳಂತಹ ಮುಗ್ಧ ಅಮಾಯಕ ಜೀವಗಳಿಗೆ ಮಿಡಿದಂತಾಗುತ್ತದೆ. 'ಅಯ್ಯೋ, ಪಾಪ, ಹೀಗಾಗಬಾರದಿತ್ತು' ಎಂಬಿತ್ಯಾದಿ ಅಸಹಾಯಕ ಸಾಂತ್ವನದ ಉದ್ಗಾರಗಳಿಂದ ಬದಲಾವಣೆ ಸಾಧ್ಯವಿಲ್ಲ. ಜಾತ್ಯತೀತ ಮತ್ತು ಸೌಹಾರ್ದತೆಯ ನೆಲೆ ಎನಿಸಿಕೊಳ್ಳುವ ಮಂಡ್ಯದಲ್ಲೇ ಅಂತಹದ್ದೊಂದು ಅಮಾನವೀಯ ಕೃತ್ಯ ನಡೆದರೂ ಜನಪ್ರತಿನಿಧಿಗಳಾದ ಸಚಿವ ಅಂಬರೀಶ್ ಆಗಲಿ, ಎರಡನೇ ಬಾರಿ ಇಲ್ಲಿಂದ ಸಂಸದೆಯಾಗಲು ಓಡಾಡುತ್ತಿರುವ ಹೆಚ್ಚಾಗಿ ತಾನೂ ಒಬ್ಬ ಹೆಣ್ಣೇ ಆದ ರಮ್ಯಾ ಆಗಲಿ ಇತ್ತ ತಲೆ ಹಾಕದಿರುವುದು ಬಲು ದೊಡ್ಡ ವಿಪರ್ಯಾಸ.

● ಮಂಡ್ಯ ನಾಗೇಶ್

# ಉಗಿ.. ಉಗಿ.. ಹಾಯುತಿದೆ ಊರು


**ಸಿಂಧನೂರು ತಾಲ್ಲೂಕಿನ ಭೋಗಾಪುರ ಗ್ರಾಮ ಎರಡು ಸಾವಿರಕ್ಕೂ ಅಧಿಕ ಜನರನ್ನು ಹೊಂದಿದೆ. ಇಲ್ಲಿನ ಜನರು ಸುಗ್ಗಿಯಲ್ಲಿ ಊರಲ್ಲಿದ್ದು, ಬೇಸಿಗೆಯಲ್ಲಿ ಅರ್ಧದಷ್ಟು ಜನ ಭಾರದ ಮನಸ್ಸಿನೊಂದಿಗೆ ಬೆಂಗಳೂರಿಗೆ ಗುಳೆ ಹೊರಡುತ್ತಾರೆ. ಮಳೆ ಮುನಿದರೆ ಊರಲ್ಲಿ ಬರ ಪೂರಾ ಆವರಿಸಿಕೊಳ್ಳುತ್ತದೆ. ಬದುಕು ಮತ್ತಷ್ಟು ನಗ್ಗಿಕೊಳ್ಳುತ್ತದೆ**





ನಾವು ಆ ಊರಿಗೆ ಹೋದಾಗ ಬಿಸಿಲ ಮಳೆ ಸುರಿಯುತ್ತಲೇ ಇತ್ತು. ನೆತ್ತಿಯ ಮೇಲೆ ಕೈಯಿಟ್ಟರೆ ಸಾಕು ಬಿಸಿ. ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಚೂರುಪಾರು ಬಿದ್ದಿದ್ದ ಜಾಲಿಗಿಡದ ನೆರಳು ಮೈಸುಟ್ಟುಕೊಂಡು ಅಳುತ್ತಲೇ ಇರುವುದು ಕಂಡುಬಂತು. ಡುಕ್ಕುಬಿದ್ದ ಮನೆಗಳು ಕೆಮ್ಮಣ್ಣಿನಿಂದ ಅರೆಬರೆ ಉಳಿಸಿಕೊಂಡಿದ್ದವು. ತುಂಬು ಆಮ ಗುಡಿಸಲುಗಳು ಮನೆ ಕನಸನ್ನು ಕಾಣುತ್ತಿದ್ದವು. ಪೇಂಟು ಹೊಡೆದುಕೊಂಡು ತಲೆಗೆ ಕಳಸ, ಕಿವಿಗೆ ಮೈಕು, ಕುಂಬಿಗೆ ಮರ್ಕ್ಯುರಿ ಲೈಟು ಮುಡಿದುಕೊಂಡಿದ್ದ ಮೂಕದುರ್ಗಮ್ಮನ ಗುಡಿ ಲಕ.. ಲಕ.. ಹೊಳೆಯುತ್ತಿತ್ತು. ಅದರ ಗೋಡೆಯ ನೆರಳಿಗೆ ನಾಲ್ಕಾರು ಜನ ಸೌ ನಂಬರ್ ಬೀಡಿಯಿಂದ ಝುರಿ ಮೇಲೆ ಝುರಿ ಎಳೆಯುತ್ತಿದ್ದರು. ಚೆಡ್ಡಿ ಹಾಕದ ಹುಡುಗರು ಸಿಂಬಳ ಸುರಿಸುತ್ತಲೇ ತೂತುಬಿದ್ದ ನೆರಳಿನ ಕಡೆ ಓಡುತ್ತಿದ್ದರು.

ಆ ಹೆಣ್ಣುಮಗಳೊಬ್ಬಳು ಗುಂಡ್ರಿಕಿಯಲ್ಲಿ ತಳಸೇರಿದ್ದ ನೀರಿನಲ್ಲೇ ಬಟ್ಟೆ ತೋಯಿಸಲು ಹೆಣಗುತ್ತಿದ್ದಳು. ಒಂಟಿ ಗುಡಿಸಲಿನ ಬಾಗಿಲಿಗೆ ಗದ್ದಕ್ಕೆ ಕೈಯಿಟ್ಟು ಕುಳಿತಿದ್ದ ಮುದುಕಿ ದುಃಖದ ಗುಡಿಸಲನ್ನು ತಲೆಮೇಲೆ ಹೊತ್ತು ಕುಳಿತಂತೆ ಕಂಡುಬಂದಳು. ಕತ್ತರಿಕುಡುಗೋಲಿನಿಂದ ಸೊಪ್ಪೆಯನ್ನು ಕತ್ತರಿಸುತ್ತಿದ್ದ ಆತ ಎಲ್ಲ ದನಗಳಿಗೆ ಮೇವು ಹಾಕಿ ಆಯಸ್ಸು ಕಳೆದುಕೊಳ್ಳುತ್ತಿರುವ ಬಣವೆ ಕಡೆಗೆ ದುಃಖಿಸಿದಂತೆ ನೋಡುತ್ತಿದ್ದ..







ನಡು ಮಧ್ಯಾಹ್ನ ಊರು; ಜ್ವರಹತ್ತಿ ಕೌದಿಯೊದ್ದು ಮಲಗಿದಂತೆ ಕಂಡುಬಂತು. ತುಸು ಎಲೆ ಅಲ್ಲಾಡಿಸದ ಗಿಡಗಳು ನಿಸ್ತೇಜವಾಗಿ ಕವಳು ಹತ್ತಿದಂತೆ ನಿಂತಿದ್ದವು. ದಂಟನ್ನು ಬೇಕುಬೇಡ ತಿನ್ನುತ್ತಿದ್ದ ದನಗಳು ಗ್ವಾದಲಿಗೆ ಮುಖಮಾಡಿ ನಮಲುತ್ತ ಏನೋ ಹೇಳಲು ಹೊರಟಿದ್ದವು. ಊರಪಕ್ಕದಲ್ಲಿ ಚೋಳುಗುಡ್ಡ ಮಾತ್ರ ಮೈಕಾಸಿಕೊಂಡು ಸಿಟ್ಟಿಗೆ ಬಂದಿತ್ತು. ಚೂರು ಗಾಳಿಬೀಸಿದರೆ ಸಾಕು ಬಿಸಿ ಉಗುಳುತ್ತಿತ್ತು. ಜಾಲಿ ಗಿಡದ ನಡುವೆ ಒಂಟಿ ಕಾಲಿನಲ್ಲಿ ನಿಂತಿದ್ದ ನೀರಿನ ತೊಟ್ಟಿ ಅರೆಹೊಟ್ಟೆಯಲ್ಲಿತ್ತು. ಅಲ್ಲಲ್ಲಿ ಚದುರಿದಂತೆ ಹೊರೆಗಟ್ಟಲೆ ಹುರಲೆ ಕಟ್ಟಿಗೆಗಳು ಮಟ್ಟಸ ಜೋಡಿಸಲ್ಪಟ್ಟಿದ್ದವು. ಮನೆ ಗೋಡೆಗೆ, ಗುಂಡು ಕಲ್ಲುಗಳ ಮೇಲೆ ತಟ್ಟಿದ್ದ ಕುಳ್ಳುಗಳು ಟಿಕಳಿಯಂತೆ ಕಂಡುಬಂದವು.

ಅಂಕುಡೊಂಕಿನ ದಾರಿಯಲ್ಲಿ ಮೈಕುಣಿಸುತ್ತಾ ನಾವು ಪಾರಾ ಊರ ಹೊರಗಿನ ನೀರಿನ ತೊಟ್ಟಿಯತ್ತ ಹೊರಟೆವು. ಸೈಕಲ್‌ಗೆ ಅಡ್ಡಗಾಲು ಹಾಕಿ ನಿಂತಿದ್ದ ಹುಡುಗನೊಬ್ಬ ಆತನೊಂದಿಗೆ ನಗಾಡುತ್ತಿದ್ದ ಏಳೆಂಟು ಹುಡುಗರ ಗುಂಪು ನಜರಿಗೆ ಬಿದ್ದರು. ಅವರು ನಮ್ಮನ್ನು ಸಂಶಯಾಸ್ಪದ ಕಣ್ಣುಗಳಿಂದ ಗಮನಿಸಿದರು. ಬೈಕ್‌ನಿಂದ ಇಳಿದು ಮಾತನಾಡಿಸಬೇಕೆನ್ನುವಷ್ಟರಲ್ಲೇ ಕ್ರಾಪು ತಿದ್ದಿದ ಕುಳ್ಳ ಹುಡುಗನೊಬ್ಬ 'ಯಾರಾ ಹಿಡ್ಕಂದೋಗರು ಬಂದಾರಲೇ' ಎಂದು ಕೂಗುತ್ತಲೇ ಛಂಗನೆ ಜಿಗಿದು ಓಡಿದ. ಆ ಶಬ್ದ ಕಿವಿಗೆ ಬಿದ್ದೊಡನೆ ನಿಂತ ಹುಡುಗ್ರೆಲ್ಲಾ ಪೆಂಟಿ ಕಿತ್ತಿದರು. ಅನಾಮತ್ತ ಹುಡುಗರ ಪ್ರತಿಕ್ರಿಯೆಗೆ ನಾವು ಹೌಹಾರಿದೆವು. ಅಲ್ಲಿಯೇ ಪಕ್ಕದಲ್ಲಿನ ಹಾಳು ಶಾಲಾ ಕಟ್ಟಡ ಬಳಿ ತುಸು ಬಿಸಿಲ ಬೇಗೆ ಆರಿಸಿಕೊಳ್ಳಲು ಕುಳಿತುಕೊಂಡೆವು. ಒರತೆಯ ನೀರಿನಂತೆ ಪುನಃ ನಾಲ್ಕಾರು ಹುಡುಗರು ಅಲ್ಲಿ ಸೇರಿಕೊಂಡರು.

ಚೆಡ್ಡಿಯ ಮೇಲೆ ಟಾವೆಲ್ಲು ಸುತ್ತಿಕೊಂಡಿದ್ದ ಹುಡುಗನೊಬ್ಬ ಬಹಳ ಗಮನ ಸೆಳೆದ. ಆತನನ್ನು ಮಾತಿಗೆಳೆಯುತ್ತಲೇ ತಾನು ಕುರಿಕಾಯುತ್ತೇನೆಂದು, ಶಾಲೆಗೆ ಹೋಗುವುದಿಲ್ಲ ಎಂದು ತರಹೇವಾರಿ ಪ್ರಬಂಧ ಮಂಡಿಸಿದ. ನಾವು ಏನೇನೋ ಮಾತು ಉರಿಹೊಡೆಯುತ್ತ ಬೆಟ್ಟದ ಕನಸುಗಳನ್ನು ಆತನೆಡೆಗೆ ತೂರಲು ಹೊರಡುತ್ತಿದ್ದಂತೆ 'ಸಾರ್ ಮನ್ಯಾಗ್ಯ ತ್ರಾಸೈತ್ರಿ' ಎಂದು ನಮ್ಮ ಕಾಮೆಂಟ್ರಿ ಬಂದ್ ಮಾಡಿಸಿ, ಶಾಲಾ ಕಂಬಕ್ಕೆ ಆತು ನಿಂತ.

ಈ ಗ್ರಾಮದ ಅನೇಕ ಹುಡುಗರು ಶಾಲೆ ತಪ್ಪಿಸಿಕೊಂಡಿದ್ದಾರೆ. ಮನೆಯ ಬಡತನ ಅವರನ್ನು ಕುರಿದೊಡ್ಡಿಗೋ ಬೆಂಗಳೂರಿನ ಕೊಳಗೇರಿಗೆ ದಬ್ಬಿದೆ. ಹೊಟ್ಟೆ ಹೊರೆಯಲು ಕೂಲಿ ಹುಡುಕಿ ಹೊರಟ ಅನೇಕ ಕುಟುಂಬಗಳು ಬೆಂಗಳೂರಿನ ಯಾವುದೋ ಮೂಲೆಯಲ್ಲಿ ಕೆಲ ದಿನ ನೆಲೆ ಕಂಡುಕೊಳ್ಳುತ್ತವೆ. ಅವರೊಂದಿಗೆ ಮಕ್ಕಳು ಸೇರಿಕೊಳ್ಳುತ್ತವೆ. ಸ್ವಲ್ಪ ದಿನ ಊರಲ್ಲಿ, ಇನ್ನೊಂದಿಷ್ಟು ದಿನ ಬೆಂಗಳೂರಿನ ಗಲ್ಲಿಗಳಲ್ಲಿ ಮಕ್ಕಳ ಶಾಲಾದಿನಗಳು ಪುಗಸಟ್ಟೆ ಖರ್ಚಾಗುತ್ತವೆ. ತಮ್ಮಪ್ಪ ಅವ್ವನೊಂದಿಗೆ ಬೆಂಗಳೂರಿನಲ್ಲಿದ್ದ ಆನಂದ ಸೂಟಿಗೆ ಊರಿಗೆ ಬಂದಿದ್ದ. ತಾನು ಬೆಂಗಳೂರಿನಲ್ಲಿ ಓದುತ್ತಿರುವುದಾಗಿಯೂ ಮರುವರ್ಷದಿಂದ ಆರನೇ ಇಯತ್ತೆಗೆ ಊರಿನ ಶಾಲೆಯಲ್ಲಿಯೇ ಹೆಸರು ಹಚ್ಚುವುದಾಗಿ ಹೇಳಿದ. ಆತನ ಮಾತನ್ನು ನಾವು ನಂಬಿದೆವು.


ಬೇಸಿಗೆಯಲ್ಲಿ ಈ ಊರಲ್ಲಿ ಕೂಲಿ ಕೆಲಸ ಮರುಭೂಮಿಯಲ್ಲಿ ಓಯಾಸಿಸ್‌ನಂತೆ. ಊರಷ್ಟೆ ಅಲ್ಲಾ, ಅಡವಿಯೆಲ್ಲಾ ಸಣ್ಣ ಹಸಿರು ಗರಿಕೆ ಇಲ್ಲದೆ ಬಣಗುಟ್ಟುತ್ತಿರುತ್ತದೆ. ಜಾನುವಾರುಗಳು ಮನೆಯ ಯಜಮಾನ ಹಾಕಿದಷ್ಟೆ ಮೇವು ತಿಂದು ಇರಬೇಕು. ಗುಡ್ಡ, ಗವಾರ, ಗೋಮಾಳಗಳಲ್ಲಿ ಬಿಸಿಲ ಕೋಲು ಹೊರತುಪಡಿಸಿ ಏನೂ ಸಿಗುವುದಿಲ್ಲ. ಊರಲ್ಲಿ ಇರುವ ನಾಲ್ಕಾರು ಬೋರುಗಳಲ್ಲೂ ಸಪ್ಪನ ನೀರು. ಕೈಬೋರಿನಿಂದ ಒಂದು ಕೊಡ ನೀರು ತುಂಬಿಸುವಷ್ಟರಲ್ಲಿ ಧೇಕು ಹತ್ತುತ್ತದೆ. ದನಕರುಗಳಿಗೆ ನೀರು ಕುಡಿಸುವಷ್ಟರಲ್ಲಿ ಹೈರಾಣ. ಮೇಲ್ತೊಟ್ಟಿಯಿಂದ ನೀರೇನು ಬರುತ್ತದೆ. ಕರೆಂಟ್ ಕೈಕೊಟ್ಟರೆ ಅಲೆದಾಟ.

ಊರ ಒಳದಾರಿಯಲ್ಲಿ ಸಾಗುತ್ತಿದ್ದಂತೆ ಬಿಸಿಲಿನಿಂದಾಗಿ ತಲೆಮೇಲೆ ಟಾವೆಲ್ಲು ಹೊದ್ದು ಚಂಬು ಹಿಡಿದು ನಡೆಯುತ್ತಿದ್ದ ಇಬ್ಬರು ಮಹಿಳೆಯರು, ಊರ ಹೊರಗಿನ ತಿಪ್ಪೆಗುಂಡಿ ಪ್ರದೇಶದ ಜಾಲಿಯ ಕಡೆಗೆ ಹೋಗುತ್ತಿರುವುದು ಕಂಡುಬಂತು. ಸಾರ್ವಜನಿಕ ಪಾಯಿಖಾನೆ ಇಲ್ಲದಕ್ಕೆ ಹೆಣ್ಮಕ್ಕಳೆಲ್ಲಾ ಶೌಚಕ್ಕೆ ಆ ಕಡೆ ಹೋಗುತ್ತಾರೆಂದು ಊರವರೊಬ್ಬರು ಹೇಳಿದರು.

ಬಸ್ಸುಗಳು ನಿಯಮ ತಪ್ಪಿ ಬರುತ್ತವೆ, ಹೋಗುತ್ತವೆ. ಟಾಂಟಾಂಗಳು ಅಪತ್ಕಾಲಕ್ಕೆ ಒಂದಿಷ್ಟು ಆಸರೆಯಾಗಿವೆ. ಬರಬೇಕಾದ ಬಸ್ಸು ಬೈ ಹೇಳಿದಾಗ ಶಾಲಾ, ಕಾಲೇಜ್ ಮಕ್ಕಳ ಹಾಜರಾತಿ ಪುಸ್ತಕದಲ್ಲಿ ಆಬ್ಸೆಂಟ್ ಬೀಳುವುದು ಕಾಮನ್. ಊರು ಮೂಕದುರ್ಗಮ್ಮನ ಜಾತ್ರೆಗೆ ಬೆಂಗಳೂರಿನಲ್ಲಿ ದುಡಿದುಕೊಂಡು ಬಂದವರ ದುಡ್ಡಿನಲ್ಲಿ ಕಳೆಗಟ್ಟುತ್ತದೆ. ಬಹಳಷ್ಟು ದಿನ ಬರ, ಕೆಲಸದ ಕೊರತೆಯಿಂದ ನರಳುತ್ತದೆ. ಹಿಂದಿನಂತೆ ದೊಡ್ಡ ಉಮೇದಾಗಲಿ, ಶಕ್ತಿಯಾಗಲಿ ಊರಲ್ಲಿ ಉಳಿದಿಲ್ಲ. ಆಗೇವು ತುಂಬಿ ತುಳುಕುತ್ತಿದ್ದ ಮನೆಗಳು ಜೋಳ ಕಡ ಪಡೆಯುವ ಪರಿಸ್ಥಿತಿಗೆ ತಲುಪಿವೆ. ಏಕ್ ರೂಪಾಯಿ ಕೇಜಿ ಅಕ್ಕಿಗೆ ರೇಷನ್ ಕಾರ್ಡಗಳು ಆಗಾಗ ಓಡಾಡುತ್ತವೆ. ಊರ ಹೊಲಗಳು ಮಳೆ ಮತ್ತು ಖಾಜಿ ಮಾಡುವವರಿಲ್ಲದೆ ದಿನದಿನಕ್ಕೆ ಬೀಳಾಗುತ್ತಿದ್ದರೆ, ಹಸಿವು, ಬಡತನ ಮತ್ತಷ್ಟು ಬೆನ್ನಿಗೆ ಇರಿದಿವೆ. ಮಕ್ಕಳ ಮದುವೆ, ಮುಂಜಿಗಂತ ಸಾಲ ಮಾಡಿದವರು ಲೇವಾದೇವಿಗಾರರಿಗಂಜಿ ಊರು ಬಿಟ್ಟರೆ, ಪಟ್ಟಣಗಳಲ್ಲಿ ಏನೋ ಎಂತೋ ಸಿಕ್ಕ ಕೆಲಸ ಮಾಡಿ ನಸುಗಾಗುವಷ್ಟರಲ್ಲಿ ಊರು ಸೇರಿಕೊಳ್ಳುವ ಕೆಲವರು ಮೈ ದಣಿಕಿಗೆ ನಾಲ್ಕಾರು ಪೆಗ್ಗು ಗುಟುಕರಿಸಿ ಕನವರಿಸುತ್ತಲೇ ಇರುತ್ತಾರಂತೆ ಹಿರಿಯರೊಬ್ಬರು ಕುಗ್ಗಿದ ದನಿಯಲ್ಲಿ ಹೇಳಿದರು. ಚೋಳು ಗುಡ್ಡದ ತುದಿಗೆ ಹೊರಟು ಡಬುಗಳ್ಳಿ ಬಳಿ ನಿಂತು ಕಣ್ಣಾಡಿಸಿದರೆ ಊರೆಲ್ಲಾ ಉಗಿ.. ಉಗಿ.. ಹಾಯುತ್ತಿರುವಂತೆ, ಅದು ನನ್ ಸುಡಬಾರ್ದಾಗೋ ಎಂದು ಚೀರಾಡಿ.. ಚೀರಾಡಿ.. ಅಳುತ್ತಿರುವಂತೆ... ನೀರಿಲ್ಲದೆ ದನಗಳು ಅಂಬಾ ಕೂಗುಹಾಕುತ್ತಿದ್ದಂತೆ.. ಕಂಡುಬಂದಿತು. ಈ ಊರ ಜನರಿಗೆ ಸರ್ಕಾರ ಏನೇನೋ ಕೊಟ್ಟಿದೆಯಂತೆ. ಅದನ್ನು ಯಾವ ಮಾಪನದಲ್ಲಿ ಅಳತೆ ಮಾಡಬೇಕೋ ತಿಳಿಯುತ್ತಿಲ್ಲ.



● ಬಸವರಾಜ ಹಳ್ಳಿ, ಹಸಮಕಲ್



# ‘ಖಂಡಿತವಾಗ್ಲೂ, ಮೋದಿ ಮುಂದಿನ ಪ್ರಧಾನಿ ಆಗಲ್ಲ!’ ಕೊನೆಗಾಲಕ್ಕೆ ಕಾಶಿಯಾತ್ರೆ!


ವಾರಾಣಸಿಯಲ್ಲಿ ನಾಮಪತ್ರ ಸಲ್ಲಿಸುವಾಗ ಆಯೋಜಿಸಿದ್ದ ಅದ್ದೂರಿ. ಸಮಾರಂಭದಲ್ಲಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ, ಆಟಾನಕ್ಕಾಗಿ ಮಾಧ್ಯಮಗಳೊಂದಿಗೆ ಸಂವಾದ ನಡೆಸಲು ಮುಂದಾಗಿದ್ದರು. ದೇಶದೆಡೆಯಿಂದ ಪವಿತ್ರ ನಗರಿಯಲ್ಲಿ ಕಿಕ್ಕಿರಿದಿದ್ದ ಬಿಜೆಪಿ ಕಾರ್ಯಕರ್ತರ ಗದ್ದಲದ ನಡುವೆ ಅಡೆತಡೆಯಿಲ್ಲದೆ ನಿರಂತರವಾಗಿ ಸಮಾರಂಭವನ್ನು ಪ್ರಸಾರ ಮಾಡುವುದು ಮಾಧ್ಯಮಗಳಿಗೆ ಸಾಧ್ಯವಿರದ ಮಾತಾಗಿತ್ತು.


ಎಲ್ಲಾ ನ್ಯೂಸ್ ಚಾನೆಲ್‌ಗಳು (ಕಡೇ ಪಕ್ಷ ಬಹುತೇಕ) ಸಮಾರಂಭವನ್ನು ದೊಡ್ಡದಾಗಿ ಬಿತ್ತರಿಸಿದವು. ಆ ಸಂದರ್ಭದಲ್ಲಿ ಮಾತನಾಡುತ್ತಾ ಮೋದಿ ‘ಇದೇ ಪ್ರಪ್ರಥಮ ಬಾರಿಗೆ ಎನ್‌ಡಿಎ 30 ಪಕ್ಷಗಳೊಂದಿಗೆ ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡಿದೆ’ ಎಂದರು. ಹೌದು, ಬರೋಬ್ಬರಿ ಮೂವತ್ತು!


ಮೋದಿ ಕಾರ್ಯಕ್ರಮದ ನಡುವೆಯೇ ಇದ್ದಕ್ಕಿದ್ದಂತೆ ಎಲ್ಲಾ ಚಾನೆಲ್‌ಗಳು, ಅಸ್ಸಾಮ್‌ನಲ್ಲಿ ಮತ ಚಲಾಯಿಸಿ ಮತಗಟ್ಟೆಯಿಂದ ಹೊರಬರುತ್ತಿದ್ದ ಪ್ರಧಾನಿ ಡಾ. ಮನಮೋಹನ್ ಸಿಂಗ್‌ರತ್ತ ತಮ್ಮ ಕ್ಯಾಮೆರಾ ಹೊರಳಿಸಿದವು. ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತಾ ‘ದೇಶದಲ್ಲಿ ಮೋದಿ ಹವಾ ಅನ್ನುವಂತದ್ದೇನೂ ಇಲ್ಲ’ ಎಂದು ತಳ್ಳಿಹಾಕಿದ ಪ್ರಧಾನಿ ‘ಅಂತಹದ್ದು ಇದ್ದರೆ ಅದು ಮಾಧ್ಯಮಗಳ ಸೃಷ್ಟಿ ಮಾತ್ರ’ ಎಂದರು.

ಸ್ವಲ್ಪ ಹಿಂದಕ್ಕೆ ನೋಡುವುದಾದರೆ, 15ನೇ ಲೋಕಸಭಾ ಚುನಾವಣೆಯಲ್ಲಿ (2009) ಎನ್‌ಡಿಎ ಪಕ್ಷಗಳು ಎಲ್ಲಾ 543 ಕ್ಷೇತ್ರಗಳಲ್ಲೂ ಸ್ಪರ್ಧಿಸಿದ್ದವು, ಆದರೆ ಎನ್‌ಡಿಎ ಗೆದ್ದದ್ದು ಕೇವಲ 144 ಕ್ಷೇತ್ರಗಳಲ್ಲಿ ಮಾತ್ರ.

ಅಷ್ಟು ಪ್ರತಿಕ್ರಿಯಿಸಿ ಪ್ರಧಾನಿ ತಮ್ಮ ಪೂರ್ವನಿಯೋಜಿತ ಕೆಲಸಗಳತ್ತ ಹೊರಡುತ್ತಿದ್ದಂತೆಯೇ ಕ್ಯಾಮೆರಾಗಳು ಮತ್ತೆ ವಾರಾಣಸಿಯಲ್ಲಿದ್ದ ಮೋದಿಯತ್ತ ಹೊರಳಿದವು. ಆ ವೇಳೆಗೆ ತಾನಾಗಿಯೇ ವಾರಾಣಸಿಗೆ ಬಂದಿಲ್ಲ, ಬದಲಾಗಿ ಗಂಗಾ ಮಾತೆಯೇ ತನ್ನನ್ನು ಕರೆಸಿಕೊಂಡಿದ್ದಾಳೆ ಅಂತ ಮೋದಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ.







ಈಗ ನಮ್ಮ ಮುಂದೆ ಎರಡು ಸಂಪೂರ್ಣ ತದ್ವಿರುದ್ಧ ಹೇಳಿಕೆಗಳಿವೆ. ಒಂದು ನಮ್ಮ ಪ್ರಧಾನಿ ಡಾ. ಮನಮೋಹನ್ ಸಿಂಗ್‌ರದ್ದು- ಯಾವುದೇ ವಿಷಯದಲ್ಲಿ ಅವರು ತಪ್ಪಾಗಿ ನುಡಿದಿದ್ದಾರೆ ಎಂದು ಇದುವರೆವಿಗೂ ಸಾಬೀತಾಗಿಲ್ಲ, ಅವರ ಹೇಳಿಕೆಗಳು ಅಳೆದು ತೂಗಿದಂತಿರುತ್ತವೆ ಮಾತ್ರವಲ್ಲ ಮಾಹಿತಿಪೂರ್ಣವಾಗಿರುತ್ತವೆ. ಮತ್ತೊಂದು ಬಿಜೆಪಿಯ ಪ್ರಧಾನಿ ಅಭ್ಯರ್ಥಿಯದ್ದು- ಯಾವುದೇ ವಿಷಯವನ್ನೂ ಅವರು ಸರಿಯಾಗಿ ಹೇಳಿದ್ದಾರೆ ಎಂದು ಸಾಬೀತಾಗಿಲ್ಲ, ಆತನ ಹೇಳಿಕೆಗಳು ಆಳತೆಯಿಲ್ಲದ ಅಸಂಬದ್ಧವಾದಂತವು. ಇವರಿಬ್ಬರಲ್ಲಿ ಯಾರನ್ನು ನಂಬುವುದು?

ಮಾಧ್ಯಮಗಳು ವಿಪರೀತವಾಗಿ ಆಗ್ರಹಿಸುತ್ತಿರುವುದರಿಂದ ಮತ್ತು ಸ್ವತಃ ವ್ಯಕ್ತಿಯೇ ನಾವೆಲ್ಲಾ ಅದನ್ನು ಒಪ್ಪಿಕೊಳ್ಳಬೇಕೆಂದು ಹಂಬಲಿಸುವುದರಿಂದ ಇರಲಿ ಅಂತ ಒಮ್ಮೆ ಮೋದಿ ಅಲೆ ಮೇಲೆ ಸವಾರಿ ಮಾಡೋಣ. ಸದ್ಯದ ಪರಿಸ್ಥಿತಿಯಲ್ಲಿ ಎನ್‌ಡಿಎ ಮೈತ್ರಿಯ ಸಂಪೂರ್ಣ ಮಾಹಿತಿಯ ವಾಸ್ತವಿಕತೆಯನ್ನು ನೋಡೋಣ.


ಮೋದಿ ಹೇಳಿದ 29 ಪಕ್ಷಗಳಲ್ಲಿ (ಬಿಜೆಪಿಯನ್ನು ಬಿಟ್ಟು) 7 ಪಕ್ಷಗಳು ಒಂದೇ ಒಂದು ಕ್ಷೇತ್ರದಲ್ಲೂ ಸ್ಪರ್ಧಿಸುತ್ತಿಲ್ಲ, 10 ಪಕ್ಷಗಳು ತಲಾ ಒಂದೊಂದು ಕ್ಷೇತ್ರದಲ್ಲಿ ಮಾತ್ರ ಸ್ಪರ್ಧಿಸಿದರೆ 4 ಪಾರ್ಟಿಗಳು ಮಾತ್ರ 2-5 ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿವೆ. 4 ಪಕ್ಷಗಳು 6-10 ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೆ ಕೇವಲ ನಾಲ್ಕು ಪಕ್ಷಗಳು ಮಾತ್ರ 10ಕ್ಕಿಂತ ಜಾಸ್ತಿ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿವೆ. *(ಬಾಕ್ಸ್ ನೋಡಿ)*


ಮತ್ತೊಮ್ಮೆ ಹಳೆಯ ನೆನಪುಗಳಿಗೆ ಜಾರುವುದಾದರೆ, 15ನೇ ಲೋಕಸಭಾ ಚುನಾವಣೆಯಲ್ಲಿ (2009) ಎನ್‌ಡಿಎ ಎಲ್ಲಾ 543 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಕೇವಲ 144 ಕ್ಷೇತ್ರಗಳಲ್ಲಿ ಮಾತ್ರ ಗೆದ್ದಿತ್ತು, ಈಗಿನ ಚುನಾವಣೆಯಲ್ಲಿ ಎನ್‌ಡಿಎ ಗೆಲ್ಲುತ್ತದೆ ಎಂದು ಭಾವಿಸಿದರೂ, ಈ ಎಲ್ಲಾ ಪಕ್ಷಗಳು 144 ಸಂಖ್ಯಾ ಬಲದಲ್ಲಿದ್ದಕ್ಕಿಂತ ದುಪ್ಪಟ್ಟು ಸ್ಥಾನಗಳಲ್ಲಿ ಗೆಲ್ಲುತ್ತವೆ ಎಂದುಕೊಳ್ಳುವುದು ಎಷ್ಟು ವಾಸ್ತವಿಕ? ಅದೂ ಬಿಜೆಪಿ 423 ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸುತ್ತಿರುವಾಗ (ಕಳೆದ ಚುನಾವಣೆಗಿಂತ ಐದು ಕಡಿಮೆ ಸ್ಥಾನಗಳಲ್ಲಿ ಅದು ಸ್ಪರ್ಧಿಸುತ್ತಿದೆ). ಇಲ್ಲಿ ಮತ್ತೊಂದು ಸಂಗತಿಯನ್ನು ನೆನಪಿಸಿಕೊಳ್ಳುವುದು ಒಳಿತು, ಏನೆಂದರೆ 2009ರಲ್ಲಿ ಸ್ಪರ್ಧಿಸಿದ್ದ 428 ಕ್ಷೇತ್ರಗಳ ಪೈಕಿ 170 ಕ್ಷೇತ್ರಗಳಲ್ಲಿ ಬಿಜೆಪಿ ಠೇವಣಿಯನ್ನೂ ಉಳಿಸಿಕೊಂಡಿರಲಿಲ್ಲ!


ಚುನಾವಣಾಪೂರ್ವ ಸಮೀಕ್ಷೆಗಳು ಎನ್‌ಡಿಎ 200ಕ್ಕಿಂತ ತುಸು ಜಾಸ್ತಿ ಸೀಟುಗಳನ್ನು ಗೆಲ್ಲಬಹುದೆಂದು ಹೇಳುತ್ತಿವೆ. ಈ ಚುನಾವಣಾಪೂರ್ವ ಸಮೀಕ್ಷೆಗಳು ಪ್ರತಿ ಫಲಿತಾಂಶದ ನಂತರ ಚುನಾವಣಾ ವಾಸ್ತವಿಕತೆಗಿಂತ ಬಲು ದೂರದಲ್ಲಿರುತ್ತವೆ ಮತ್ತು ಪ್ರತಿ ಸಲ ಭಾರೀ ಉತ್ಪ್ರೇಕ್ಷೆಯಿಂದ ಕೂಡಿರುತ್ತವೆ ಎನ್ನುವುದು ಬೇರೆ ಮಾತು. ಈಗ ಮತ್ತೊಂದು ಬಾರಿ (ನಮಗೆ ಇಷ್ಟವಿಲ್ಲದಿದ್ದರೂ) ಮೋದಿ ಅಲೆ ಮತ್ತು ಸಮೀಕ್ಷೆಗಳನ್ನು ಒಪ್ಪಿಕೊಳ್ಳೋಣ ಆಗಲೂ ಎನ್‌ಡಿಎ ತನ್ನ ಇತಿಹಾಸದಲ್ಲಿ ಅತ್ಯುನ್ನತ ಸಾಧನೆ ಮಾಡಿದರೂ ಹೆಚ್ಚೆಂದರೆ 200ರ ಹಾದಿಯ ಆಸುಪಾಸಿನ ಸೀಟುಗಳಲ್ಲಿ ಮಾತ್ರ ಗೆಲ್ಲಬಹುದು. ಹೋಗಲಿ, ಅವರಿಗೆ ‘ಬೆನಿಫಿಟ್ ಆಫ್ ಡೌಟ್’ನ ಮೇಲೆ ಮತ್ತೂ ಒಂದಿಪ್ಪತ್ತು ಹೆಚ್ಚುವರಿ ಸ್ಥಾನಗಳ ಗ್ರೇಸ್ ನೀಡೋಣ. ಆಗಲೂ ಎನ್‌ಡಿಎ ಸರ್ಕಾರ ರಚಿಸಲು ಬೇಕಾಗಿರುವ ಮ್ಯಾಜಿಕ್ ನಂಬರ್ 272ಕ್ಕೆ 52 ಸ್ಥಾನಗಳ ಕೊರತೆ ಅನುಭವಿಸಬೇಕಾಗುತ್ತೆ. ಹಾಗಾಗಿ, ಒಂದೊಮ್ಮೆ ಮೋದಿ ಅಲೆ ಎನ್ನುವುದು ಇದ್ದರೂ ಎನ್‌ಡಿಎ ಮೈತ್ರಿಕೂಟದ ಹಿಂದಿನ ಸಾಮರ್ಥ್ಯ (2009ರಲ್ಲಿ ಗೆದ್ದ 144) ದ್ವಿಗುಣವಾಗದು.


ಆಗ ಚುನಾವಣಾ ನಂತರದ ಎನ್‌ಡಿಎ ಮೈತ್ರಿಕೂಟದ ಮಿತ್ರರು ಯಾರ್‍ಯಾರಾಗಲಿದ್ದಾರೆ? ಏನಿಲ್ಲವೆಂದರೂ ಎನ್‌ಡಿಎ ಎರಡು ಬೃಹತ್ ಪ್ರಾದೇಶಿಕ ಪಕ್ಷಗಳ ಬೆಂಬಲವನ್ನು ಪಡೆಯಲೇಬೇಕಾಗುತ್ತದೆ. ಅಂತಹ ಪ್ರಮುಖ ಪ್ರಾದೇಶಿಕ ಪಕ್ಷಗಳನ್ನು ಹೆಸರಿಸುವುದಾದರೆ- ಟಿಎಂಸಿ, ಬಿಎಸ್‌ಪಿ, ಎಸ್‌ಪಿ, ಜೆಡಿಯು, ಡಿಎಂಕೆ, ವೈಎಸ್‌ಆರ್ ಕಾಂಗ್ರೆಸ್, ಎಐಎಡಿಎಂಕೆ, ಬಿಜೆಡಿ ಮತ್ತು ಹೊಸ ಎಂಟ್ರಿ ಎಎಪಿಗಳು ಮಾತ್ರ ಅಂತಹ ಸಾಮರ್ಥ್ಯ ಹೊಂದಿದಂತವು. ಈ ಎಲ್ಲಾ ಪಕ್ಷಗಳು ಈಗಾಗಲೇ ಮೋದಿ ಐಡಿಯಾವನ್ನು ಸಾರಾಸಗಟಾಗಿ ತಿರಸ್ಕರಿಸಿವೆ ಮಾತ್ರವಲ್ಲ ತಮ್ಮ ವ್ಯಾಪ್ತಿಗಳಲ್ಲಿ ಮೋದಿಯ ಧ್ರುವೀಕರಣ ಹಾಗೂ ಕೋಮುವಾದಿ ರಾಜಕಾರಣವನ್ನು ವಿರೋಧಿಸುತ್ತಲೇ ಚುನಾವಣೆಯಲ್ಲಿ ಸೆಣಸಾಡುತ್ತಿವೆ. ಇವರೆಲ್ಲರಲ್ಲಿ ಮೋದಿಗೆ ಆಪ್ತೆ ಎನ್ನಬಹುದಾದ ಜಯಲಲಿತ ಕೂಡಾ ಗುಜರಾತ್ ಮಾದರಿಯ ಕಟ್ಟುಕತೆಯನ್ನು ಕಟುವಾಗಿ ವಿರೋಧಿಸಿರುವುದಲ್ಲದೆ ತಮಿಳುನಾಡು ಸರ್ಕಾರದ ಸಾಧನೆ ಹಾಗೂ ಅಂಕಿಅಂಶಗಳನ್ನು ಗುಜರಾತ್‌ಗೆ ಹೋಲಿಸಿ ಬೆನ್ನುತಟ್ಟಿಕೊಂಡಿದ್ದಾರೆ. ಹಾಗಾಗಿ, ಈ ಯಾವ ಪಕ್ಷಗಳೂ ಮೋದಿಯ ಮುಂದಾಳತ್ವವಿರುವ ಎನ್‌ಡಿಎಗೆ ಬೆಂಬಲ ನೀಡಲಾರವು. ಆ ಪಕ್ಷಗಳನ್ನು ಅವಕಾಶವಾದಿಗಳು ಅಂತ ಪರಿಗಣಿಸಿದರೂ ಅವು ಮೋದಿ ನಾಯಕತ್ವದ ಎನ್‌ಡಿಎ ಸೇರಲಾರವು. ಯಾಕೆಂದರೆ ಈ ಎಲ್ಲಾ ಪಕ್ಷಗಳು ಹೆಚ್ಚೆಂದರೆ


| ಪಕ್ಷ | ರಾಜ್ಯ | ಈ ಬಾರಿ ಒಟ್ಟು ಸ್ಪರ್ಧೆ | 2009ರಲ್ಲಿ ಗೆದ್ದದ್ದು |
|---|---|---|---|
| ಬಿಜೆಪಿ | ರಾಷ್ಟ್ರೀಯ ಪಕ್ಷ | 428 | 116 |
| ದೇಶಿಯ ಮುರ್ಪೋಕ್ಕು ದ್ರಾವಿಡ ಕಳಗಮ್ | ತಮಿಳುನಾಡು | 14 | 0 |
| ಪಟ್ಟಲಿ ಮಕ್ಕಳ್ ಕಚ್ಚಿ | ತಮಿಳುನಾಡು | 8 | 0 |
| ಮರುಮಲಾರ್ಚಿ ದ್ರಾವಿಡ ಮುನ್ನೇತ್ರ ಕಳಗಮ್ | ತಮಿಳುನಾಡು | 7 | 1 |
| ಕೊಂಗುನಾಡು ಮಕ್ಕಳ್ ದೇಸಿ ಕಚ್ಚಿ | ತಮಿಳುನಾಡು | 1 | 0 |
| ಇಂದಿಯಾ ಜನನಾಯಗ ಕಚ್ಚಿ | ತಮಿಳುನಾಡು | 1 | 0 |
| ನ್ಯೂ ಜಸ್ಟೀಸ್ ಪಾರ್ಟಿ | ತಮಿಳುನಾಡು | 0 | 0 |
| ಜನಸೇನಾ ಪಾರ್ಟಿ | ಆಂಧ್ರಪ್ರದೇಶ | 0 | 0 |
| ತೆಲುಗುದೇಶಂ ಪಾರ್ಟಿ | ಆಂಧ್ರಪ್ರದೇಶ | 30 | 6 |
| ಶಿವಸೇನಾ | ಮಹಾರಾಷ್ಟ್ರ | 20 | 11 |
| ಸ್ವಾಭಿಮಾನಿ ಪಕ್ಷ | ಮಹಾರಾಷ್ಟ್ರ | 2 | 1 |
| ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಥ್ವಾಲೆ) | ಮಹಾರಾಷ್ಟ್ರ | 1 | 0 |
| ರಾಷ್ಟ್ರೀಯ ಸಮಾಜ ಪಕ್ಷ | ಮಹಾರಾಷ್ಟ್ರ | 1 | 0 |
| ಶಿರೋಮಣಿ ಅಕಾಲಿದಳ | ಪಂಜಾಬ್ | 10 | 4 |
| ಲೋಕಜನಶಕ್ತಿ ಪಾರ್ಟಿ | ಬಿಹಾರ್ | 7 | 0 |
| ರಾಷ್ಟ್ರೀಯ ಲೋಕ ಸಮತಾ ಪಾರ್ಟಿ | ಬಿಹಾರ್ | 3 | 0 |
| ಹರ್ಯಾಣ ಜನಹಿತ್ ಕಾಂಗ್ರೆಸ್ | ಹರ್ಯಾಣ | 2 | 1 |
| ಅಪ್ನಾ ದಳ್ | ಉತ್ತರ ಪ್ರದೇಶ | 2 | 0 |
| ಕೇರಳ ಕಾಂಗ್ರೆಸ್ (ನ್ಯಾಷನಲಿಸ್ಟ್) | ಕೇರಳ | 1 | 0 |
| ರೆವ್ಯೂಲುಷನಿಸ್ಟ್ ಸೋಶಿಯಲ್ ಪಾರ್ಟಿ | ಕೇರಳ | 1 | 0 |
| ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ | ಕೇರಳ | 1 | 0 |
| ನ್ಯಾಶನಲ್ ಪೀಪಲ್ಸ್ ಪಾರ್ಟಿ (ಇಂಡಿಯಾ) | ಮೇಘಾಲಯ | 1 | 0 |
| ನಾಗಾ ಪೀಪಲ್ಸ್ ಫ್ರಂಟ್ | ನಾಗಾಲ್ಯಾಂಡ್ | 1 | 1 |
| ಮಿಜೋ ನ್ಯಾಷನಲ್ ಫ್ರಂಟ್ | ಮಿಜೋರಂ | 1 | 1 |
| ಮಣಿಪುರ್ ಪೀಪಲ್ಸ್ ಪಾರ್ಟಿ | ಮಣಿಪುರ್ | 0 | 0 |
| ನಾರ್ಥ್-ಈಸ್ಟ್ ರೀಜನಲ್ ಪೊಲಿಟಿಕಲ್ ಫ್ರಂಟ್ | ಈಶಾನ್ಯ ರಾಜ್ಯಗಳು | – | 2 |
| ಗೋರ್ಖಾ ಜನಮುಕ್ತಿ ಮೋರ್ಚಾ | ಪ. ಬಂಗಾಳ | 0 | 0 |
| ಮಹಾರಾಷ್ಟ್ರವಾದಿ ಗೋಮಂತಕ್ ಪಾರ್ಟಿ | ಗೋವಾ | 0 | 0 |
| ಗೋವಾ ವಿಕಾಸ್ ಪಾರ್ಟಿ | ಗೋವಾ | 0 | 0 |
| ಒಟ್ಟು | | 543 | 144 |












ನ್ನು ಮೂರು ವರ್ಷದೊಳಗೆ ತಮ್ಮ ತಮ್ಮ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳನ್ನು ಎದುರಿಸಬೇಕಿದೆ. ಹಾಗಾಗಿ ಆ ಪಕ್ಷಗಳು ತಮ್ಮ ಮತಬ್ಯಾಂಕ್‌ಗಳನ್ನು ಜೀವಂತವಾಗಿಟ್ಟು ಕೊಂಡು ಪ್ರಾದೇಶಿಕವಾಗಿ ತಮ್ಮ ಪ್ರಾಬಲ್ಯಗಳನ್ನು ಭದ್ರಪಡಿಸಿ ಕೊಳ್ಳುವುದಕ್ಕೆ ಯೋಚಿಸುವುದೇ ಹೆಚ್ಚು. ಆದರೂ ಅವುಗಳಲ್ಲಿ ಕೆಲವು ತೃತೀಯ ಪಕ್ಷಗಳು ಎನ್‌ಡಿಎಗೆ ಬೆಂಬಲ ಕೊಡಲು ಮನಸ್ಸು ಮಾಡಬಹುದು, ಅದೂ ಎನ್‌ಡಿಎಯು ಮೋದಿಯನ್ನು ಮೈನಸ್ ಮಾಡಿ ಮುಂದೆ ಬಂದಾಗ ಮಾತ್ರ!

ಈ ಎಲ್ಲಾ ಅಂಶಗಳನ್ನು ಪರಿಗಣಿಸುವುದಾದರೆ, ಖಂಡಿತಾವಾಗ್ಲೂ ಮೋದಿ ಭಾರತದ ಪ್ರಧಾನಿಯಾಗುವುದಿಲ್ಲ ಎಂದು ನಿಸ್ಸಂಶಯವಾಗಿ ಹೇಳಬಹುದು. ಆತ ಫೇಸ್‌ಬುಕ್, ಟ್ವಿಟ್ಟರ್‌ಗಳಲ್ಲಿ ಪಾಪ್ಯುಲರ್ ಇರಬಹುದು ಆದರೆ ಪೊಲಿಟಿಕಲ್ ಸರ್ಕಲ್‌ನಲ್ಲಿ ಅಲ್ಲ. ಆಗ, ಅಧಿಕಾರ ಪ್ರೀತಿ ಮತ್ತು 'ಜೀವನದ ಏಕಮಾತ್ರ ಅವಕಾಶ' ಎಂಬ ಅರಿವಿರುವ ಆರೆಸ್ಸೆಸ್ ನಿರ್ದೇಶಿತ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗೆದ್ದ ಏಕೈಕ ಪಕ್ಷವಾಗಿ ಹೊರಹೊಮ್ಮಿದರೆ ಮುಂದಿನ ಸರ್ಕಾರ ರಚನೆಯ ಅವಕಾಶವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಆರೆಸ್ಸೆಸ್/ಬಿಜೆಪಿಯು ಮೋದಿಯನ್ನು ಸುಲಭವಾಗಿ ಡಂಪ್ ಮಾಡಿ ಪ್ರಧಾನಿ ಪಟ್ಟಕ್ಕೆ ಸ್ವೀಕಾರಾರ್ಹ ಮತ್ತೊಂದು ಮುಖವೊಂದರ ತಲಾಷಿಗಿಳಿದುಬಿಡುತ್ತವೆ. ದುರ್ಪರ್ಯಾಸವೆಂದರೆ ಬಿಜೆಪಿ ಮುಖಂಡರಿಗಳಿಗೂ ಇಂತಹ ಪರಿಸ್ಥಿತಿ ತಿಳಿದಿದೆ ಆದರೆ ಯಾರೊಬ್ಬರೂ ಬಾಯಿಬಿಟ್ಟು ಮಾತನಾಡುತ್ತಿಲ್ಲ ಅಷ್ಟೆ. ಆದರೆ ನಾವು ಮಾತಾಡೋಣ. ಈಗ, ಅಂತಹ ಸಂದರ್ಭ ಎನ್‌ಡಿಎಗೆ ಎದುರಾದರೆ ಯಾರ್‍ಯಾರು ಪ್ರಧಾನಿಯಾಗಬಲ್ಲರು ಅಂತ ಊಹಿಸೋಣ.

ಹಾಗೆ ನೋಡಿದರೆ ಅರುಣ್ ಜೇಟ್ಲಿ ಹೆಚ್ಚು ಸ್ವೀಕಾರಾರ್ಹ ಮುಖ, ಆದರೆ ನಮಗೆ ತಿಳಿದುಬಂದಿರುವ ಮಾಹಿತಿ ಪ್ರಕಾರ ಅಮೃತ್‌ಸರದಲ್ಲಿ ಆತನಿಗೆ ಎಂತಹ ಕಠಿಣ ಸ್ಪರ್ಧೆ ಇದೆಯೆಂದರೆ ಗೆಲ್ಲುವುದೇ ಅನುಮಾನವಂತೆ. ಒಂದುವೇಳೆ, ಗೆದ್ದರೂ ಆತ ಸಂಘ ಪರಿವಾರದ ಹಿನ್ನೆಲೆಯವನಲ್ಲ ಮತ್ತು ಆತನಿಗಿಂತ ಹಿರಿಯ ನಾಯಕರು ಪಾರ್ಟಿಯಲ್ಲಿ ಇರುವುದರಿಂದ ಆತನ ಆಯ್ಕೆ ಕಷ್ಟಸಾಧ್ಯ. ಸುಷ್ಮಾ ಸ್ವರಾಜ್‌ಗೂ ಇದೇ ಸ್ಥಿತಿ; ಆಕೆಯೂ ಸಂಘ ಪರಿವಾರಕ್ಕೆ ಸೇರಿದವಳಲ್ಲ ಮತ್ತು ಮುಖ್ಯವಾಗಿ ಸುಷ್ಮಾ ಹಾಗೂ ಶಿವರಾಜ್ ಚೌಹಾಣ್ ಅಡ್ವಾಣಿ ಗುಂಪಿಗೆ ಸೇರಿದವರು. ಈ ಮೂವರು (ಅಡ್ವಾಣಿಯೂ ಸೇರಿದಂತೆ) ಈಗಾಗಲೇ ಹಲವಾರು ಬಾರಿ ಮೋದಿ ಮತ್ತು ಮೋದಿಗೆ ನೆರವಾಗಬಲ್ಲ ಪಕ್ಷದ ನಿರ್ಧಾರಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಇವರು ಪೊಲಿಟಿಕಲ್ ಸರ್ಕಲ್‌ನಲ್ಲಿ ಪಾಪ್ಯುಲರ್ ಇರಬಹುದು ಆದರೆ ಆರೆಸ್ಸೆಸ್ ಮತ್ತು ಅಂಗಸಂಸ್ಥೆಗಳ ಆವರಣದಲ್ಲಲ್ಲ. ಹಾಗಾಗಿ, ಆ ಮೂವರಿಗೂ ಕಡಿಮೆ ಅವಕಾಶ ಎಂತಲೇ ಹೇಳಬಹುದು.

ಈಗ ನಮಗೆ ಉಳಿದಿರುವುದು ಒಂದೇ ಆಯ್ಕೆ, ಅದು ರಾಜನಾಥ್ ಸಿಂಗ್. ಪಕ್ಷ ಮತ್ತು ತನಗೋಸ್ಕರ ವ್ಯವಸ್ಥಿತವಾಗಿ ಕೆಲಸ ಮಾಡಿಕೊಂಡು ಬಂದಿರೋದು ಆತ ಒಬ್ಬನೇ. ಸದಾಕಾಲ ಮೋದಿಯ ಬೆಂಬಲಕ್ಕೆ ನಿಲ್ಲುತ್ತಲೇ ಆರೆಸ್ಸೆಸ್ ಸಾಮೀಪ್ಯವನ್ನೂ ಸಾಧಿಸಿಕೊಂಡಿರುವ ರಾಜನಾಥ್ ಸಿಂಗ್ ಸಂಘಪರಿವಾರ ಆತನಿಂದ ಅಪೇಕ್ಷಿಸುವ ಎಲ್ಲವನ್ನೂ ಮಾಡುತ್ತಾ ಬಂದಿದ್ದಾನೆ. ಇತ್ತೀಚೆಗೆ ತನ್ನ ಲೋಕಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರೊಂದಿಗೂ ಉತ್ತಮ ಬಾಂಧವ್ಯ ಇದೆಯೆಂದು ತೋರಿಸಿಕೊಳ್ಳಲು ಯತ್ನಿಸಿದ್ದ. ಒಂದೊಮ್ಮೆ, ಮತ್ತೆ ಒತ್ತಿ ಹೇಳುತ್ತೇನೆ, ಒಂದೊಮ್ಮೆ ಕೇಂದ್ರದಲ್ಲಿ ಎನ್‌ಡಿಎ ಮುಂದಿನ ಸರ್ಕಾರವನ್ನು ರಚಿಸುವುದೇ ಆದರೆ ಮತ್ತೊಬ್ಬ ಸಿಂಗ್ ಪ್ರಧಾನಿಯಾಗುವ ಸಂಭವವೇ ಹೆಚ್ಚು, ಅದು ರಾಜನಾಥ್ ಸಿಂಗ್. ಇದೇ ಆಲೋಚನೆಯಲ್ಲೆ ರಾಜನಾಥ್ ಸಿಂಗ್ ಕಾಯಿರ್ಣನ್ಮುಖವಾಗಿರೋದು. ಸಿಂಗ್ ಮೌನವಾಗಿದ್ದುಕೊಂಡೆ 'ಕಿಂಗ್' ಆಗಲು ಹಂಬಲಿಸುತ್ತಿದ್ದಾನೆ.

ಹೆಚ್ಚೆಂದರೆ ನಾವು ಲೆಕ್ಕ ಹಾಕಬಹುದಷ್ಟೆ ಆದರೆ ಭಾರತದ ಜನರ ವಿಶ್ವಾಸವನ್ನು ಯಾರು ಗಾಸಿಕೊಂಡಿದ್ದಾರೆ ಹಾಗೂ ಯಾರು ಜನದೇಶಾವನ್ನು ಪಡೆಯಲಿದ್ದಾರೆ ಎನ್ನುವುದನ್ನು ಕಾಲ ಮಾತ್ರ ಹೇಳಬಲ್ಲದು.


ಆದರೆ ಕೆಲವೊಂದು ಸಂಗತಿಗಳಂತೂ ಖಂಡಿತ ಮತ್ತು ನಿಖರವಾಗಿ ಸಂಭವಿಸಲಿವೆ. ಆರಂಭದಲ್ಲೇ ತಿಳಿಸಿದಂತೆ ವಾರಾಣಸಿಯಲ್ಲಿ ಭಾಷಣ ಮಾಡುತ್ತ ಮೋದಿಯೇ ಹೇಳಿದಂತೆ 'ತಾನಾಗಿಯೇ ವಾರಾಣಸಿಗೆ ಬಂದಿಲ್ಲ ಬದಲಾಗಿ ಗಂಗಾ ಮಾತೆಯೇ ತನ್ನನ್ನು ಅಲ್ಲಿಗೆ ಕರೆಸಿಕೊಂಡಿದ್ದಾಳೆ' ಎಂಬುದು ಕೂಡಾ ಅಂತಹ ಖಂಡಿತ ಮತ್ತು ನಿಖರ ಸಂಗತಿಗಳಲ್ಲಿ ಒಂದು. ಈ ವಿಚಾರದಲ್ಲಿ ನಾನು ಆತನ ಮಾತನ್ನು ನಂಬ್ತೀನಿ. ಹಿಂದೂ ಆಚಾರವಿಚಾರಗಳನ್ನು ಪಾಲಿಸುವ ಎಂತವರಿಗೇ ಆದರೂ ಒಂದು ಮಿನಿಮಮ್ ವಿಷಯ ತಿಳಿದೇ ಇರುತ್ತೆ ಏನೆಂದರೆ ಪವಿತ್ರ ಶಕ್ತಿ ವ್ಯಕ್ತಿಯನ್ನು ಕಾಶಿಗೆ ಕರೆಯುತ್ತೆಂದರೆ ಆ ವ್ಯಕ್ತಿಯ ಬದುಕಿನ ಗಡಿಯಾರ ಕೊನೇ ಕ್ಷಣದಲ್ಲಿ ಜೋರಾಗಿ ಓಡುತ್ತಿದೆ ಎಂತಲೇ ಅರ್ಥ. ಮೋದಿಯ ಪಯಣವೂ ಶೀಘ್ರವೇ ಕೊನೆಯಾಗಲಿದೆ, ರಾಜಕಾರಣದ ಪಯಣ!

● ಗೌರವ್ ಪಂಧಿ

● ಕನ್ನಡಕ್ಕೆ, ಗಿರೀಶ್ ತಾಳಿಕಟ್ಟೆ

# ನನ್ನ ಮುಖಕ್ಕೆ ಮಸಿ ಬಳಿದವರ ಬಗ್ಗೆ ನನಗೆ ಅನುಕಂಪವಿದೆ

ಸಮಯ NEWS




“ಸರ್, ಅದೇ ಚಾಮುಂಡೇಶ್ವರಿ ಮತ್ತು ನಂಜುಂಡೇಶ್ವರನ ಮಧ್ಯೆ ಅದೇನೋ ಸಂಬಂಧದ ಬಗ್ಗೆ ಬರಿತಿದ್ದೀರಂತಲ್ಲಾ ಅದರ ಕುರಿತಾಗಿ ಒಂದು ಚರ್ಚೆ ಇಟ್ಟುಕೊಂಡಿದ್ದೀವಿ ಬರ್‍ತೀರಾ ಸರ್?” ಎಂಬ ಕರೆ ಸಮಯ ಚಾನೆಲ್ಲಿಂದ ಬಂತು.

“ಇಲ್ಲಾ, ಆ ರೀತಿಯಲ್ಲಿ ಚರ್ಚೆ ಮಾಡ್ಲಿಕ್ಕೆ ಇದು ಸರಿಯಾದ ಸಮಯ ಅಲ್ಲ. ಪುಸ್ತಕ ಮುಗಿದ ಮೇಲೆ ಪುಸ್ತಕಗಳಲ್ಲಿರುವ ಅಂಶಗಳನ್ನು ಓದಿದ ನಂತರ ಚರ್ಚೆ ಮಾಡಬಹುದು. ಆದರೆ, ಅದಕ್ಕೆ ಮುಂಚೆಯೇ ಏನು ಮಾಡುವುದು? ಬೇಡ,” ಎಂದಿದ್ದೆ.

“ಅದೇ ನೀವು ಏನು ಬರೀತಿದ್ದೀರಾಂತ ಚರ್ಚೆ ಮಾಡಬಹುದಲ್ಲವಾ ಸಾರ್?”

“ನಾನು ಏನು ಬರೀತಿದ್ದೀನಂತ ಚರ್ಚೆ ಮಾಡೋದೇನಿದೆ? ಇನ್ನೂ ನಾನು ಯಾವ ವಿಷಯದ ಕುರಿತಾಗಿ ಬರೀತಿದ್ದೀನಿ, ಅದಕ್ಕೆ ಹೇಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ, ಈ ಕಾದಂಬರಿಯನ್ನು ಬರೆಯುವ ನನ್ನ ಉದ್ದೇಶವೇನು, ಇದಕ್ಕೆ ಬೇಕಾದಂತಹ ಸಂಪನ್ಮೂಲಗಳನ್ನು ಹೇಗೆ ಕಲೆಹಾಕಿಕೊಳ್ಳುತ್ತಿದ್ದೇನೆ ಎಂದು ಸಾಹಿತ್ಯಕವಾಗಿ ಮಾತಾಡಬಹುದು. ಒನ್ ಟು ಒನ್ ಆದರೆ ಒಬ್ಬ ಸಾಹಿತಿಯಾಗಿ ನಾನು ಭಾಗವಹಿಸುತ್ತೇನೆ. ಹೊರತಾಗಿ ಚರ್ಚೆಗಳೆಲ್ಲವೂ ಅನಗತ್ಯ.”

ಇದಕ್ಕೆ ಪೂರ್ತಿ ಒಪ್ಪಿದಂತೆ ಕಾಣದಿದ್ದರೂ “ನೋಡೋಣ” ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟು ಸುಮ್ಮನಾದರು.



ಆದರೆ ಪದೇ ಪದೇ ಕರೆದು “ಹಾಗೇ ಮಾಡೋಣ. ಮೈಸೂರಿನಿಂದ ನಂಜರಾಜೇ ಅರಸ್ ಫೋನ್‌ನಲ್ಲಿ ಬರ್‍ತಾರೆ. ಆಮೇಲೆ ಒಬ್ಬರು ಜಾನಪದ ವಿದ್ವಾಂಸರೊಬ್ಬರು ಬರ್‍ತಾರೆ (ಅವರ ಹೆಸರನ್ನೂ ಹೇಳಿದರು, ಆದರೆ ನನಗೆ ಪರಿಚಿತವಲ್ಲದ ಹೆಸರಾದ್ದರಿಂದ ಈಗ ನೆನಪಿಗೆ ಬರ್‍ತಿಲ್ಲ). ಮತ್ತೆ ಆ್ಯಂಕರ್ ಇರ್‍ತಾರೆ. ನೀವು ಮಾತಾಡಬಹುದು” ಎಂದು ಹೇಳಿ, ಒಮ್ಮೆ ಕ್ಯಾನ್ಸಲ್ ಆಯಿತೆಂದು ಹೇಳಿ, ಮತ್ತೊಮ್ಮೆ ಕರೆ ಮಾಡಿ ಮತ್ತೆ ಇದೆಯೆಂದು ತಿಳಿಸಿ ಅಂತೂ ಸಮಯಕ್ಕೆ ಕ್ಯಾಬ್ ಬಂತು. ಹೋದೆ.

ಸ್ಟುಡಿಯೋದಲ್ಲಿ ಮಾತಿಗೆ ಮುನ್ನ ಅವರು ವೀಕ್ಷಕರಿಗೆ ತೋರಿಸಿದ ಟೈಟಲ್ ಕಾರ್ಡ್‌ನ ರೀತಿಯನ್ನು ನೋಡುತ್ತಾ ಹೋದಂತೆ ನಾನಿಲ್ಲಿ ಖಳನಾಗಿದ್ದು, ವಿಚಾರಣೆಗೆ ಎಳೆದುತಂದಿದ್ದಾರೆಂದೂ ಸ್ಪಷ್ಟವಾಯ್ತು. ನೀರಿನಲ್ಲಿ ಬಿದ್ದಾಯಿತು, ಈಜದೇ ವಿಧಿ ಇರಲಿಲ್ಲ.

ಗೀತಾ ರಾಮಾನುಜಂ, ಸಂತೋಷ್ ಗುರೂಜಿ, ಚಿರಂಜೀವಿ ಎಂಬ ಯುವಕ ರಂಗನಾಥ್ ಭಾರದ್ವಾಜನ ನೇತೃತ್ವದಲ್ಲಿ ದಾಳಿಗಾರಂಭಿಸಿದರು. “ಹಾ, ನೀವು ಹೇಳಿ, ನೀವು ಹೇಳಿ” ಎಂದು ತನ್ನ ಮಾತಿನ ವೇಗದಲ್ಲಿ ನನಗೆ ಮಾತಾಡಲೂ ಬಿಡದ ರಂಗನಾಥನ ಸೇರಿದಂತೆ ಎಲ್ಲರೂ – ನಂಜರಾಜೇ ಅರಸರ ಹೊರತಾಗಿ – ಅಕ್ಷರಶಃ ಆಕ್ರಮಣವನ್ನೇ ಪ್ರಾರಂಭಿಸಿದರು. ನಾನು ಸ್ಟುಡಿಯೋ ಒಳಗೆ ಹೋಗುವ ಮುನ್ನ ಸ್ಪಷ್ಟವಾಗಿಯೇ ತಿಳಿಸಿದ್ದೆ 'ಇದು ಸಂವಾದವಾಗಬೇಕೇ ಹೊರತು, ವಿತಂಡವಾದದ ದಾಳಿ ಆಗಬಾರದೆಂದರೆ ಎರಡೂ ಕಡೆ ಸಮಬಲ ಇರಬೇಕು' ಎಂದು. ಆದರೆ, ಅಲ್ಲಿ ಹಾಗಾಗುತ್ತಿಲ್ಲ ಎಂಬುದು ಸ್ಪಷ್ಟವಾಗಿ ಹೋಯಿತು. ಹಿಂದಿನ ದಿನ ಪಬ್ಲಿಕ್ ಟಿವಿಯಲ್ಲಿ ಚಾಮುಂಡಿ ಮತ್ತು ನಂಜುಂಡನ ಸಂಬಂಧದ ಕುರಿತಾಗಿ ವಸ್ತುನಿಷ್ಠವಾಗಿ ಜಾನಪದ ಸಾಹಿತ್ಯವನ್ನು ಉಲ್ಲೇಖಿಸಿ ಮಾತಾಡಿದ್ದ ನಂಜರಾಜೇ ಅರಸರು ಈ ಬಾರಿ ನನಗೆ ಬುದ್ಧಿ ಹೇಳಲು ಪ್ರಾರಂಭಿಸಿದ್ದರು. ಚಾಮುಂಡಿಯ ಇತರ ಮುಖಗಳನ್ನೂ ತಿಳಿಸುವಂತಹ ಸಮಗ್ರವಾದ ಪುಸ್ತಕವನ್ನು ಹೊರತನ್ನಿ ಎಂದು ಹಾರೈಸಿದರು. ಚಿರು ಎಂಬ ಆ ಹುಡುಗ ಎಷ್ಟು ಅಪ್ರಬುದ್ಧನೆಂದರೆ, ಅವನಿಗೆ ವೇದಗಳು ಮೌಖಿಕವಾಗಿಯೇ ಬಂದವು, ನಂತರ ಅವನ್ನು ಕ್ರೋಢೀಕರಿಸಿ ಗ್ರಂಥ ರೂಪಕ್ಕೆ ತರಲಾಯಿತು ಎಂಬ ಸಾಮಾನ್ಯ ಚಾರಿತ್ರಿಕ ಅಂಶವೂ ತಿಳಿದಿರಲಿಲ್ಲ, ವೇಶ್ಯಾವಾಟಿಕೆ ಒಂದು ಭಾರತದ ಪ್ರಾಚೀನ ಕಲೆಯೆಂಬುದು ಅವರಲ್ಲಿ ಯಾರಿಗೂ ತಿಳಿದಿರುವಂತೆ ಕಾಣಲಿಲ್ಲ, ವೇಶ್ಯೆ ಎಂದರೆ ಅವಹೇಳನ ಎನ್ನುವ ಅವರಿಗೆ ಭಾರತದ ಪ್ರಾಚೀನ ಇತಿಹಾಸದ ಅರಿವು ಇದೆ ಎಂದು ಅಲ್ಲಿ ಕಾಣಬರಲಿಲ್ಲ, ಅವನ ತಾಯಿ ಚಾಮುಂಡಿಯನ್ನು ನಾನು ನಿಂದಿಸಿದ್ದೇನೆಂದು, ನಾನು ರಾಜಾಜಿನಗರ ಶಾಲೆಯಲ್ಲಿ ಎಂತೆಂತಹ ನೃತ್ಯ ಪ್ರದರ್ಶನಗಳನ್ನು ಮಾಡಿಸಿದ್ದೇನೆಂದು, ಅವರ ಮತ್ತು ನನ್ನ ನಡುವೆ ಗೌರವದ ಭಾವವಿದೆ ಎಂಬ ಪ್ರಾಥಮಿಕ ಅರಿವೂ ಇಲ್ಲದೇ, ಪೋಷಕರು ನಾನು ಅಶ್ಲೀಲವಾಗಿ ಮಾತಾಡಿದೆನೆಂದು ಆಡಳಿತ ಮಂಡಲಿಗೆ ದೂರು ಕೊಟ್ಟು ನನ್ನ ಹೊರ ಹಾಕಿದರೆಂದು ಸುಳ್ಳಾಡುತ್ತಾ ನನ್ನ ಹಿಡಿದುಕೊಟ್ಟವನಂತೆ ಪೋಸ್ ಕೊಟ್ಟು ತಾನೇ ಮುಖಭಂಗ ಅನುಭವಿಸಿದ.

ಒಟ್ಟಾರೆ ಆಕ್ರಮಣದ ಕಥೆ ಮುಗಿದ ಮೇಲೆ ನಾನು ಈ ಕಾರ್ಯಕ್ರಮವನ್ನೂ, ಆ ಯುವಕರನ್ನೂ ಖಂಡಿಸಿ ಹೊರಬಂದೆ. ಸಂತೋಷ್ ಗುರೂಜಿ, ಗೀತಾ ರಾಮಾನುಜನ್ ಮತ್ತು ನಾನು ಮೂವರೂ ಲಿಫ್ಟ್ ಇಳಿದು ಬಂದರೆ, ಸಂತೋಷ್ ಗುರೂಜಿಯ ಕಾರೊಂದೇ ಮುಂದೆ ಇತ್ತು. ನನ್ನ ಒಯ್ಯಬೇಕಾಗಿರುವ ಕಾರು ಬಂದಿರಲಿಲ್ಲ. ನನ್ನ ಒಯ್ಯುವ ಕಾರಿಗಾಗಿ ಕಣ್ಣಾಡಿಸುವಾಗಲೇ ಯಾರೊಬ್ಬರೂ ನನ್ನ ಕಳುಹಿಸಿಕೊಡುವ ಜವಾಬ್ದಾರಿ ಹೊತ್ತಿದ್ದವರಂತೆ ಕಾಣಲಿಲ್ಲ. ಚಾನೆಲ್ಲಿನ ಒಬ್ಬ ಯುವಕ ತಣ್ಣಗೆ, ಯಾರೋ ಗಲಾಟೆ ಮಾಡಕ್ಕೇಂತ ಅಲ್ಲಿ ಬಂದು ನಿಂತಿದ್ದಾರೆ ಎಂದು ಹೇಳಿ, ಅದಕ್ಕೇನು ಮಾಡಬೇಕೋ ಏನೋ ಎನ್ನುವಂತೆ ನಿಂತಿದ್ದ. ಆದರೆ, ಅಷ್ಟು ಸಲ ಫೋನ್ ಕರೆ ಮಾಡಿ ನನ್ನ ಕರೆಯಿಸಿಕೊಂಡಿದ್ದ ಚಾನೆಲ್ಲಿನವರಿಗೆ ನನ್ನನ್ನು ಮತ್ತೆ ಸುರಕ್ಷಿತವಾಗಿ ಮರಳಿಸುವ ಯಾವ ಸೂಚನೆಯೂ ಅಲ್ಲಿ ನೇರ ಕಣ್ಣಿಗೆ ಕಾಣಲಿಲ್ಲ.

ಸಂತೋಷ್ ಗುರೂಜಿ “ನಾನು ಅಂಬೇಡ್ಕರ್ ಕಾಲೇಜಿನ ಕಡೆಗೆ ಹೋಗುವುದರಿಂದ ನಾನು ನಿಮ್ಮನ್ನು ಡ್ರಾಪ್ ಮಾಡಬಲ್ಲೆ. ನನ್ನ ಜೊತೆಯಲ್ಲಿದ್ದರೆ ನಿಮಗೆ ಯಾರೇನೂ ಮಾಡರು” ಎಂಬ ವಾಗ್ದಾನ ಮಾಡಿ ತಮ್ಮ ಕಾರಿನಲ್ಲಿ ನನ್ನನ್ನು ಕೂರಿಸಿದರು. ಆಗ ಸ್ವಲ್ಪ ಹೊರಗೆ ಗೇಟಿನ ಬಳಿ ನಿಂತಿದ್ದ ಯುವಕರು ಅಲ್ಲಿಗೆ ಬಂದರು. ಅವರಲ್ಲಿ ಯಾರಿಗೂ ಆಗ್ರಹವೋ, ಆವೇಶವೋ ಏನೂ ಇದ್ದಂತೆ ಕಾಣಲಿಲ್ಲ. ಬಂದವರು ಸಂತೋಷ ಗುರೂಜಿಯ ಬಳಿ ವಂದಿಸುವ ಮಾತಾಡಿದರು. ನನ್ನ ಜೊತೆ ಎರಡು ನಿಮಿಷ ಮಾತಾಡಬೇಕು ಎಂದೂ ಹೇಳಿದರು. “ನನ್ನ ಮುಖ ನೋಡಿಕೊಂಡು ಬಿಡಿ, ಏನೂ ಮಾಡಬೇಡಿ” ಎಂದು ಸಂತೋಷ್ ಗುರೂಜಿ ಹೇಳಿದರು. ಆದರೆ, ಅವರು ಕಾರಿನ ಬಾಗಿಲನ್ನು ತೆರೆದು ಏಕಾಏಕಿಯಾಗಿ ಯಾವ ಅಡೆತಡೆ ಇಲ್ಲದೇ ನನ್ನ ಮುಖಕ್ಕೆ ಚೆನ್ನಾಗಿ ಮಸಿ ಬಳಿದರು. ನಾನು ಏನೂ ಮಾತಾಡಲಿಲ್ಲ, ಹೆಚ್ಚಾಗೇನೂ ಪ್ರತಿರೋಧಿಸಲೂ ಇಲ್ಲ. ಬಹುಶಃ ಮಸಿ ಬಳಿಯುವಿಕೆ ಅನಿರೀಕ್ಷಿತವಾಗಿದ್ದು ಅದಕ್ಕೆ ಪ್ರತಿಕ್ರಿಯಿಸಲೂ ಆಗಲೇ ಇಲ್ಲ. ಆದರೆ ಆಶ್ಚರ್ಯವೆಂದರೆ, ನನಗೆ ಮಸಿ ಬಳಿಯುವ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದಂತೆ, ಬೆಳಕು ಬೆಳಗಿ ಕ್ಯಾಮರಾ ಆನ್ ಆಯಿತು. ಆ ದೃಶ್ಯವನ್ನು ಷೂಟ್ ಮಾಡಿಕೊಳ್ಳತೊಡಗಿದರು. ಮತ್ತೊಬ್ಬರು ತಮ್ಮ ಮೊಬೈಲ್‌ನಿಂದ ಚಿತ್ರಗಳನ್ನು ಹಿಡಿದುಕೊಳ್ಳುತ್ತಿದ್ದರು. ಆಗ ಇನ್ನೊಬ್ಬ ಕಾರಿನ ಮತ್ತೊಂದು ಕಡೆಯಿಂದ ಬಂದು ಕಾರಿನ ಬಾಗಿಲನ್ನು ತೆಗೆದ. “ನಮ್ಮ ಹಿಂದೂ ದೇವರ ಬಗ್ಗೆ ಏನೇನೋ ಇವರು ಬರೆಯಬಹುದಾ ಸ್ವಾಮಿ” ಎಂದೇನೋ ಹೇಳುತ್ತಿದ್ದ. ಅಷ್ಟರಲ್ಲಿ ಸಂತೋಷ್ ಗುರೂಜಿ ಅಲ್ಲಿದ್ದವರಿಗೆ ಸಮಾಧಾನ ಹೇಳಿ ನನ್ನನ್ನು ಅಲ್ಲಿಂದ ಹೊರಗೆ ಒಯ್ದರು.

ಚಾನೆಲ್ಲಿನವರು ತಮ್ಮ ಕಡೆಗೆ ಕರೆಯಿಸಿಕೊಂಡ ಅತಿಥಿಯ ಮೇಲೆ ಹಲ್ಲೆಯೋ, ಮಸಿ ಬಳಿಯುವ ಪ್ರಕರಣವನ್ನೋ ಸಾಧ್ಯವಾಗುವಂತೆ ಬಿಟ್ಟದ್ದು ಹೇಗೆ? ಅವರಿಗೆ ತಿಳಿಯದೇ ಅಪರಿಚಿತರು ಏಕಾಏಕಿ ದಾಳಿ ಮಾಡಿರುವವರು ಎಂದಾದರೆ ಅಷ್ಟು ಸಿದ್ಧಪಡಿಸಿಕೊಂಡಂತೇ ಇದ್ದ ಕ್ಯಾಮರಾವನ್ನೇಕೆ ಆನ್ ಮಾಡಿದರು? ಇಡೀ ಮಸಿ ಬಳಿಯುವ ಪ್ರಕರಣವು ಆ ಕಾರಿಡಾರ್‌ನಲ್ಲಿ ಬಾಗಿಲ ಮುಂದೆಯೇ ನಡೆಯುವಂತಾಗಿದ್ದು ಹೇಗೆ? ನನ್ನ ಹೊತ್ತಿಸಿಕೊಂಡರೂ ಕಾರೇಕೆ ತಕ್ಷಣ ಚಲಿಸಲಿಲ್ಲ? ಎಂಬ ಹಲವು ಪ್ರಶ್ನೆಗಳೊಡನೆ ಮಸಿ ಡಿಬೇಟ್ ಕಾರ್ಯಕ್ರಮ ಮುಗಿಯಿತು.

ಆದರೆ, ನನ್ನ ಮುಖಕ್ಕೆ ಮಸಿ ಬಳಿದವರು ಯಾರೇ ಆಗಲಿ ಅವರ ಬಗ್ಗೆ ನನಗೆ ಅನುಕಂಪವಿದೆ. ಅವರು ಸ್ವಯಂಪ್ರೇರಿತರಾಗಿ ಬಂದಿರುವ ಯಾವ ಸೂಚನೆಯೂ ಇರಲಿಲ್ಲ. ಯಾರದೋ ಮಾತಿಗೆ ಒಪ್ಪಿ ಬಂದು ಈ ಕೃತ್ಯವನ್ನು ಮಾಡಿರುವ ಸ್ಪಷ್ಟ ಚಿತ್ರಣ ಅಲ್ಲಿ ಸಿಕ್ಕಿತ್ತು. ಅವರು ತಾವು ಏನು ಮಾಡುತ್ತಿದ್ದೇವೆಂದೂ ತಿಳಿಯದವರು. ಈ ಹುಡುಗರು ವಿಚಾರಗಳನ್ನು ವಿವಾದಗಳನ್ನಾಗಿಸಿಕೊಳ್ಳುತ್ತಾ ತಮ್ಮ ಹಿತಾಸಕ್ತಿಗೆ ಬದ್ಧರಾಗಿರುವ ಜನರಿಂದ ದೂರಾಗದಿದ್ದರೆ, ತಮ್ಮ ಸ್ವಂತ ಬುದ್ಧಿಯನ್ನು ಬೆಳೆಸಿಕೊಳ್ಳದಿದ್ದರೆ, ಇಂತಹ ಸಂಚುಗಳಿಂದ ತಾವೇ ಬಲಿಯಾಗುವಂತಹ ಭವಿಷ್ಯ ಅವರಿಗೆ ಎದುರಾಗಬಹುದು. ಅವರಿಗೆ ನನ್ನ ಸ್ನೇಹಪೂರ್ಣ ನೆನೆಕೆಗಳು.

ನನ್ನ ಮುಖಕ್ಕೆ ಮಸಿ ಬಳಿಯುವ ಮೊದಲು ಅವರ ಕೈ ಮಸಿಯಾಗಿದ್ದು ನಂತರ ಅವರು ತೊಳೆದುಕೊಂಡರು. ನಾನೂ ತೊಳೆದುಕೊಂಡೆ. ಇದರಿಂದ ನನಗೆ ಅಪಮಾನವಾಯಿತೆಂದು ಕುಗ್ಗದಿರುವಷ್ಟು ಸಮಚಿತ್ತ ನನಗಿದೆ. ಭೌತಿಕವಾಗಿ ಮಸಿ ಬಳಿಯುವ ಅಪಮಾನವಾಯಿತೆಂದು ... ವಾಚಕವಾಗಿ ಚಾರಿತ್ರ್ಯಕ್ಕೆ ಕಳಂಕತರುವ ಈ ಮನಸ್ಥಿತಿಗಳ ಹಿಂದಿನ ಹುನ್ನಾರವನ್ನಷ್ಟೇ ಸಾಮಾನ್ಯ ಜನರು ಅರಿಯಬೇಕಾಗಿದೆ.

● ಯೋಗೇಶ್ ಮಾಸ್ಟರ್

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

# ಕರಾವಳಿ: ಸಮಬಲದಲ್ಲಿ ಕರ-ಕಮಲ ಸಂಜಾತರು!!

ಕರಾವಳಿಯ ಮೂರೂ ಲೋಕಸಭಾ ಕದನ ಕ್ಷೇತ್ರದಲ್ಲಿ ಚುನಾವಣಾ ರಾಜಕಾರಣದ ರಸಾಯನ ಶಾಸ್ತ್ರ ಮಾತ್ರ ಕರಾರುವಾಕ್ಕಾಗಿ ನಡೆದುಹೋಗಿದೆ. ಆದರೆ ಆ ಬಳಿಕದ ಸೋಲು-ಗೆಲುವಿನ ಗಣಿತಶಾಸ್ತ್ರದ ಕೂಡಿಸಿ-ಕಳೆಯುವಿಕೆಗೆ ಅದ್ಯಾಕೋ ತಾಳೆಯೇ ಆಗುತ್ತಿಲ್ಲ. ದಕ್ಷಿಣ ಕನ್ನಡ, ಉಡುಪಿ-ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಈ ಮೂರೂ ಅಖಾಡದಲ್ಲಿ ಒಂದೇ ಥರದ ಸಮರ ನಡೆದುಹೋಗಿದೆ. ಮೋದಿ ಅಲೆಯೇನಾದರೂ ಬಿಜೆಪಿಗೆ ಹಿತಾನುಭವ ನೀಡಿದೆಯಾ ಎಂದರೆ, ಅದರ ಕಟ್ಟಾ ಬೆಂಬಲಿಗರಿಗೇ ಉತ್ತರಿಸಲಾಗುತ್ತಿಲ್ಲ; ರಾಜ್ಯ ಸರ್ಕಾರದ ಬಲ; ಶಾಸಕರ ಸಾಮರ್ಥ್ಯ ಕಾಂಗ್ರೆಸ್‌ಗೆ ಗೆಲ್ಲಲು ಅನುಕೂಲ ಕಲ್ಪಿಸಿದೆಯಾ ಎಂದರೆ, ಊಹುಂ, ಅದೂ ಸ್ಪಷ್ಟವಾಗುತ್ತಿಲ್ಲ.

ಹೀಗಾಗಿ ಯಾವ ಆ್ಯಂಗಲ್‌ನಿಂದ ನೋಡಿದರೂ ಕಾಣಿಸುವುದು ಮೂರೂ ಕಡೆ ನಡೆದ ಸಮಬಲದ ಸೆಣಸಾಟ. ಫಲಿತಾಂಶ ಪಕ್ಕಾ ಫೋಟೋ ಫಿನಿಶ್ ಆಗಲಿದೆ ಎಂಬ ತೀರ್ಮಾನಕ್ಕೆ ರಾಜಕೀಯ ಪಂಡಿತರು, ಮತದಾರ ಪಾಮರರು ಬಂದುಬಿಟ್ಟಿದ್ದಾರೆ. ಹಿಂದೂತ್ವದ ಪ್ರಯೋಗಶಾಲೆಯಂತಿರುವ ಕರಾವಳಿಯಲ್ಲಿ ಮೋದಿ ಮಾರುತ ಆರಂಭದಲ್ಲೇ ದುರ್ಬಲವಾಗಿತ್ತು, ಇದು ಕಾಂಗ್ರೆಸ್‌ಗೆ ಒಂದು ಗುಲಗಂಜಿಯಷ್ಟು ಅವಕಾಶ ಹೆಚ್ಚು ಮಾಡಿದೆ. ತೀರಾ ಸಣ್ಣ-ಸಣ್ಣ ಅಂತರದಲ್ಲಿ ಮೂರೂ ಕಡೆ ಕಾಂಗ್ರೆಸ್ಸೇ ಗೆಲ್ಲುವ ಛಾನ್ಸ್ ಇದೆ.

## ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಎಂದರೆ ಕಳೆದ ಎರಡೂವರೆ ದಶಕದಿಂದ ಧರ್ಮದ ಆಧಾರದಲ್ಲಿ ಕೇಸರೀಕರಣವಾಗಿ ಹದಗೊಂಡ ಅಖಾಡ; ಜಾತಿ ಲೆಕ್ಕಾಚಾರಗಳು ಕೆಲಸಕ್ಕೆ ಬಾರದೇ ಬರೀ ಹಿಂದೂತ್ವದ ಅಮಲಲ್ಲಿ ಬಿಜೆಪಿಯನ್ನು ಕಣ್ಣು ಮುಚ್ಚಿಕೊಂಡು ಗೆಲ್ಲಿಸುತ್ತ ಬಂದ ಕ್ಷೇತ್ರ. ಇಲ್ಲಿ ಸಂಘ ಪರಿವಾರದ ಸೂತ್ರಧಾರ ಕಲ್ಲಡ್ಕ ಭಟ್ಟರ ಒಡೆದಾಳುವ ಬ್ರಾಹ್ಮಣಿಕೆ- ತಂತ್ರಗಾರಿಕೆಗೆ ಶೂದ್ರರು ಬಲಿಯಾದದ್ದೇ ಹೆಚ್ಚು ಇಂಥ ಕೋಮು ಧ್ರುವೀಕರಣದ ಯುದ್ಧಾಂಗಣದಲ್ಲಿ ಮೋದಿ ಮೇನಿಯಾ ಸೇರಿಕೊಂಡರೆ ಕೇಳಬೇಕಾ? ಕಳೆದ ಅಸೆಂಬ್ಲಿಯಲ್ಲಿ ಸೋತ ಸೇಡು ತೀರಿಸಿಕೊಳ್ಳಲು 'ಡಾನ್' ಕಲ್ಲಡ್ಕ ಭಟ್ ಹಗಲಿರುಳೂ ಜಿದ್ದಾಜಿದ್ದಿಯಿಂದ ದಾಳ ಉರುಳಿಸಿದ್ದಾರೆ. ಜತೆಗೆ ಕಳೆದೈದು ವರ್ಷ ಎಂಪಿಯಾಗಿ ಕ್ಷೇತ್ರ ಸುತ್ತಿದ ಸಂಪರ್ಕ ಬಲ ಇದ್ದರೂ ಬಿಜೆಪಿಯ ಹುರಿಯಾಳು ನಳಿನ್‌ಕುಮಾರ್ ಕಟೀಲ್‌ಗೆ ಏಳು ಕೆರೆ ನೀರು ಕುಡಿಯಬೇಕಾದ ಗ್ರಹಚಾರ!


ಕಾಂಗ್ರೆಸ್‌ನ ವಯೋವೃದ್ಧ-ನಿಷ್ಠೂರ ಜನನಾಯಕ ಜನಾರ್ದನ ಪೂಜಾರಿ ಪರ ದಕ್ಷಿಣ ಕನ್ನಡದ ಉದ್ದಗಲಕ್ಕೆ ಎದ್ದ ಅಂತರ್ಗಾಮಿ ಅಲೆ, ಸಹಾನುಭೂತಿ ಮತ್ತು ಆತನ ಸ್ವಜಾತಿ ಬಿಲ್ಲವರಲ್ಲಾದ 'ಬದಲಾವಣೆ' ಕಲ್ಲಡ್ಕ ದೊರೆಯ ನಿದ್ದೆಯನ್ನೇ ಕೆಡಿಸಿಬಿಟ್ಟಿದೆ. ಪೂಜಾರಿಯ ಪರಮ ಶತ್ರು ವೀರಪ್ಪ ಮೊಯ್ಲಿ ತನ್ನ ಚಿಕ್ಕಬಳ್ಳಾಪುರದ ಜಂಜಾಟದ ನಡುವೆಯೂ ಒಂದು ದಿನದಮಟ್ಟಿಗೆ ಮಂಗಳೂರಿಗೆ ಬಂದು 'ಆ್ಯಂಟಿ ಆಟ'ವೇ ಆಡಿಹೋಗಿದ್ದರು. ಎಸ್‌ಡಿಪಿಐ ಎಂಬ ಸಾಬಿಗಳ ಆರೆಸ್ಸೆಸ್‌ಗೆ ಧನಸಹಾಯ ಮಾಡಿದ್ದೂ ಆಗಿದೆ. ಆದರೆ ಕಲ್ಲಡ್ಕ ಭಟ್ ಮತ್ತು ನಳಿನ್ ಮಂಡೆ ಕೆಂಡ ಮಾಡಿಕೊಂಡಿರುವುದು ಪೂಜಾರಿ ಪರ ಎದ್ದಿರುವ ಪ್ರಚಂಡ ಅನುಕಂಪದ ಅಲೆಗೇ!

ಬಿಜೆಪಿಗರ ಬೋಗಸ್ ಹಿಂದೂತ್ವಕ್ಕೆ ಬ್ರೈನ್‌ವಾಶ್ ಮಾಡಿಸಿಕೊಂಡು ಸ್ವಜಾತಿಯ ನಿಷ್ಠೂರ ಧ್ವನಿ-ಜನಪರ ಕೆಲಸಗಾರ ಪೂಜಾರಿಯನ್ನು ನಾಲ್ಕು, ನಾಲ್ಕು ಬಾರಿ ಸೋಲಿಸಿದ ತಪ್ಪಿನ ಅರಿವು ದಕ್ಷಿಣ ಕನ್ನಡದ ಬಹುಸಂಖ್ಯಾತ ಬಿಲ್ಲವರಿಗೆ ಈ ಬಾರಿ ಆಗಿತ್ತು, ಇದು ಬಿಲ್ಲವರನ್ನು ಒಂದಾಗಿಸಿ ಹಸ್ತದ ಚಿಹ್ನೆಗೆ ಮತ ಒತ್ತುವಂತೆ ಒಂದಾಗಿಸಿತ್ತು. ಜತೆಗೆ ಕ್ಷೇತ್ರದ ಪ್ರಥಮ ಬಹುಸಂಖ್ಯಾತರಾದ ಮುಸ್ಲಿಮರು ಮೋದಿ ಮತ್ತವನ ಫ್ಲೆಕ್ಸ್‌ನಲ್ಲಿದ್ದ ನರಭಕ್ಷಕ ಹುಲಿಗೆ ಹೆದರಿಯೇ ಸಾರಾಸಗಟಾಗಿ ಬಂದು ಪೂಜಾರಿಗೆ ಬೆಂಬಲಿಸಿದ್ದಾರೆ. ಪೂಜಾರಿಯ ಧಾರ್ಮಿಕ-ಕ್ರಾಂತಿಕಾರಕ ಕಾರ್ಯಕ್ರಮಕ್ಕೆಲ್ಲ ಹೋಗಿ ಆತನ ಅಪ್ಪಿ ಮುದ್ದಾಡಿದ ಕಲ್ಲಡ್ಕ ಭಟ್ಟನ 'ಹಿಂದೂತ್ವ' ಅರ್ಥಮಾಡಿಕೊಂಡಿದ್ದ ಕಟ್ಟರ್ ಕೇಸರಿಗಳೂ ಈ ಬಾರಿ ಕಮಲದ ಬದಲಿಗೆ ಕರದ ಸಿಂಬಲಿಗೇ ಮತ ಒತ್ತಿದ್ದಾರೆ. ಕಲ್ಲಡ್ಕನ ಕುತಂತ್ರಗಳೇ ಬಿಜೆಪಿಗೆ ತಿರುಗುಬಾಣ ಆಗಿವೆ. ಫೋನಾಯಣದಿಂದ ಹೆಸರು ಕೆಡಿಸಿಕೊಂಡಿದ್ದ ನಳಿನ್‌ಗೆ ಮತ ಕೊಡಿಯೆಂದು ಬಿಜೆಪಿಗರು ಎಲ್ಲಿಯೂ ಹೇಳಿಲ್ಲ; ಅವರು ಕೇಳಿದ್ದು ಮೋದಿಗೆ ಮತ.


ಕಲ್ಲಡ್ಕನ ಕಂಗಾಲಿಗೆ ಸಂಘ ಪರಿವಾರದ ಒಳಗಿನ ಸುಳಿಗಳೂ ಕಾರಣವಾಗಿದೆ. ನಳಿನ್‌ನ ಸೋಲಿಸಲು ಚಡ್ಡಿ ಪಡೆಯಲ್ಲೇ ಅತೃಪ್ತ ಆತ್ಮಗಳ ದೊಡ್ಡ ದಂಡೇ ಅಡಗಿ ಕುಳಿತಿತ್ತು, ಎಂಪಿಗಿರಿ ಆಕಾಂಕ್ಷಿಯಾಗಿದ್ದ ಧಗಾಕೋರ ಅನ್ಯಾಯವಾದಿ ಪೀಪಿ, ಶ್ರೀಕರ ಪ್ರಭು- ಹೋಮ್‌ಸ್ಟೇ ಪಬ್ ದಾಳಿಗಳ ಕಿರಾತಕರು ಬಿಜೆಪಿ ಸೋಲಿಗೆ ಶಪಥ ತೊಟ್ಟವರಂತೆ ಒಳಗೊಳಗೇ ಕಾರ್ಯಾಚರಣೆ ಮಾಡಿದ್ದಾರೆ. ಕಲ್ಲಡ್ಕ ಭಟ್ಟ, ನಳಿನ್‌ನಂಥ ಹಿಂದೂ 'ಉದ್ಧಾರಕ'ರ ನಂಬಿ ಹಿಂದೂ ಹುಡುಗಿಯರದೇ ಬಟ್ಟೆ ಬಿಚ್ಚಿಸಿ-ಹಿಂಡಿ-ಹಿಂಸಿಸಿ 'ನೈತಿಕತೆ' ಕಾಪಾಡಲು ಹೋಗಿ ಜೈಲು ಪಾಲಾದ ಭಂಡ




ಶೋಭಾ ಕರಂದ್ಲಾಜೆ




ಧನಂಜಯಕುಮಾರ್



ಜಯಪ್ರಕಾಶ್ ಹೆಗ್ಡೆ




ಆರ್.ವಿ. ದೇಶಪಾಂಡೆ




ಅನಂತಕುಮಾರ್ ಹೆಗಡೆ




ಪ್ರಶಾಂತ ದೇಶಪಾಂಡೆ



ಜನಾರ್ದನ ಪೂಜಾರಿ



ನಳಿನ್‌ಕುಮಾರ್ ಕಟೀಲ್



ಕಲ್ಲಡ್ಕ ಪ್ರಭಾಕರ ಭಟ್ಟ

ಭಜರಂಗಿಗಳಿಗೆ ಸಹಜವಾಗೇ ಬಿಜೆಪಿ ಭೂಗತ ಮಾಡುವ ಕೆಚ್ಚು ಬಂದಿತ್ತು, ಇದರ ಜತೆಜತೆಗೆ ಸಾಂಪ್ರದಾಯಿಕವಾಗಿ ಧರ್ಮದ ನೆಲೆಯಲ್ಲಿ ಬಿಜೆಪಿಗೆ ಮತ ಹಾಕುತ್ತ ಬಂದಿದ್ದ ಸೈಲೆಂಟ್ ಮತದಾರ ಕಳೆದ ಅಸೆಂಬ್ಲಿ ಚುನಾವಣೆ ಹೊತ್ತಲ್ಲೇ ಬದಲಾಗಿದ್ದರು. ಈ ಬಾರಿಯೂ ಮತ್ತೊಂದು ಬದಲಾವಣೆಗೆ ಆ ಮತದಾರ ಹಾತೊರೆದಿದ್ದಾನೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸುರತ್ಕಲ್, ಪುತ್ತೂರು ಎರಡೂ ಕಡೆ ಕಾಂಗ್ರೆಸ್ ಗೆದ್ದಿದೆ. ಇವೆರಡೂ ಕ್ಷೇತ್ರಗಳು ಬಿಜೆಪಿಯ ಶಕ್ತಿ ಕೇಂದ್ರಗಳು. ಜತೆಗೆ ಸುಳ್ಯವೂ ಬಿಜೆಪಿ ಬಲವಿರುವ ಪ್ರದೇಶ. ಸುರತ್ಕಲ್‌ನಲ್ಲಿ ಕಾಂಗ್ರೆಸ್‌ನ ಬಾವಾ ಗೆದ್ದಿರುವುದು ರಂಗೀಲಾ ಪಾಲೇಮಾರ್‌ನ ಬಗ್ಗೆ ಜನರಿಗಿದ್ದ ಆಕ್ರೋಶದಿಂದಲೇ ಹೊರತು ಬಿಜೆಪಿ ಬಗೆಗಿನ ಬೇಸರದಿಂದಲ್ಲ. ಹಾಗೆಯೇ ಪುತ್ತೂರಲ್ಲಿನ ಬಿಜೆಪಿ ಬದಿಗಿರುವ ಮತದಾರರು ಶಕುಂತಲಾ ಶೆಟ್ಟಿಗೆ ಕಲ್ಲಡ್ಕ ಗ್ಯಾಂಗ್ ಮಾಡಿದ ದ್ರೋಹ-ಅನ್ಯಾಯಕ್ಕೆ ಪ್ರತಿರೋಧ ತೋರಿಸಿದ್ದರು. ಹೀಗಾಗಿ ಈ ಬಾರಿಯೂ ಈ ಮೂರು ಕಡೆ ಬಿಜೆಪಿಗೆ ಲೀಡ್ ಬರುವ ಸಾಧ್ಯತೆಯಿದೆ. ಮೂಡಬಿದರೆಯಲ್ಲಿ ಮೊಯ್ಲಿ ಶಿಷ್ಯ ಅಭಯ (ಮಂತ್ರಿ) ಮತ್ತು ಮಾಜಿ ಮಂತ್ರಿ ಅಮರನಾಥ ಶೆಟ್ಟರ ಜೆಡಿಎಸ್ ಬಳಗ ಎಸ್‌ಡಿಪಿಐಗೆ ಸಹಾಯ ಮಾಡಿದ್ದಾರೆ. ಸುಳ್ಯದಲ್ಲಿ ಚಡ್ಡಿ ಪಡೆ ಕ್ರಮಬದ್ಧವಾಗಿ ನಡೆಸಿಕೊಂಡು ಬಂದಿದ್ದ ಬೂತ್ ಕ್ಯಾಪ್ಚರಿಂಗ್, ನಕಲಿ ವೋಟಿಂಗ್‌ಗೆ ಈ ಬಾರಿ ಕಾಂಗ್ರೆಸ್ ಬ್ರಿಗೇಡ್ ಕಡಿವಾಣ ಹಾಕಿದೆ!

ಕಳೆದ ಲೋ.ಸ. ಎಲೆಕ್ಷನ್‌ನಲ್ಲಿ ಆದಂತೆ ಏಕಮುಖ ಮತದಾನ ಈ ಬಾರಿ ಆಗಿಲ್ಲ, ಮತದಾರರು ಬಿಜೆಪಿಯ ಮೋಡಿಯಿಂದ ಹೊರಬಂದು ಯೋಚಿಸಿ ಓಟು ಹಾಕಿದ್ದಾರೆ. ಸುಳ್ಯದ ಕಡೆಯ ತಮಿಳರು ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಒಲಿದಿದ್ದಾರೆ. ಬಂಟ್ವಾಳ, ಉಳ್ಳಾಲ, ಮಂಗಳೂರು ವಿಧಾನಸಭಾ ಸೆಗ್ಮೆಂಟ್‌ಗಳಲ್ಲಿ ಕಾಂಗ್ರೆಸ್‌ಗೆ ದೊಡ್ಡ ಮಟ್ಟದ ಲೀಡ್ ಬಂದಿದೆ. ಬೆಳ್ತಂಗಡಿ ನಿರ್ಣಾಯಕ ಆಗಿದೆ. ಇದು ಬಿಲ್ಲವರ ಬಾಹುಳ್ಯದ ಪ್ರದೇಶವಾದರೂ ಅದ್ಯಾಕೋ ಶಾಸಕ ವಸಂತ ಬಂಗೇರಾ ಒಂಚೂರು ಕಳೆಗುಂದಿದಂತಾಗಿದ್ದಾರೆ. ಧರ್ಮಸ್ಥಳದ ದೇವಲೋಕದಲ್ಲಿ ರೇಪ್ ಅಂಡ್ ಮರ್ಡರ್ ಆದ, ದೇವಧೂತರ ಯುವ ರಾಜರ ಪಡೆಯ ಬಲಿ ಪಶು ಸೌಜನ್ಯಳ ಕೇಸ್ ಕೈಗೆತ್ತಿಕೊಂಡು ಹೀರೋ ಆಗಿದ್ದ ತೀಮರೋಡಿ ಮಹೇಶ್ ಎಂಬ ಪಕ್ಕಾ ಅನಾಹುತಕಾರಿ ಕೇಸರಿ ಕ್ರಿಮಿ ಮುಂದಿನ ಬಿಜೆಪಿ ಎಮ್ಮೆಲ್ಲೆ ಆಗುವ ಆಸೆಯಿಂದ ನಳಿನ್‌ನ ಪರ ಕೆಲಸ ಮಾಡಿದ್ದಾನೆ.

ಕಲ್ಲಡ್ಕ ಸಂಪ್ರೀತಗೊಳಿಸಲು ಸೌಜನ್ಯ ಪ್ರಕರಣದಿಂದ ಬಂದ ಬಲವನ್ನು ಹಿಂದೂತ್ವದ ಅನಾಹುತಕ್ಕೆ ಅಡವಿಟ್ಟಿದ್ದಾನೆ. ಇದೇನಾದರೂ ವರ್ಕ್‌ಔಟ್ ಆದರೆ ಬಿಜೆಪಿಗೆ ಇಲ್ಲಿ ಲೀಡ್ ಬರಲಿದೆ. ಜನಾನುರಾಗಿ ಶಾಸಕ ಬಂಗೇರಾ ಚರಿಷ್ಮಾದ ಎದುರು ತಿಮರೋಡಿ ಕುತಂತ್ರ ಕೆಲಸ ಮಾಡಿಲ್ಲ ಎಂದು ವಿಶ್ಲೇಷಿಸುವವರೂ ಇದ್ದಾರೆ. ತಿಮರೋಡಿ ಕಂದರಾಗದ ಸ್ಥಳೀಯ ಚಡ್ಡಿ ಗ್ಯಾಂಗ್‌ನ ಪ್ರತಾಪಸಿಂಗ್‌ನಾಯಕ್ ವಗೈರೆಗಳ ಒಳಗೊಳಗೇ ಕಾಂಗ್ರೆಸ್ ಪರ ಕೆಲಸ ಮಾಡಿದ್ದಾರೆ. ಈ ನಾಯಕನೂ ಬಿಜೆಪಿ ಎಂಪಿ ಟಿಕೆಟ್ ಆಕಾಂಕ್ಷಿ ಆಗಿದ್ದನೆಂಬ ಅಂಶ ಇಲ್ಲಿ ಕೆಲಸ ಮಾಡಿದೆ.

ಇಷ್ಟಾಗಿಯೂ ಪೂಜಾರಿಯೇ ಗೆದ್ದೇ ಗೆಲ್ಲುತ್ತಾರೆಂಬ ಸನ್ನಿವೇಶವೇನೂ ಇಲ್ಲ, ಇದಕ್ಕೆ ಕಾರಣ ಪೂಜಾರಿಯ 'ಹೆಡ್ ಮಾಸ್ತರಿಕೆ' ಗತ್ತು- ಗೌಜ! ಕಾಂಗ್ರೆಸ್ಸಿನೊಳಗೇ ಆತನ ಮುಗಿಸಲು ಪಡೆಯೊಂದು ಟೊಂಕಕಟ್ಟಿ ಕೆಲಸ ಮಾಡಿದೆ ಖುದ್ದು ಮಂತ್ರಿ ರಮಾನಾಥ್ ರೈಗೇ ಪೂಜಾರಿ ಗೆಲುವು ಬೇಡವಾಗಿದೆ. ಅತ್ತ ಪುತ್ತೂರಲ್ಲಿ ಇನ್ನೂ ಸಂಘ ಪರಿವಾರದ ಹಂಗು-ಗುಂಗಲ್ಲಿರುವ ಶಾಸಕ ಶಕು ಅಕ್ಕ ಮೈಚಳಿ ಬಿಟ್ಟು ಕಾಂಗ್ರೆಸ್ ಪರ ಕೆಲಸ ಮಾಡಿಲ್ಲ, ಮಂಗಳೂರಲ್ಲಿ ಶಾಸಕ ಲೋಬೋಗೆ ಸ್ವಜಾತಿ ಕ್ರಿಶ್ಚಿಯನ್ನರನ್ನು ದೊಡ್ಡ ಪ್ರಮಾಣದಲ್ಲಿ ಮತ ಚಲಾವಣೆ ಇಳಿಸಬೇಕೆಂಬ ನೈತಿಕ ಪ್ರಜ್ಞೆ ಕಾಡಿಲ್ಲ ಹಾಗೆಯೇ ಎರಡನೇ ಸಾಲಿನ ಹಲವು ಪುಢಾರಿಗಳು ಪೂಜಾರಿ ಎಂಪಿಯಾದರೆ ತಮಗೆ ಕಿವಿ ಹಿಂಡುತ್ತಾರೆಂದು ಕಿತಾಪತಿ ಮಾಡಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಪಾಳೆಯದ ಕಾಲೆಳೆದಾಟದ ಸಾಧ್ಯಾಸಾಧ್ಯತೆಗಳೂ ಸಮತೂಕದಲ್ಲಿ ನಡೆದಿದೆ. ಹೀಗಾಗಿ ಫಲಿತಾಂಶ ಫಿಫ್ಟಿ-ಫಿಫ್ಟಿ.

## ಉಡುಪಿ-ಚಿಕ್ಕಮಗಳೂರು

ಉಡುಪಿ-ಚಿಕ್ಕಮಗಳೂರು ಪಾರ್ಲಿಮೆಂಟ್ ಫೈಟಿಂಗ್ ಬಿಜೆಪಿಯ ಶೋಭಾ ಕರಂದ್ಲಾಜೆಯ ಕೊಪ್ಪರಿಗೆ ಕಪ್ಪ ಹಣ ಮತ್ತು ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಯ ಜನಾನುರಾಗಿ ವ್ಯಕ್ತಿತ್ವದ 'ಈಶ್ಯೂ'ಗಳ ಮೇಲೆ ನಡೆದುಹೋಗಿದೆ. ಒಂದು ವರ್ಷ ಎಂಟು ತಿಂಗಳು ಎಂಪಿಯಾಗಿದ್ದ ಜೆಪಿ ಐದ್ವತ್ತು ವರ್ಷ ಸಂಸದನಾಗಿದ್ದವರಿಂದಲೂ ಮಾಡಲಾಗದಷ್ಟು ಜನಪರ ಕೆಲಸ ಮಾಡಿದ್ದರು. ಜನಸಾಮಾನ್ಯರಿಗೆ ಸದಾ ರಿಚೇಬಲ್ ಆಗಿರುತ್ತಿದ್ದ ಜೆಪಿ ಸಮಷ್ಟಿಯ ಸಮಸ್ಯೆ ಏನೇ ಇದ್ದರೂ ಅಲ್ಲಿ ಅಪರಾತ್ರಿಯೂ ಹಾಜರಾಗುತ್ತಿದ್ದರು. ಸತತ ಆರೆಂಟು ತಿಂಗಳು ಕ್ಷೇತ್ರ ಹದ ಮಾಡಿಕೊಂಡಿದ್ದ ಅಂದಿನ ಆಳುವ ಪಕ್ಷದ (ಬಿಜೆಪಿ) ಸದಾನಂದ ಗೌಡನಂಥ ಅರೆ ಗೌಡನಿಗೆ ಎಂಟ್ಹತ್ತು ದಿನದ ಪ್ರಚಾರದಲ್ಲಿ ನೀರು ಕುಡಿಸಿ ಗೆಲುವಿನ ಹತ್ತಿರಕ್ಕೆ ಬಂದಿದ್ದ ಜೆಪಿ ಮರು ಚುನಾವಣೆಯಲ್ಲಿ ಗೆದ್ದಿದ್ದು ಅರ್ಧ ಲಕ್ಷದಷ್ಟು ಮತದಿಂದ.

ಜೆಪಿ ಗೆಲ್ಲಲಿ ಸೋಲಲಿ ಜನರ ಬಳಿಯೇ ಇದ್ದರು ಅದೇ ಈ ಚುನಾವಣೆಯಲ್ಲಿ ಆತನಿಗೆ ಬಲವಾಗಿತ್ತು ಹಾಗೆಯೇ ಕಾಂಗ್ರೆಸ್‌ನಲ್ಲಿ ಜೆಪಿ ಬಗ್ಗೆ ಸ್ವಲ್ಪವೂ ಬೇಸರ ಭಿನ್ನಮತ ಎಂಬುದಿರಲಿಲ್ಲ, ಮೋಟಮ್ಮ-ತಾರಾದೇವಿಯಂಥ ಹಿರಿಯ 'ದೇವತೆ'ಗಳಿಂದ ಹಿಡಿದು ಕಿರಿ-ಮರಿ ಮುಖಂಡರೆಲ್ಲ ಒಟ್ಟಾಗಿ ಜೆಪಿ ಗೆಲುವಿಗೆ ಬೆವರು ಹರಿಸಿದ್ದಾರೆ. ಕರಾವಳಿಯಲ್ಲಿ ಮಂತ್ರಿ ಸೊರಕೆಯೂ ಜೆಪಿ ಬಗೆಗಿನ ಹಳೆ ಬೇಸರ ಮರೆತು ಕೆಲಸ ಮಾಡಿದ್ದಾರೆ ಆದರೆ ಉಡುಪಿ ಶಾಸಕ ಪ್ರಮೋದ್ ಮದ್ವರಾಜ್ ಅದ್ಯಾಕೋ ಜೆಪಿ ಪರ ಪ್ರಚಾರಕ್ಕೆ ಉತ್ಸಾಹದಿಂದ ಇಳಿದಿರಲಿಲ್ಲ, ತರಿಕೆರೆ ಉಡುಪಿ, ಕಾಪುಗಳಲ್ಲಿ ಕಾಂಗ್ರೆಸ್ ಶಾಸಕರೇ ಇದ್ದಾರೆ. ಅತ್ತ ಮೂಡಿಗೆರೆಯಲ್ಲಿ ಬಿಜೆಪಿಯ ಮಾಜಿ ಶಾಸಕ ಕುಮಾರಸ್ವಾಮಿಯ ಮಕಾಡೆ ಮಲಗಿಸುವ ಆತನದೇ ಪಕ್ಷದ ಸಿ.ಟಿ. ರವಿ, ಜೀವರಾಜ್ ವಗೈರೆ ಸವರ್ಣೀಯರ ಕಿತಾಪತಿಯಿಂದ ಮತ್ತು ಮೂಡಿಗೆರೆಯ ಜೆಡಿಎಸ್ ಶಾಸಕ ನಿಂಗಯ್ಯನಿಗೆ ಲೋ.ಸ. ಎಲೆಕ್ಷನ್‌ನಲ್ಲಿ ಮಹತ್ವ ಇರದಿದ್ದರಿಂದ ಜೆಪಿಗೆ ಅಲ್ಲಿ ಪ್ಲಸ್ ಆಗಿದೆ. ಎನ್‌ಆರ್ ಪುರದಲ್ಲಿ ಜೆಪಿಗೆ ಹೆಚ್ಚು ಮತ ಬಂದಿದೆ.

ಕಾಪು ಶಾಸಕ ಮಂತ್ರಿ ವಿನಯಕುಮಾರ್ ಸೊರಕೆ ಮಂತ್ರಿಯಾದ್ದರಿಂದ ಅನಿವಾರ್ಯವಾಗಿ ಆತ ಜೆಪಿಗೆ ಲೀಡ್ ಕೊಡಿಸಲೇಬೇಕಾಗಿದೆ. ದ್ವೇಷಾಸೂಯೆಯಿಂದ ಆ್ಯಂಟಿ ಮಾಡಿದರೆ ಮಂತ್ರಿಗಿರಿಗೇ ಸಂಚಕಾರ ಬರುವ ಸಾಧ್ಯತೆ ಉಡುಪಿಯಲ್ಲಿ ಪ್ರಮೋದ್ ಅದೆಷ್ಟೇ ಆಲಸ್ಯ ತೋರಿಸಿದರೂ ಅದಕ್ಕಿಂತ ಹೆಚ್ಚು ಪಕ್ಷ ವಿರೋಧಿ ಕೆಲಸ ಬಿಜೆಪಿಯ ಮಾಜಿ ಶಾಸಕ ರಘುಪತಿ ಭಟ್ಟ ಮಾಡಿದ್ದಾನೆ. ಯಡಿ ವಿರೋಧಿ ಗ್ಯಾಂಗ್‌ನಲ್ಲಿರುವ ಭಟ್ಟ ಶೋಭಕ್ಕ ಗೆಲ್ಲಲೇಬಾರದೆಂಬ ನಿರ್ಧಾರದವನು. ಹಾಗೆಯೇ ಉಡುಪಿಯಲ್ಲಿ ಜೆಪಿ ಹಿಂದೆ ಪ್ರತಿನಿಧಿಸುತ್ತಿದ್ದ ಬ್ರಹ್ಮಾವರ ಹಲವು ಪ್ರದೇಶ ಸೇರಿವೆ. ಅಲ್ಲೆಲ್ಲ ಜೆಪಿಗೆ ಪ್ರಮೋದ್‌ಗಿಂತ ಹೆಚ್ಚು ತಾಕತ್ತಿದೆ. ಹೀಗಾಗಿ ಈ ಉಡುಪಿ ಮತ್ತು ಕಾಪು ಎರಡರಲ್ಲೇ ಏನಿಲ್ಲವೆಂದರೆ ಜೆಪಿಗೆ ಆರೆಂಟು ಸಾವಿರ ಲೀಡ್ ಸಿಗಲಿದೆ.

ಬಿಜೆಪಿಯ ಶೋಭಕ್ಕನಿಗೆ ತಮ್ಮ ಕ್ಷೇತ್ರದಲ್ಲಿ ಮಾ ಸಣ್ಣ ಲೀಡ್ ಕೊಡಿಸಿ ಉಳಿದೆಡೆಯ ಮಲೆನಾಡು ಭಾಗದ ಹಿಂದೆ ಬೀಳಿಸುವ ಸ್ಕೆಚ್ ಸಿ.ಟಿ. ರವಿ ಮತ್ತು ಕಾರ್ಕಳದ ಭಜರಂಗಿ ಭೂತ ಸುನಿಲ್‌ಕುಮಾರ್ ಹೆಣೆದಿದ್ದರು. ಇದು ವರ್ಕ್‌ಔಟಾಗುವ ಸಾಧ್ಯತೆಯಿದೆ. ಶೃಂಗೇರಿಯಲ್ಲಿ ಬಿಜೆಪಿಯ ಶೋಭಕ್ಕನದೇ ಒಂದು ತೂಕ ಹೆಚ್ಚು, ಇಲ್ಲಿಯ ಶಾಸಕ ಯಡ್ಡಿ ಪರಮ ನಿಷ್ಠ ಜೀವರಾಜ್ ಎಂಬ ಚಡ್ಡಿ ಹುಡುಗ ಯಡ್ಡಿಯಂತೂ ತನ್ನ ಶಿವಮೊಗ್ಗ ಕ್ಷೇತ್ರವನ್ನೇ ಮರೆತ

ಮಗಳೂರಿನಲ್ಲೇ ತಕ್ತ ಕೇಂದ್ರೀಕರಿಸಿದ್ದರು. ತನ್ನ ಕಷ್ಟ-ದ ನಿಷ್ಠ 'ಸಂಗಾತಿ' ಶೋಭಾರನ್ನು ಕಲ್ಪಿತ ಮೋದಿ ರದಲ್ಲಿ ಮಂತ್ರಿ ಮಾಡುವ ಹಗಲುಗನಸು ಕಾಣುತ್ತಿದ್ದ ಚಿಕ್ಕಮಗಳೂರು ಭಾಗದ ಸ್ವಜಾತಿ ಲಿಂಗಾಯತರ ಕ್ರೂಢೀಕರಣಕ್ಕೆ ತರಹೇವಾರಿ ತಂತ್ರಗಾರಿಕೆ ನಡೆಸಿದ್ದರು. ಒಂದಿಷ್ಟು ಲಾಭ ಮಾಡಿಕೊಟ್ಟರೂ ತರೀಕೆರೆ ದಲ್ಲಿ ಜೆಪಿಯನ್ನು ಬಿಜೆಪಿಯಿಂದ ಮಣಿಸಲು ವಿಲ್ಲ. ಇಲ್ಲಿ ಸಮತೂಕ ಯಡ್ಡಿ ಶೋಭಾಯಮಾನಕ್ಕೆ ವ ಎಲ್ಲ ಕಸರತ್ತುಗಳೂ ವ್ಯರ್ಥ ಮಾಡಲು ಸಿ.ಟಿ. ಸುನಿಲ್, ರಘುಪತಿಗಳ ಮಸಲತ್ತುಗಳೇ ಸಾಕು.

ಮತ್ತೆ ಹಾಗೇ ಘಟ್ಟ ಇಳಿದು ಕರಾವಳಿಗೆ ಬಂದರೆ ಪುರ ಅಸೆಂಬ್ಲಿ ಕ್ಷೇತ್ರವೇ ನಿರ್ಣಾಯಕ! ಹೇಗೆ ದ ಮೇಲಿನ ಲಿಂಗಾಯತರು ಹೇಗೆ ಯಡ್ಡಿಯ "ಲಿಂಗ" ಏಕಮುಖವಾಗಿ ಮತ ಒತ್ತಿದ್ದಾರೋ ಹಾಗೆಯೇ ಳಿಯ ಬಹುಸಂಖ್ಯಾತ ಬಂಟರು ಸ್ವ-ಜಾತಿ ಜೆಪಿಗೆ ಸಗಟಾಗಿ ಬೆಂಬಲಿಸಿದ್ದಾರೆ. ಕುಂದಾಪುರದಲ್ಲಿ ಈ ರದೇ ಪ್ರಾಬಲ್ಯ. ಕಳೆದ ಬಾರಿ ಕಾಂಗ್ರೆಸ್ ಇಲ್ಲಿ 40 ರ ಮತ ಪಡೆದಿದೆ. ಇದು ಜೆಪಿಗೆ ಗ್ಯಾರಂಟಿ. ಅಲ್ಲಿ ವಾತ ಬಿಜೆಪಿ ಬಂಡಾಯಗಾರ ಹಾಲಾಡಿ ಶ್ರೀನಿವಾಸ್ ಈತನಿಗೆ ಜಾತಿ ಕಾರಣಕ್ಕೆ-ಈತನ ಗಿಲೀಟಿಗೆ ಒಲಿದ ರು ಮತ್ತು ಮೀನುಗಾರ-ಮುಸ್ಲಿಮ್ ಮತದಾರರು ಲ ಜೆಪಿ ಕೈಹಿಡಿದಿದ್ದಾರೆ. ಕುಂದಾಪುರದಲ್ಲಿ ಹೇಗೆ ಚಾರ ಹಾಕಿದರೂ ಜೆಪಿಗೆ ಬಿಜೆಪಿಗಿಂತ 25 ಸಾವಿರ ಮತ ಬರುತ್ತದೆ. ಇದೇ ಜೆಪಿಗೆ ಜಯ ತರಲಿದೆ ಭಯ ಯಡ್ಡಿ-ಶೋಭಾ ಚಿಂತನ-ಮಂಥನ ಗಳಲ್ಲಿ ಮೂಡಿಸಿಬಿಟ್ಟಿದೆ.

ಜೆಡಿಎಸ್‌ನ ದಗಲುಬಾಜಿ ಧನಂಜಯಕುಮಾರ್ ತನ್ನ (ಜೈನ್) ಮತಗಳೇ 80 ಸಾವಿರ ಇದೆಯೆಂದು ಯಿಕೊಚ್ಚಿದ್ದ. ಆದರೆ ಈತ ಇಡೀ ಕ್ಷೇತ್ರದಲ್ಲಿ ತುಕನಾಗೇ ಉಳಿದುಹೋದ. ಎಲೆಕ್ಷನ್ ಯುವತನಕ ಅಬ್ಬಬ್ಬಾ ಎಂದರೆ ಜೆಡಿಎಸ್‌ಗೆ 50 ರ ಮತ ಬರಬಹುದು. ಇದು ದೇವೇಗೌಡರ ಗೆಯೇ ಹೊರತು ಧನಂಜಯನ ಪರಾಕ್ರಮವಲ್ಲ. ಗಿ ಬಿಜೆಪಿಗೆ ಅಂಥ ಹಾನಿಯೇನಿಲ್ಲ. ಸಿಪಿಐನ ಮ್‌ಕುಮಾರ್ ನಿರೀಕ್ಷಿತ ಮಟ್ಟಮುಟ್ಟುವುದು ಕಷ್ಟ. ೂ ಹೆಚ್ಚೆಂದರೆ 25 ಸಾವಿರ ಓಟು ಪಡೆಯಬಹುದು. ಗಿ ಕಾಂಗ್ರೆಸ್ಸಿಗೆ ಸಿಪಿಐನಿಂದ ಹಾನಿ ದೇನಾಗುತ್ತಿಲ್ಲ.

ಮೋದಿ ಪುಗ್ಗೆ, ಅಡಿಕೆ ನಿಷೇಧ ಗುಮ್ಮ ತನ್ನ ಯಾಗಿಸುತ್ತದೆಂದು ಶೋಭಕ್ಕ ಎಣಿಸಿದ್ದಾರೆ. ಆದರೆ ಯಿಂದ ಬಿಜೆಪಿಗೆ ಎಷ್ಟು ಲಾಭವಾಗಿದೆಯೋ ಅಷ್ಟೇ ಮೋದಿಯಿಂದ ಕಾಂಗ್ರೆಸ್‌ಗೆ ಆಗಿದೆ. ಮೋದಿ ದಿಂದ ಅಲ್ಪಸಂಖ್ಯಾತರು ದೊಡ್ಡ ಸಂಖ್ಯೆಯಲ್ಲಿ ಮತ ಕೇಂದ್ರಕ್ಕೆ ಬಂದಿದ್ದಾರೆ. ಅಡಿಕೆ ಅಸ್ತ್ರವೂ ಎರಡೂ ರುವರಿಗೆ ಪ್ಲಸ್-ಮೈನಸ್ ಮಾಡಿದೆ. ಏನೇ ಇರಲಿ ಮುಖಾಮುಖಿ ಕಾಳಗದಲ್ಲಿ ಕಾಂಗ್ರೆಸ್‌ನ ಜೆಪಿ ಎಂಟ್ಹತ್ತು ಅಂತರದಿಂದ ಪಾರ್ಲಿಮೆಂಟಿಗೆ ಹೋಗುತ್ತಾರೆಂಬ ಗ್‌ಗಳು ಜೋರಾಗಿ ಕ್ಷೇತ್ರದಾದ್ಯಂತ ನಡೆದಿದೆ! ಪ್ರತಿ ಬ್ಲಾಕ್‌ನಲ್ಲಿ ಶೋಭಾ-ಯಡ್ಡಿ ಜೋಡಿ ಹಂಚಿರುವ ದು ಕೋಟಿ ಜೆಪಿಯ ಸರಳ-ಸಜ್ಜನ-ಸಮರ್ಥ ಳೆಂಬ ಅಲೆಯೆದುರು ತರಗೆಲೆಯಂತಾಗಿದೆ.

## ಉತ್ತರ ಕನ್ನಡ

ಉತ್ತರ ಕನ್ನಡದ ರಣರಂಗದಲ್ಲಿ ಇಬ್ಬರು ಮುಖಂಡಿಗಳು ಮುಖಿಯಾಗಿ ನಿಂತಿದ್ದರು. ಬಿಜೆಪಿಯ ಭಂಡ ಡೇಟ್‌ಗೆ ಮೋದಿ ನಾಮವೇ ಬಲ; ಕಾಂಗ್ರೆಸ್‌ನ ಣಿಗೆ ಮಂತ್ರಿಯಾಗಿರುವ ಅಪ್ಪ ದೇಶಪಾಂಡೆ ಹೆಸರೇ ು. ನಾಲ್ಕು ಬಾರಿ ಸಂಸದನಾಗಿ ನಾಲ್ಕು ಬಿಲ್ಲಿ ಕೆಲಸ ಸದ ಜನದ್ರೋಹಿ, ಹಿಂದೂತ್ವದ ಮೋಸಗಾರ ತ್ಮಾಣಿ ವಿರುದ್ಧ ಎಂಥ ಪ್ರಚಂಡ ಮಾರುತ ಎದ್ದಿತ್ತೋ, ಪ್ರಬಲವಾಗಿ ದೊಡ್ಡ ದೇಶಪಾಂಡೆಯ ಪಾಳೆಗಾರಿಕೆ, ಪಾರಂಪರ್ಯ ರಾಜಕಾರಣ, ಸ್ವಜನಪಕ್ಷಪಾತದ ವಿರುದ್ಧ ಎದ್ದಿತ್ತು, ಈ ಆ್ಯಂಟಿ ವೇವ್‌ಗಳು ಕಾಂಗ್ರೆಸ್‌ನ ಪ್ರಶಾಂತ್ ಪಾಂಡೆ ಮತ್ತು ಬಿಜೆಪಿಯ ಅನಂತ್ಕುಮಾರ್‌ಗಳ ಗೆಲುವಿನ ಸಾಧ್ಯತೆಯನ್ನು ಅರ್ಧರ್ಧ ಮಾಡಿಟ್ಟಿದೆ!

ಸಂಸದ ಕ್ಷೇತ್ರದ ಎಂಟು ಅಸೆಂಬ್ಲಿ ಕ್ಷೇತ್ರಗಳ ಪೈಕಿ ಯಲ್ಲಾಪುರ ಮತ್ತು ಕುಮಟಾದಲ್ಲಿ ಬಿಜೆಪಿಗೆ ಬಹಳ ರುವ ಸಾಧ್ಯತೆಯಿದೆ. ಕಾಂಗ್ರೆಸ್‌ಗೆ ಭಟ್ಕಳ, ಹಳಿಯಾಳ, ಪುರ ಮತ್ತು ಕಿತ್ತೂರಲ್ಲಿ ಲೀಡ್ ಸಿಗಲಿದೆ. ವಾರದಲ್ಲಿ ಸಮ ಹಂಚಿಕೆಯಾಗಿದೆ. -ಸಿದ್ಧಾಪುರ-ಯಲ್ಲಾಪುರ ಬ್ರಾಹ್ಮಣರ ಬಾಹುಳ್ಯದ ಈ ಬ್ರಾಹ್ಮಣರು ಬಿಜೆಪಿಯ ಜನಿವಾರ-ಮನುವಾದ ರುವರು. ಇವರಿಗೆ ಕಾಂಗ್ರೆಸ್ ಸರ್ಕಾರ ಅಡಿಕೆ ಬೆಲೆ ಲಿಗೆ 50 ಸಾವಿರ ಮಾಡಿಸಿದರೂ ಇವರು ಬಿಜೆಪಿ ಸಿಗರೇಟ್ ಬ್ಯಾನ್ ಮಾಡಿ ಅಡಿಕೆ-ರಾಸಾಯನಿಕ ತ ಅಪಾಯಕಾರಿ ಗುಟಕಾಕ್ಕೆ ಮುಕ್ತ ಅವಕಾಶ ದರೂ ಇವರು ಕಾಂಗ್ರೆಸ್ ಬೆಂಬಲಿಸಲಾರರು. ಇದು ಕನ್ನಡದ ಬ್ರಾಗಾಯಿತ್ತ "ಅಡಿಕೆ ರಾಜಕಾರಣ."

ಅಡಿಕೆ ನಿಷೇಧ ಗುಮ್ಮ ಈ ಹೈಗರಿಗೊಂದು ನೆಪವಷ್ಟೇ.

ಹಾಗಾಗಿ ಶಿರಸಿ-ಸಿದ್ಧಾಪುರ-ಯಲ್ಲಾಪುರದಲ್ಲಿ ಬಿಜೆಪಿಗೆ ಲಾಭವಾಗಿದೆ. ಶಿರಸಿ ಶಾಸಕ ಕಾಗೇರಿ ಮಾಣಿ ಸಂಸದ ಅಭ್ಯರ್ಥಿ ಅನಂತ್ಮಾಣಿ ವಿರೋಧಿಯಾದರೂ ಸ್ವ-ಜಾತಿ ಮತ ಬಿಜೆಪಿಯಿಂದ ಕದಲಿಸುವ ತಾಕತ್ತು ಆತನಿಗಿಲ್ಲ. ಹಾಗೆಯೇ ದೇಶಪಾಂಡೆ ಹಿಂದೆಮುಂದೆ ಜೊಲ್ಲು ಸುರಿಸುತ್ತ ಓಡಾಡುವ ನಕಲಿ ಹೈವ್ಯಕ ಮುಖಂಡರಾದ ಶಾಂತಾರಾಮ ಹೆಗಡೆ, ಬಾಬು ಹೆಗ್ಡೆಯಾನೆ ಶಿವಾನಂದ ಹೆಗಡೆ, ಪ್ರಮೋದ್ ಹೆಗಡೆ ವಗೈರೆಗಳಿಗೆ ಕಾಂಗ್ರೆಸ್‌ಗೆ ಒಂದೇ ಒಂದು ಸ್ವ-ಜಾತಿ ವೋಟು ಹಾಕಿಸುವ ಯೋಗ್ಯತೆಯಿಲ್ಲ. ಯಲ್ಲಾಪುರದ ಕಾಂಗ್ರೆಸ್ ಶಾಸಕ ಶಿವರಾಮ ಹೆಬ್ಬಾರ್ ದೇಶಪಾಂಡೆ ವಿರೋಧಿ ಗ್ಯಾಂಗಿನ ಮ್ಯಾಗಿ ಶಿಬಿರದವರು. ಅದಕ್ಕಿಂತ ಹೆಚ್ಚು ಬಿಜೆಪಿ ಎಂಪಿ ಅಭ್ಯರ್ಥಿ ಅನಂತ್ಮಾಣಿಯ ಗೆಣೆಗಾರ. ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಮ್ಯಾಗಿ ಸ್ವಪಕ್ಷದ ಪಾಟೀಲ್‌ಗೆ ಬತ್ತಿ ಇಟ್ಟು ಹೆಬ್ಬಾರ್‌ಗೆ ಹೆಲ್ಪ್ ಮಾಡಿದ್ದ. ಆ ಋಣ ಈಗ ಹೆಬ್ಬಾರ್ ತೀರಿಸಿದ್ದಾರೆ.

ಹಳಿಯಾಳ-ಖಾನಾಪುರ-ಕಿತ್ತೂರಲ್ಲಿ ಕಾಂಗ್ರೆಸ್ ಏನಿಲ್ಲವೆಂದರೂ 50-60 ಸಾವಿರ ಲೀಡ್ ಮಾಡಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಇದಕ್ಕೆ ಕಾರಣ ಈ ಅಕ್ಕ-ಪಕ್ಕದ ಕ್ಷೇತ್ರದಲ್ಲಿ ದೇಶಪಾಂಡೆಯ "ಮರಾಠ" ಮಸಲತ್ತಿನ ಪ್ರಭಾವ ಜಾಸ್ತಿ. ಹಳಿಯಾಳ ದೇಶಪಾಂಡೆಯದೇ ಸ್ವಂತ ಕ್ಷೇತ್ರ. ಖಾನಾಪುರ ಎಂಇಎಸ್ ಶಾಸಕ ಪಾಟೀಲ್ ದೇಶಪಾಂಡೆಯ ದೋಸ್ತನಾದರೆ, ಕಿತ್ತೂರಿನ ಬಿ.ಡಿ. ಇನಾಮದಾರ್ ಕಾಂಗ್ರೆಸ್ ಶಾಸಕ. ಆದರೆ ಕಾರವಾರದಲ್ಲಿ ಜೈಲುವಾಸಿ ಶಾಸಕ (ಪಕ್ಷೇತರ) ಸತೀಶ್ ಸೈಲ್ ದೇಶಪಾಂಡೆಗೆ ದೋಖಾ ಹಾಕಿದ್ದಾನೆ. ತಾನು ಜೈಲು ಸೇರದಂತೆ, ಕಾಂಗ್ರೆಸ್ ಕ್ಯಾಂಡಿಡೇಟಾಗದಂತೆ ದೇಶಪಾಂಡೆ ಮಸಲತ್ತು ಮಾಡಿದ್ದಾನೆಂಬ ಸಿಟ್ಟು ಸೈಲ್‌ಗಿದೆ. ಹಾಗಾಗಿ ಆತ ತನ್ನ ಧರ್ಮಪತ್ನಿಯನ್ನು ಕಾಂಗ್ರೆಸ್ ಪರ ರೋಡ್‌ಶೋಗೆ ಕಳಿಸಿ ಒಳಗೊಳಗೇ ಬತ್ತಿ ಇಟ್ಟಿದ್ದಾನೆ. ಇದರಿಂದಾಗಿ ಕಾರವಾರದಲ್ಲಿ ಫಿಫ್ಟಿ-ಫಿಫ್ಟಿ ಬಲ ಎರಡೂ ಪಾರ್ಟಿಗೆ ಬಂದಿದೆ. ಅಕಸ್ಮಾತ್ ಎನ್‌ಡಿಎ ಸರ್ಕಾರ ದಿಲ್ಲೀಲಿ ಬಂದರೆ ಜೈಲಿಂದ ಹೊರಬರಲು ಅನುಕೂಲವಾಗಬಹುದೆಂಬುದು ಸೈಲ್ ಎಣಿಕೆ, ಪಾಪ.


ಭಟ್ಕಳದಲ್ಲಿ ಪಕ್ಷೇತರ ಶಾಸಕ ಮಂಕಾಳು ವೈದ್ಯ ದೀವರು V/s ದೀವರೇತರರು ವೈಷಮ್ಯದ ರಾಜಕೀಯ "ಯಶಸ್ವಿಯಾಗಿ" ಮಾಡಿದ್ದಾನೆ. ಇದು ಭಟ್ಕಳದಲ್ಲಿ ಕಾಂಗ್ರೆಸ್‌ಗೆ ಪ್ಲಸ್ ಮಾಡಿದರೆ, ಬಹುಸಂಖ್ಯಾತ ದೀವರು ದೇಶಪಾಂಡೆ-ವೈದ್ಯ ವಿರುದ್ಧ ಮತ ಹಾಕಿದ್ದಾರೆ. ಹೊನ್ನಾವರ-ಕುಮಟಾದಲ್ಲಿನ ಕಟ್ಟರ್ ಬಿಜೆಪಿ ಮತದಾರರಾದ ಕೊಂಕಣಿಗರು ಈ ಬಾರಿ ಸ್ವ-ಜಾತಿಯ ದೇಶಪಾಂಡೆಗೆ ಓಟು ಹಾಕಿದರೂ ಇಲ್ಲಿಯ ಶಾಸಕಿ ಶಾರದಾ ಶೆಟ್ಟಿ ಮತ್ತಾಕೆಯ ಅಧಿಕಪ್ರಸಂಗಿ ಮಗ ರವಿ ಶೆಟ್ಟಿ ದೇಶಪಾಂಡೆ ಮೇಲಿನ ಮುಯ್ಯಿ ತೀರಿಸಿಕೊಂಡಿದ್ದಾರೆ. ಕಾರವಾರದ ಸೀಬರ್ಡ್ ನಿರಾಶ್ರಿತರು, ಕರಾವಳಿಯ ಮೀನುಗಾರರು ತಮ್ಮ ಕಷ್ಟಕ್ಕೆ ಸ್ಪಂದಿಸದ ಅಸಂಬದ್ಧ ಸಂಸದ ಅನಂತ್ಮಾಣಿ ವೋಟಿನ ಶಕ್ತಿ ಏನೆಂದು ತೋರಿಸಿದ್ದಾರೆ. ದೇಶಪಾಂಡೆ ಕಮ್ಯುನಲ್ ಆರ್ಭಟಕ್ಕೆ ಬೆದರಿ ಕ್ರಿಶ್ಚಿಯನ್-ಮುಸ್ಲಿಮ್ ಮತದಾರರು ಕಾಂಗ್ರೆಸ್‌ಗೆ ಓಟು ಹಾಕುವ ಅನಿವಾರ್ಯಕ್ಕೆ ಬಿದ್ದಿದ್ದಾರೆ. ಜೆಡಿಎಸ್‌ನ ಹೇಡಿ ಶಿವಾನಂದ ನಾಯ್ಕ್ ರಣರಂಗದಿಂದ ಓಡಿಹೋಗಿದ್ದರಿಂದ ಈ ಸಮುದಾಯಕ್ಕೆ ಪರ್ಯಾಯ ಆಯ್ಕೆಯೇ ಇರಲಿಲ್ಲ.

ಜೆಡಿಎಸ್‌ನ ಹಲವು ಮರಿ-ಹಿರಿ ಮುಖಂಡರು ಕಾಂಗ್ರೆಸ್ ಸೇರಿದ್ದು ಪ್ಲಸ್ ಆಗಿದೆ. ಕ್ಷೇತ್ರದ ಬಿಜೆಪಿ ಕ್ಯಾಂಡಿಡೇಟ್ ನಾಮರ್ಧನಾದ್ದರಿಂದ ಮೋದಿ ಹವಾ ಒಳಗೊಳಗೇ ಗುಮಿಯತೊಡಗಿತ್ತು. ಸಂಘ ಪರಿವಾರ ಮತ್ತು ಬಿಜೆಪಿಯ ಮೂಲ ಕಾರ್ಯಕರ್ತರ "ಮಾಣಿಗಾಗಿ ಅಲ್ಲ ಮೋದಿಗಾಗಿ" ಎಂದು ವ್ಯವಸ್ಥಿತ ಪ್ರಚಾರ ನಡೆಸಿದ್ದರು. ಜೊತೆಗೆ ದೇಶಪಾಂಡೆಯ ವಂಶಪಾರಂಪರ್ಯ ರಾಜಕಾರಣ ಮತ್ತು ಠೇಂಕಾರದ ಕಾರ್ಯವೈಖರಿಯ ಭಯಾನಕ ಪ್ರಜ್ಞೆ ಮೂಡಿಸಿದ್ದರು. ಹೀಗಾಗಿ ನಿರ್ಣಾಯಕ ಸಮುದಾಯವಾದ ದೀವರು ಬಿಜೆಪಿ ಮೇಲೆ ಅದೆಷ್ಟೇ ಸಿಟ್ಟಿದ್ದರೂ ಅದಕ್ಕಿಂತ ದೇಶಪಾಂಡೆ ಅಪಾಯಕಾರಿ ಎಂದು ತೀರ್ಮಾನಿಸಿದ್ದರು. ಹೀಗಾಗಿ ದೀವರ 50% ಮತ ಬಿಜೆಪಿ ಪಾಲಾಗಿದೆ. ಬ್ರಾಹ್ಮಣರು ಮತ್ತು ದೀವರು ಒಂದಾಗಿರುವುದು ವಿಚಿತ್ರವಾದರೂ ಸತ್ಯ; ದೇಶಪಾಂಡೆಗೆ ಗಂಡಾಂತರಕಾರಿಯೂ ಹೌದು.

ಅಪ್ಪ-ಮಗನ ಪಾಳೆಗಾರಿಕೆಯ ಕುಟುಂಬ ಪ್ರಭುತ್ವ ಬೇಕಾ? ವಿಧ್ವಂಸಕ ಮಾಣಿ-ಮೋದಿ ಆಳ್ವಿಕೆ ಬೇಕಾ? ಇದು ಕೆನರಾ ಮತದಾರರ ಸಂದಿಗ್ಧ. ಈ ನಕಾರಾತ್ಮಕ ರಾಜಕೀಯ ಮೇಲಾಟದಲ್ಲಿ ಕಾಂಗ್ರೆಸ್‌ನ ಪ್ರಶಾಂತ್ ಮತ್ತು ಬಿಜೆಪಿಯ ಅನಂತ್ ಇಬ್ಬರಿಗೂ ಸಮಬಲ ಬಂದಿದೆ. ಯಾರೇ ಗೆದ್ದರೂ ಬೆರಳೆಣಿಕೆಯ ಸಾವಿರ ಮತದಂತರದಿಂದ. ಹಾಗಂತ ಕ್ಷೇತ್ರದಲ್ಲಿ ಪಂಡಿತರು-ಪಾಮರು ಒಂದೇ ರೀತಿಯಲ್ಲಿ ವಿಶ್ಲೇಷಿಸುತ್ತಿದ್ದಾರೆ; ಅಂತಿಮವಾಗಿ ಅಮುಲ್ ಬೇಬಿಯೇ ದಿಲ್ಲಿಗೆ ಹಾರುವ ಸೂಚನೆ ಗೋಚರಿಸುತ್ತಿದೆ.


● ಶುದ್ಧೋಧನ

# ನಿಮ್ಹಾನ್ಸ್‌ನಲ್ಲಿ ಹುಚ್ಚನ ವರ್ಕ್‌ಶಾಪ್!





ಇಷ್ಟು ದಿನ 'ಹುಚ್ಚಾಸ್ಪತ್ರೆ' ಎನಿಸಿಕೊಳ್ಳುತ್ತಿದ್ದ ಬೆಂಗಳೂರಿನ ನಿಮ್ಹಾನ್ಸ್ ಇನ್ನು ಸ್ವಲ್ಪ ದಿನದಲ್ಲೇ 'ಹುಚ್ಚರ ಆಸ್ಪತ್ರೆ'ಯಾಗುವ ಲಕ್ಷಣಗಳು ಜೋರಾಗಿ ಕಾಣಿಸುತ್ತಿವೆ. ಇಂತಹದ್ದೊಂದು ಅನುಮಾನಕ್ಕೆ ಕಾರಣವಾಗಿರೋದು ನಿಮ್ಹಾನ್ಸ್ ಆಡಳಿತ ಮಂಡಳಿಯ ಅರ್ಥವಿಲ್ಲದ ನಿರ್ಧಾರ.



ಡಾ. ಸತೀಶ್ ಚಂದ್ರ

ಮೇ 11ನೇ ತಾರೀಕಿನೊಳಗೆ ನಿಮ್ಹಾನ್ಸ್ ಮಂದಿಗೆ ಜ್ಞಾನೋದಯವಾಗ ದಿದ್ದರೆ ಅವತ್ತು ಅದೇ ನಿಮ್ಹಾನ್ಸ್‌ನ ಕನ್ವೆನ್ಷನ್ ಹಾಲ್‌ನಲ್ಲಿ ಒಂದು ಕಾರ್ಯಕ್ರಮ ನಡೆಯಲಿದೆ. ಅದು ಅಂತಿಂಥ ಕಾರ್ಯಕ್ರಮವಲ್ಲ. ಸ್ವಯಂಘೋಷಿತ ಹಿಮಾಲಯನ್ ರಿಟರ್ನ್ ಗುರೂಜಿಯೊಬ್ಬ ಬೆಳಗ್ಗೆ ಒಂಬತ್ತರಿಂದ ಸಂಜೆ ಆರರವರೆಗೆ ಬೋಧನೆ ಮಾಡುವ ಪುಣ್ಯ(?)ದ ವರ್ಕ್‌ಶಾಪ್! ಅಷ್ಟಕ್ಕೂ ಆತ ಬೋಧಿಸುವ ವಿಷಯಗಳಾದರು ಎಂತವು? ಮಾಟಮಂತ್ರ, ಪುನರ್ಜನ್ಮ ಸಮಸ್ಯೆ, ಶಾಪ, ಆರ್ಥಿಕ-ದಾಂಪತ್ಯ-ಸಂಬಂಧ ಸಮಸ್ಯೆಗಳಿಗೆ ಪರಿಹಾರ..... ಇವೇ ಮೊದಲಾದ ಅಸಂಬದ್ಧ ಕಮರ್ಷಿಯಲ್ ಜ್ಯೋತಿಷ್ಯದ ಪ್ರವಚನಗಳು.




ಮಾನವ ದೇಹದ ನರಮಂಡಲದೊಳಕ್ಕೇ ವಿಜ್ಞಾನವನ್ನು ಇಳಿಸಿ ಮನೋರೋಗಗಳಿಗೆ ವೈಜ್ಞಾನಿಕ ಮದ್ದು ನೀಡುವ ನಿಮ್ಹಾನ್ ಎಲ್ಲಿ, ಆಧಾರವೇ ಇಲ್ಲದೆ ಜನರ ಮುಗ್ಧತೆಗಳ ಮೇಲೆ ಸವಾರಿ ಮಾಡಿ ಆದಾಯ ಮಾಡಿಕೊಳ್ಳುವ ಅವೈಜ್ಞಾನಿಕ ಜ್ಯೋತಿಷ್ಯವೆಲ್ಲಿ.. ಒಂದಕ್ಕೊಂದು ಸಂಬಂಧವೇ ಇಲ್ಲ. ಟ್ರೀಟ್‌ಮೆಂಟ್‌ಗೆಂದು ಬರುವ ಒಬ್ಬ ಮನೋರೋಗಿಗೆ ಇವೆರಡು ವೈರುಧ್ಯಗಳು ಸ್ಪಷ್ಟವಾಗಿ ಮನವರಿಕೆಯಾಗುತ್ತಿದ್ದರೂ ನಿಮ್ಹಾನ್ಸ್ ಆಡಳಿತ ಮಂಡಳಿಗೆ ಅದ್ಯಾವ ಡಿಮೆನ್ಷಿಯಾ (ಮರೆವಿನ ರೋಗ) ಬಡಿದಿದೆಯೋ ಕಾಣೆ.

ತನ್ನ ಮೂಲ ಆಶಯಕ್ಕೆ ತದ್ವಿರುದ್ಧವಾದ ಕಮರ್ಷಿಯಲ್ ವರ್ಕ್‌ಶಾಪ್‌ಗೆ ಢೋಂಗಿ ಬಾಬಾನಿಗೆ ಸಭಾಂಗಣ ಬಿಟ್ಟುಕೊಟ್ಟಿರುವ ನಿಮ್ಹಾನ್ಸ್ ಮಂದಿಗೆ ಚಿತ್ತಭ್ರಮಣೆಯಾಗಿರುವುದು ಖಂಡಿತ. ಅಂದಹಾಗೆ, ಅವತ್ತು ವಿಜ್ಞಾನದ ನೆರಳಲ್ಲೇ ಅಜ್ಞಾನ, ಅಂಧಕಾರಗಳನ್ನು ಮಾರ್ಕೆಟಿಂಗ್ ಮಾಡಲು ಬರುತ್ತಿರುವ ಡೋಂಗಿ ಸ್ವಾಮಿ ರಾಮಚಂದ್ರ ಗುರೂಜಿ ಅಂತ. ಅದೇನು ಪುಕ್ಕಟೆ ವರ್ಕ್‌ಶಾಪ್ ಅಲ್ಲ, ಪ್ರವೇಶಕ್ಕೆ ಒಬ್ಬೊಬ್ಬರೂ ಬರೋಬ್ಬರಿ ಮೂರು ಸಾವಿರ ಫೀಜು ಕಟ್ಟಬೇಕಂತೆ! ಸಂಪೂರ್ಣ ಸರ್ಕಾರದ ಹಣದಿಂದಲೇ ನಡೆಯುತ್ತಿರುವ ಆಸ್ಪತ್ರೆ ಕಮ್ ಅಧ್ಯಯನ ಕೇಂದ್ರದ ಅಂಗಳವನ್ನು ಹಣಕ್ಕೋಸ್ಕರ ಸುಲಿಗೆಗೆ ಬಿಟ್ಟ ನಿರ್ದೇಶಕ ಡಾ. ಪಿ. ಸತೀಶ್ ಚಂದ್ರರಿಗೆ ಕಾಮನ್‌ಸೆನ್ಸ್ ಕೂಡಾ ಇದ್ದಂತಿಲ್ಲ.

ಇಂತಹದ್ದೊಂದು ಅನಾಚಾರ ಗೊತ್ತಾಗುತ್ತಿದ್ದಂತೆಯೇ ಭಾರತೀಯ ವಿಚಾರವಾದಿ ವೇದಿಕೆಯ ಅಧ್ಯಕ್ಷ ನರೇಂದ್ರ ನಾಯಕ್‌ರು ಎರಡೆರಡು ಬಾರಿ ನಿಮ್ಹಾನ್ಸ್ ನಿರ್ದೇಶಕರಿಗೆ ಪತ್ರ ಬರೆದು ಇದರ ವಿರುದ್ಧ ಪ್ರಶ್ನೆ ಎತ್ತಿದ್ದರೂ ಸೌಜನ್ಯಕ್ಕಾದರೂ ಅವರು ಉತ್ತರಿಸುವ ಗೋಜಿಗೇ ಹೋಗಿಲ್ಲ. ನಾಯಕ್ ಅವರು ಇತ್ತೀಚೆಗೆ ಬರೆದ ಪತ್ರ ಹೀಗಿದೆ.....

ಮಾನ್ಯರೇ,

ನನ್ನ ಕಳೆದ ಇ ಮೇಲ್‌ಗೆ ಯಾವುದೇ ಉತ್ತರ ನಿಮ್ಮಿಂದ ಬರದಿದ್ದರಿಂದ ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇನೆ ಮತ್ತು ಇದನ್ನು ಮಾಧ್ಯಮಗಳಿಗೂ ಬಿಡುಗಡೆ ಮಾಡುತ್ತಿದ್ದೇನೆ. ಏಪ್ರಿಲ್ 29ನೇ ತಾರೀಕಿನ ಮಂಗಳವಾರದ 'ದಿ ಹಿಂದೂ' ಪತ್ರಿಕೆಯ ಬೆಂಗಳೂರು ಅವತರಣಿಕೆಯಲ್ಲಿ ಬಂದ ಜಾಹೀರಾತೊಂದನ್ನು (ಅದರ ಸ್ಕ್ಯಾನ್ ಕಾಪಿಯನ್ನು ಇದರೊಂದಿಗೆ ಲಗತ್ತಿಸಿದ್ದೇನೆ) ನೋಡಿ ವಿಪರೀತ ಆಘಾತಕ್ಕೊಳಗಾದ ನಾನು ಅವತ್ತೇ ನನ್ನ ಅನಿಸಿಕೆಗಳನ್ನೆಲ್ಲಾ ದಾಖಲಿಸಿ ತಮಗೆ ಇ-ಮೇಲ್ ಮಾಡಿದ್ದೆ. ಆದರೆ ಇದುವರೆವಿಗೂ ಅದಕ್ಕೆ ತಮ್ಮಿಂದ ಪ್ರತಿಕ್ರಿಯೆ ಬಂದಿಲ್ಲ.

ತಾವೊಬ್ಬ ಪ್ರಖ್ಯಾತ ಮತ್ತು ಅದ್ಭುತ ನರರೋಗ ತಜ್ಞರಾಗಿದ್ದು ಸುಮಾರು ಇನ್ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿರುವುದರಿಂದ ನಾನು ನಿಮ್ಮಲ್ಲಿ ಈ ಪ್ರಶ್ನೆ ಕೇಳುತ್ತಿದ್ದೇನೆ; ಕರ್ಮಫಲಗಳಾಗಲಿ ಅಥವಾ ಸಂಬಂಧ, ಮಾಟಮಂತ್ರ, ಪುನರ್ಜನ್ಮ ಇಂತಹ ಕಲ್ಪನೆಗಳು ಮಾನಸಿಕ ರೋಗದಲ್ಲಿ ಪ್ರಭಾವ ಬೀರಬಲ್ಲವೆ? ನಮಗೆ ನೀವು ಇನ್ನೂ ಒಂದನ್ನು ಸ್ಪಷ್ಟಪಡಿಸಬೇಕು, ಏನೆಂದರೆ ಸಂಪೂರ್ಣ ಸರ್ಕಾರದ ಹಣದಿಂದಲೇ ನಡೆಯುತ್ತಿರುವ ನಿಮ್ಮಂತಹ ಸಂಸ್ಥೆಗಳು ಅನುಸರಿಸುತ್ತಿರುವ ಪುರಾವೆ ಸಹಿತ ವೈದ್ಯಕೀಯ ಪದ್ಧತಿಯು 'ಹಿಂದಿನ ಜನ್ಮ'ವನ್ನು ಒಪ್ಪಿಕೊಳ್ಳುತ್ತದಾ?

ಈ ಮೇಲಿನವುಗಳು ಸಿದ್ಧಿತ ವೈಜ್ಞಾನಿಕ ವಿಷಯಗಳಲ್ಲ ಎನ್ನುವುದಾದರೆ ವೈದ್ಯಕೀಯ ಪ್ರಪಂಚಕ್ಕೆ ತದ್ವಿರುದ್ಧವಾದ ಮತ್ತು ವಿಜ್ಞಾನವನ್ನು ಸ್ಪಷ್ಟವಾಗಿ ಅಲ್ಲಗಳೆಯುವ ಇಂತಹ ವಿಚಾರಗಳಿಗೆ ನಿಮ್ಹಾನ್ಸ್ ಕನ್ವೆನ್ಷನ್ ಹಾಲ್ ಅನ್ನು ಹೇಗೆ ನೀಡಿದಿರೆಂಬುದೆ ನನಗೆ ಅರ್ಥವಾಗುತ್ತಿಲ್ಲ. ಅಲ್ಲದೆ, ನನ್ನ ತಿಳಿವಳಿಕೆ ಪ್ರಕಾರ ಈ ಜಾಗದಲ್ಲಿ ಕಮರ್ಷಿಯಲ್ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಈ ವರ್ಕ್‌ಶಾಪ್‌ನಲ್ಲಿ ಭಾಗವಹಿಸುವವರು ಮೂರು ಸಾವಿರ ಫೀಜ್ ತೆರಬೇಕೆಂದರೆ ಅದನ್ನು ಕಮರ್ಷಿಯಲ್ ಚಟುವಟಿಕೆ ಎನ್ನದೆ ಇರಲು ಹೇಗೆ ಸಾಧ್ಯ. ತನ್ನ ಹೆಸರಿನ ಮುಂದೆ ಎರಡೆರಡು 'ಶ್ರೀ' ಗಳನ್ನು ಅಂಟಿಸಿಕೊಂಡಿರುವ ಚಂದ್ರಶೇಖರ್ ಎಂಬ ಸ್ವಯಂಘೋಷಿತ ಅಪಖ್ಯಾತಿಯ ಗುರೂಜಿ ಈ ವರ್ಕ್‌ಶಾಪ್‌ನ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಾನೆ ಎನ್ನುವುದನ್ನು ಗಮನಿಸಿದಾಗಲಂತೂ ಅದು ಕಮರ್ಷಿಯಲ್ ಶಿಬಿರ ಎನ್ನುವುದು ಖಾತ್ರಿ. ಇದನ್ನು ಆಯೋಜಿಸಿರುವ ಬೆಂಗಳೂರಿನ ಆಧ್ಯಾತ್ಮಿಕ ಪರಿಹಾರ ಕೇಂದ್ರದ ಹೆಸರೇ ಹಲವಾರು ಕಪಟ ವೈದ್ಯ ಪ್ರಕರಣಗಳಲ್ಲಿ ಕೇಳಿಬರುತ್ತಿದೆ.

ಈ ಶಿಬಿರಕ್ಕೆ ಅವಕಾಶ ನೀಡಿರುವ ತಮ್ಮ ನಿರ್ಧಾರವನ್ನು ದಯಮಾಡಿ, ತಾವು ಮತ್ತೊಮ್ಮೆ ಪರಾಮರ್ಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಶಿಬಿರವು 2004ರಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿಗೇ ವಿರುದ್ಧವಾದಂತದ್ದು. ತೀರ್ಪಿನಲ್ಲಿ ಸುಪ್ರೀಂಕೋರ್ಟ್ "ಅನಧಿಕೃತ, ಆಧಾರವಿಲ್ಲದ ಚಿಕಿತ್ಸೆಗಳಿಗೆ ಸರ್ಕಾರ ಯಾವುದೇ ಮಾನ್ಯತೆಯನ್ನು ನೀಡಬಾರದು ಅಥವಾ ಪ್ರೋತ್ಸಾಹಿಸಬಾರದು" ಎಂದು ಸ್ಪಷ್ಟಪಡಿಸಿದೆ. ಸಂಪೂರ್ಣವಾಗಿ ಸರ್ಕಾರದ ನಿಧಿಯಿಂದ ನಡೆಯುತ್ತಿರುವ ನಿಮ್ಹಾನ್ಸ್ ಕೂಡಾ ಈ ವ್ಯಾಖ್ಯೆಯ ವ್ಯಾಪ್ತಿಗೆ ಒಳಪಡುತ್ತದೆ.

ಈ ವಿಷಯವಾಗಿ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೀರೆಂದು ಆಶಿಸುತ್ತೇನೆ, ಧನ್ಯವಾದಗಳು.



ತಮ್ಮ ವಿಶ್ವಾಸಿ
ನರೇಂದ್ರ ನಾಯಕ್,
ಅಧ್ಯಕ್ಷರು, ಭಾರತೀಯ
ವಿಚಾರವಾದಿಗಳ ವೇದಿಕೆ
ಮಂಗಳೂರು

# ಇಬ್ಬರು ಕಾಮುಕ ಸ್ವಾಮಿಗಳ ಅರೆಸ್ಟ್



ಒಬ್ಬ ಜ್ಯೋತಿಷಿ ಕಂ ಸ್ವಾಮಿ ಮತ್ತೊಬ್ಬ ಸ್ವಾಮಿ ಕಂ ಕಾಮಿ. ಲಾಭಬಡುಕ ನ್ಯೂಸ್ ಚಾನಲ್ಲುಗಳು ಹುಟ್ಟುಹಾಕಿದ ಮನೆಹಾಳು ಜ್ಯೋತಿಷಿಗಳ ಖದೀಮ ಕೂಟ ಹೇಗೆಲ್ಲಾ ಮುಗ್ಧ ಜನಸಾಮಾನ್ಯರನ್ನು ವಂಚಿಸುತ್ತಿದೆ ಎಂಬುದಕ್ಕೆ ಒಂದೇ ದಿನದಲ್ಲಿ ಬೆಂಗಳೂರಿನ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಈ ಎರಡು ಪ್ರಕರಣಗಳೇ ಸಾಕು.

ಹೆಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ದೇವಿಶ್ರೀ ಗುರೂಜಿ ಅಲಿಯಾಸ್ ರಾಮಸ್ವಾಮಿ ಉರ್ಫ್ ರಾಮು ಎಂಬಾತನ ವಿರುದ್ಧ ಆತನ ಕಾರು ಚಾಲಕ ವಸಂತ್ ತನಗೆ ಗುರೂಜಿಯಿಂದ ಕೊಲೆ ಬೆದರಿಕೆ ಇದೆ ಎಂದು ದೂರು ದಾಖಲಿಸಿದ್ದಾನೆ. ತನ್ನದೇ ಕಾರು ಚಾಲಕನಿಗೆ ಸಾಕ್ಷಾತ್ ದೈವ ಸ್ವರೂಪ ಗುರೂಜಿ ಏಕೆ ಕೊಲೆ ಬೆದರಿಕೆ ಹಾಕಿದನೆಂದರೆ; ಅದು ಗುರೂಜಿಯ ಕಾಮ ವಿಕೃತಿಯನ್ನು ಬಯಲಿಗೆಳೆದು ಆತನ ಸೆಕ್ಸ್ ವಿಡಿಯೋ ದೃಶ್ಯಾವಳಿಗಳನ್ನು ಟೀವಿಗೆ ಮಾರಿಕೊಂಡಿದ್ದಕ್ಕಾಗಿ!

ಎರಡನೇ ದೂರೊಂದು ಯಶವಂತಪುರ ಪೊಲೀಸ್ ಠಾಣೆಯಲ್ಲಿ ಅಚಲಾಶ್ರಮದ ಸೋಕಾಲ್ಡ್ ಸ್ವಾಮೀಜಿ ರಮಾನಂದ್ ಸ್ವಾಮೀಜಿ ವಿರುದ್ಧ ಆತನ ಭಕ್ತನೇ ಕೊಟ್ಟ ದೂರು. ಭಕ್ತ ಶ್ರೀನಿವಾಸ್ ನಾಯ್ಡು ನೀಡಿದ ದೂರಿನ ಪ್ರಕಾರ ಅಚಲಾಶ್ರಮದ ರಮಾನಂದ ಸ್ವಾಮೀಜಿ ಆತನ ಪತ್ನಿಯನ್ನು ಕಾಮತೃಷೆಗೆ ಬಳಸಿಕೊಂಡಿದ್ದೂ ಅಲ್ಲದೆ ಆಕೆಯನ್ನು ಗರ್ಭಿಣಿಯಾಗಿಸಿ ಅದನ್ನು ಮುಚ್ಚಿಹಾಕಲು ಅಬಾರ್ಷನ್ ಕೂಡ ಮಾಡಿಸಿದ್ದಾನೆ. ಈ ಬಗ್ಗೆ ಪ್ರಶ್ನಿಸಹೋದ ತನ್ನನ್ನೇ ಸ್ವಾಮೀಜಿ ಮತ್ತು ಆತನ ಸಹಚರರು ಥಳಿಸಿ ಹೊರ ದಬ್ಬಿದ್ದಾರೆಂಬುದು ಶ್ರೀನಿವಾಸ್ ನಾಯ್ಡು ನೀಡಿದ ದೂರು.

ಏಪ್ರಿಲ್ 27ರ ಭಾನುವಾರ ಅಂದರೆ ಒಂದೇ ದಿನದಲ್ಲಿ ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್ ಮತ್ತು ಯಶವಂತಪುರ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಈ ಎರಡೂ ಪ್ರಕರಣಗಳ ಸಾರಾಂಶವೊಂದೇ. ಅದು ಸೋಕಾಲ್ಡ್ ದೇವ ಮಾನವರು ಅರ್ಥಾತ್ ಸ್ವಾಮೀಜಿ, ಗುರೂಜಿಗಳೆನಿಸಿಕೊಂಡವರ ಕಾಮ ವಿಕಾರ.

ಮೊದಲಿಗೆ ದೇವಿಶ್ರೀ ಗುರೂಜಿಯ ಕತೆಯನ್ನೇ ನೋಡುವುದಾದರೆ ಅದು ಬಿಡದಿ ನಿತ್ಯಾನಂದನಿಗಿಂತಲೂ ಸ್ಪಷ್ಟವಾದ ನಿಖರವಾದ ಸೆಕ್ಸ್ ವೀಡಿಯೋ. ಜೀನ್ಸ್‌ಧಾರಿ ಯುವತಿಯೊಬ್ಬಳನ್ನು ತನ್ನ ಜ್ಯೋತಿಷ್ಯಾಲಯಕ್ಕೆ ಕರೆಸಿಕೊಂಡ ದೇವಿಶ್ರೀ ಗುರೂಜಿ ಏಕಾಏಕಿ ಆಕೆಯನ್ನು ಅಪ್ಪಿಕೊಳ್ಳುತ್ತಾನೆ, ಮುತ್ತಿಕ್ಕುತ್ತಾನೆ. ಮತ್ತೊಂದು ಕೋಣೆಗೆ ಹಾಗೇ ತಬ್ಬಿಕೊಂಡೇ ಎಳೆದೊಯ್ದು ವಿಕೃತ ಚೇಷ್ಟೆಗಳನ್ನಾಡುತ್ತಾನೆ. ಮತ್ತೆ ಮತ್ತೆ ಮನೆ ತುಂಬಾ ಅಟ್ಟಾಡುವ ಅದೇ ಯುವತಿಯನ್ನು ಚಿತ್ರವಿಚಿತ್ರವಾಗಿ ಪೀಡಿಸುವ ಅಷ್ಟೂ ದೃಶ್ಯಾವಳಿಗಳು ಸೆರೆಯಾಗಿರುವುದು ಆತನದ್ದೇ ಮನೆಯ ಸಿಸಿ ಟೀವಿಯಲ್ಲಿ!

ಹಾಗೆ ದೇವಿಶ್ರೀಯ ವಿಕೃತಿಗೆ ಬಲಿಯಾದವಳು ಆತನದ್ದೇ ಜ್ಯೋತಿಷ್ಯಾಲಯದ ರಿಸೆಪ್ಷನಿಸ್ಟ್ ಮತ್ತು ಟೆಲಿಫೋನ್ ಆಪರೇಟರ್. ಇಲ್ಲಿಗೆ ಎರಡು ವರ್ಷದ ಹಿಂದೆ ತಾನೊಬ್ಬಳು ನಿರುದ್ಯೋಗಿ; ಸಾಲದ್ದಕ್ಕೆ ಮದುವೆಗೂ ಮುಹೂರ್ತ ಕೂಡಿ ಬರುತ್ತಿಲ್ಲ ಎಂದು ಜ್ಯೋತಿಷ್ಯ ಕೇಳಿಕೊಂಡು ಬಂದಿದ್ದ ಇದೇ ಯುವತಿಯನ್ನು ದೇವಿಶ್ರೀ ಗುರೂಜಿ ವಂಚಿಸಿ ಬಿಟ್ಟ. ಮೂಲತಃ ಗಿರಿನಗರದ ಯಶಸ್ವಿನಿ (ಹೆಸರು ಬದಲಿಸಿದೆ) ಎಂಬ ಈ ಯುವತಿ ಕಳೆದ ಎರಡು ವರ್ಷದಿಂದ ಹೆಚ್‌ಎಸ್‌ಆರ್ ಲೇಔಟ್‌ನಲ್ಲಿರುವ ದೇವಿಶ್ರೀ ಫೌಂಡೇಶನ್‌ನಲ್ಲಿ 'ಭೈರವಿ ಯಂತ್ರ'ದ ಸೇಲ್ಸ್ ಎಕ್ಸಿಕ್ಯೂಟೀವ್ ಆಗಿಯೂ ಕೆಲಸ ಮಾಡುತ್ತಿದ್ದಳಂತೆ.

ಏನಿದು ಭೈರವಿ ಯಂತ್ರ, ದೇವಿಶ್ರೀ ಫೌಂಡೇಶನ್, ರಿಸೆಪ್ಷನಿಸ್ಟ್ ಎಂದು ಎಂಥವರಿಗೂ ತಲೆ ಕೆಡಬಹುದಲ್ಲವೆ? ಜ್ಯೋತಿಷ್ಯವೆಂಬುದು ಸೈಬರ್ ಸಂಯೋಗದೊಂದಿಗೆ ಹೈಟೆಕ್ಕಾಗಿ ವಿಜ್ಞಾನಕ್ಕೆ ಸವಾಲೆಂಬಂತೆ ವಂಚನೆಗಿಳಿದಿರುವ ಪರಿಯಿದು. ಸದರಿ ದೇವಿಶ್ರೀ ಗುರೂಜಿಯನ್ನು ಜನ ಟೀವಿಯಲ್ಲಿ ನೋಡಬಹುದು. ಆದರೆ ಇಂಟರ್‌ನೆಟ್ ಲೋಕದಲ್ಲಿ ಆತನ ವರ್ಚಸ್ಸೇ ಬೇರೆಯಿದೆ **Devisri Astro.com** ಎಂಬ ವೆಬ್‌ಸೈಟ್‌ನ್ನು ತೆರೆದರೆ ಈತನ ವಂಚಕ ಪ್ರಪಂಚವೇ ತೆರೆದುಕೊಳ್ಳುತ್ತದೆ. ಈ ಪೈಕಿ ಆತನ ಹೆಚ್‌ಎಸ್‌ಆರ್ ಲೇಔಟಿನ ಅನ್ವಿಕಾ ಅಪಾರ್ಟ್‌ಮೆಂಟ್‌ನ ದೇವಿಶ್ರೀ ದಿವ್ಯ ಜ್ಯೋತಿಷ್ಯಾಲಯ ಎಂಬುದು ಆತನ ಸಮಸ್ತ ಕಾರ್ಯಾಚರಣೆಯ ಅಡ್ಡೆಯಾದರೆ ಅದರೊಳಗಡೆಯೇ ವಿವಿಧ ಕ್ಷೌರದ ಇಲಾಖೆಗಳಿವೆ.

ಇದರಲ್ಲಿ ಪ್ರಮುಖವಾದದ್ದು ದೇವಿಶ್ರೀ ಫೌಂಡೇಶನ್. ಅಂದರೆ ಈ ಫೌಂಡೇಶನ್ ವತಿಯಿಂದ ಸಮಾಜಸೇವೆಯಂತೆ. ಹಾಗೆ ಯಾರ್ಯಾರಿಗೆ ಗ್ರಹಗತಿ ಕೆಟ್ಟು ವೈಪರೀತ್ಯವಾಗುತ್ತೋ ಅಂಥವರಿಗೆಂದೇ ದೇವಿಶ್ರೀ ಜಸ್ಟ್ ಡಯಲ್ ಎಂಬ ಟೆಲಿಫೋನ್ ನೆಟ್‌ವರ್ಕಿದೆ. ಈ ಮೂಲಕ ದಿನದ ಯಾವುದೇ ಹೊತ್ತಲ್ಲೂ ಗುರೂಜಿಯ ದರ್ಶನ ಕೋರಿ **just dial** ನಂಬರಿಗೆ ಫೋನ್ ಮಾಡಬಹುದು. ತಮಾಷೆಯೆಂದರೆ ಹೀಗೆ ಫೋನ್ ಮಾಡಿದವರಿಗೆಲ್ಲ ಬರುವ ಉತ್ತರವೆಂದರೆ 'ಗುರೂಜಿ ಅಪಾಯಿಂಟ್‌ಮೆಂಟ್ ಬೇಕು ಅಂದ್ರೆ ನೀವು 2016 ಮಾರ್ಚ್ ತನಕ ವೇಯ್ಟ್ ಮಾಡಬೇಕು!'

ಅಂದರೆ ದೇವಿಶ್ರೀಯನ್ನು ಕಾಣಲು ಜಸ್ಟ್ ಡಯಲ್‌ಗೆ ಫೋನ್ ಮಾಡಿದವರಿಗೆ ಸಿಗುವ ಏಕೈಕ ಪರಿಹಾರವೆಂದರೆ ಕನಿಷ್ಠ ಎರಡೂ ಮೂರು ವರ್ಷದ ನಂತರವಾದರೂ ಸಿಗಬಹುದಾದ ಗುರೂಜಿಯ ದರ್ಶನ ಭಾಗ್ಯ!

ಇದರರ್ಥ ಫೋನ್ ಮಾಡಿದ ಮಿಕಕ್ಕೆ ಗುರೂಜಿಗೆ ಎಂಥಾ ಡಿಮ್ಯಾಂಡಿದೆ ಎಂಬ ಭ್ರಮೆ ಹುಟ್ಟಿಸುವುದು ಮತ್ತು ಅರ್ಜೆಂಟಾಗಿ ದರ್ಶನ ಪಡೆಯಲು ಮಾಮೂಲಿ ದರಕ್ಕಿಂತಲೂ ಹತ್ತು ಪಟ್ಟು ಹೆಚ್ಚಿಗೆ ನೀಡಬೇಕಾದ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದು!

ದೇವಿಶ್ರೀಯ ಪ್ರತಿನಿತ್ಯದ ಒಂದು ಕನ್ಸಲ್ಟೆನ್ಸಿಗೆಂದು ನಿಗದಿಯಾದ ಮೊತ್ತವೇ ಮೂರು ಸಾವಿರ ರೂಪಾಯಿಗಳು. ದಿನಕ್ಕೆ ಕಮ್ಮಿಯೆಂದರೂ ಇಪ್ಪತ್ತು ಮಂದಿಗೆ ಜ್ಯೋತಿಷ್ಯ ಹೇಳುತ್ತಾನೆ. ಆ ಪ್ರಕಾರ ತಿಂಗಳೊಂದಕ್ಕೆ ಕಡಿಮೆಯೆಂದರೂ 15 ಲಕ್ಷ ರೂಪಾಯಿ ಕಮಾಯಿಸುತ್ತಾನೆ. ಇದು ಕೇವಲ ಆತನ ಜ್ಯೋತಿಷ್ಯದ ಮೂಲಕ ಮಾತ್ರ. ಇದಲ್ಲದೆ ದೇವಿಶ್ರೀ 'ಭೈರವಿ ಯಂತ್ರ' ಎಂಬ ವಿಶಿಷ್ಟ ದೈವೀ ಶಕ್ತಿಯುಳ್ಳ ಕರಂಡಕವೊಂದನ್ನು ಕಂಡುಹಿಡಿದಿದ್ದಾನಂತೆ. ಭೈರವಿ ಯಂತ್ರವನ್ನು ಮನೆಯಲ್ಲಿ ತಂದಿಟ್ಟುಕೊಂಡರೆ ವಾಸ್ತು ದೋಷ, ಸರ್ಪ ದೋಷ, ಕುಜ ದೋಷ, ಭಗ ದೋಷ, ದಾಂಪತ್ಯ ದೋಷ ಇತ್ಯಾದಿ ಸಕಲ ದೋಷಗಳೆಲ್ಲವೂ ಪರಿಹಾರವಾಗುತ್ತದೆಯಂತೆ.

ತ್ರಿಕೋನಾಕೃತಿಯ ಈ ಕರಂಡಕ ಅಂದರೆ ಎರಡು ಸಿಗರೇಟು ಪ್ಯಾಕುಗಳ ಗಾತ್ರದ ಭೈರವಿ ಯಂತ್ರವನ್ನು ಮನೆಯಲ್ಲಿ ತಂದಿಟ್ಟು ಪೂಜಿಸುತ್ತಿದ್ದಂತೆಯೇ ಇಷ್ಟಾರ್ಥ ಸಿದ್ಧಿಯಾಗುತ್ತದೆಯಂತೆ. ಅಂದರೆ ಮಕ್ಕಳಿಲ್ಲದವರಿಗೆ ಮಕ್ಕಳು, ಮದುವೆಯಿಲ್ಲದವರಿಗೆ ಮದುವೆ, ವ್ಯಾಪಾರ ನಷ್ಟವಿದ್ದರೆ ದಿಢೀರ್ ಲಾಭ; ಹಾಗೊಮ್ಮೆ ಅನೈತಿಕ ಸಂಬಂಧವಿದ್ದ ಗಂಡಿಗೆ ಹೆಂಡತಿ ನಿಕಾಲಿಯಾಗಬೇಕೆಂದರೆ ಅಂಥ ಇಷ್ಟಾರ್ಥವೂ ಸಿದ್ಧಿ.

ಇದು ಭೈರವಿ ಯಂತ್ರದ ಪ್ರಚಾರಕ್ಕೆ, ದೇವಿಶ್ರೀ ಭರವಸೆಯ ಟೆಕ್ನಿಕ್ಕು. ಇಂಥ ಪ್ರತಿ ಭೈರವಿ ಯಂತ್ರಕ್ಕೆ 2000 ರೂಪಾಯಿ ತೆತ್ತೇ ಖರೀದಿಸಬೇಕು. ಅಂಚೆ ಶುಲ್ಕ ತೆತ್ತು ಪಾರ್ಸಲ್ ಮೂಲಕವೂ ಕಳುಹಿಸುವ ವ್ಯವಸ್ಥೆಯಿದೆ. ಭೈರವಿ ಯಂತ್ರದ ತಯಾರಿಕೆ, ಪ್ರಚಾರ, ವ್ಯಾಪಾರ, ವಹಿವಾಟು, ರವಾನೆ ಇತ್ಯಾದಿಗಳನ್ನೆಲ್ಲ ನಿಭಾಯಿಸಲೆಂದೇ ಪ್ರತ್ಯೇಕ ಕಂಪೆನಿಯೊಂದನ್ನೂ ಹುಟ್ಟು ಹಾಕಿದ್ದಾನಂತೆ.

ಇದು ದೇವಿಶ್ರೀ ಗುರೂಜಿ ಅಲಿಯಾಸ್ ರಾಮಸ್ವಾಮಿ ಉರ್ಫ್ ರಾಮು ಎಂಬ ವಂಚಕನ ವಂಚಕ ಸಾಮ್ರಾಜ್ಯವಾದರೆ ಇದೆಲ್ಲದರ ಪರ್ಯಾಯ ಅಂದರೆ ಮತ್ತೊಂದು ಮುಖವೂ ಇದೆ. ಅದು ವಂಚಕನೊಬ್ಬ ಎಷ್ಟು ಸಲೀಸಾಗಿ ಮೀಡಿಯಾ ಮತ್ತು ಜನರನ್ನು ವಂಚಿಸಿ ದೊಡ್ಡವನಾಗಬಹುದು ಮತ್ತು ಹೇಗೆಲ್ಲ ಕಮಾಯಿಸಬಹುದೆಂಬುದು.

ಬಹಳ ಹಿಂದೇನಲ್ಲ, 2004ರ ಹೊತ್ತಿಗೆ ಶ್ರೀನಗರದ ಫೈವ್‌ಲೈನ್ ರಸ್ತೆಯ ಗಣಪತಿ ದೇವಸ್ಥಾನದಲ್ಲಿ ಅರ್ಚಕನಾಗಿದ್ದ ರಾಮು ಅಲಿಯಾಸ್ ರಾಮಮೂರ್ತಿ ಕೇವಲ ಐದಾರು ವರ್ಷದೊಳಗೆ ರಾಮಸ್ವಾಮಿಯಾಗಿ ತದನಂತರ ದೇವಿಶ್ರೀ ಗುರೂಜಿಯಾಗಿ ಬೆಳೆಯುತ್ತಾನೆಂದರೆ ಅದು ನ್ಯೂಸ್ ಚಾನಲ್ಲುಗಳು ಎರಚಿದ ಮಂಕುಬೂದಿಯಲ್ಲದೆ ಮತ್ತೇನಲ್ಲ.

ಅಷ್ಟಕ್ಕೂ ಈ ಸೋಕಾಲ್ಡ್ ದೇವಿಶ್ರೀ ಗುರೂಜಿ ಓರ್ವ ಶಾಸ್ತ್ರೋಕ್ತ ಜ್ಯೋತಿಷಿಯಾ ಎಂದಾದರೂ ನೋಡಹೊರಟರೆ ಈತನಿಗೆ ಜ್ಯೋತಿಷ್ಯ ಹಾಳಾಗಲಿ ನೆಟ್ಟಗೆ ಕನ್ನಡ ಕೂಡ ಗೊತ್ತಿಲ್ಲ. ಮೂಲತಃ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಕೆ. ಹೊಸಳ್ಳಿಯ ಅರ್ಚಕ ದಂಪತಿಗಳಾದ ಗೋಪಾಲಕೃಷ್ಣಮೂರ್ತಿ ಮತ್ತು ಭಾಗ್ಯಮ್ಮರ ಇಬ್ಬರು ಹೆಣ್ಣು ಮಕ್ಕಳು ಓರ್ವ ಗಂಡು ಸಂತಾನದ ಪೈಕಿ ಈತನೇ ಏಕೈಕ ಪುತ್ರ. ಮುಳಬಾಗಿಲಿನ ಬಳೇ ಸಂಗಪ್ಪ ಹೈಸ್ಕೂಲಿನಲ್ಲಿ ಎಸ್ಸೆಸ್ಸೆಲ್ಸಿ ಕೂಡ ಪಾಸು ಮಾಡಲಾಗಲಿಲ್ಲ. ಆ ಹೊತ್ತಿಗೆ ತಂದೆ ಮುಳಬಾಗಿಲಿನ ರಾಮಮಂದಿರದ ಚೌಲ್ಟ್ರಿಗೆ ಮ್ಯಾನೇಜರಾಗಿದ್ದರು.

ಎಸ್ಸೆಸ್ಸೆಲ್ಸಿ ಕೂಡ ಪಾಸು ಮಾಡಲಾಗದೆ ಅಂಡಲೆಯುತ್ತಿದ್ದ ರಾಮುಗೆ ಪಕ್ಕದ ಹಳ್ಳಿಯಲ್ಲೇ ಇದ್ದ ಅರ್ಚಕರ ಮಗಳನ್ನು ತಂದು ಮದುವೆಯನ್ನೂ ಮಾಡಿದ್ದಾಯ್ತು. ಇಬ್ಬರು ಮಕ್ಕಳಾದರೂ ರಾಮು ಮಾತ್ರ ಉದ್ಧಾರವಾಗಲಿಲ್ಲ. ಇಂಥ ಬರಗೆಟ್ಟ ಸ್ಥಿತಿಯಲ್ಲಿ ಆತನನ್ನು ಬೆಂಗಳೂರಿಗೆ ಕರೆತಂದು ಶ್ರೀನಗರದ ಫೈವ್‌ಲೈನ್ ಗಣಪತಿ ದೇವಾಲಯದ ಅರ್ಚಕನನ್ನಾಗಿ ಮಾಡಿದ್ದು ಸದ್ಯ ಹೊಸೂರು ರಸ್ತೆ ವೀರಸಂದ್ರದ ಕಾವೇರಮ್ಮ ದೇವಸ್ಥಾನದ ಅರ್ಚಕರಾಗಿರುವ ಅಶೋಕ್ ಭಟ್.

ಪೌರೋಹಿತ್ಯ, ಮಂತ್ರ, ಪೂಜಾ ಶಾಸ್ತ್ರ ಏನೊಂದೂ ಗೊತ್ತಿಲ್ಲದ ರಾಮುನನ್ನು ಮಂತ್ರಾಕ್ಷತಾ ಪ್ರವೀಣನೆಂಬಂ

## ತಾನೇ ತೋಡಿದ ಗುಂಡಿಗೆ ಬಿದ್ದ

**ತನ್ನದೇ ಜ್ಯೋತಿಷ್ಯಾಲಯದಲ್ಲಿ ತಾನೇ ಹಾಕಿಸಿಕೊಂಡಿದ್ದ ಸಿಸಿ ಟೀವಿಯಲ್ಲಿ ತನ್ನ ಮೃಗಲೀಲಾವಳಿಯ ದೃಶ್ಯಗಳು ಸೆರೆಯಾಗಿದ್ದು ಗೊತ್ತಿದ್ದೂ ದೇವಿಶ್ರೀ ಗುರೂಜಿ ಹೇಗೆ ಹಳ್ಳಕ್ಕೆ ಬಿದ್ದ?**




ಇದನ್ನೇ **over confidence** ಅಥವಾ ಉಡಾಳ ಬುದ್ಧಿ ಎನ್ನುವುದು. ದೇವಿಶ್ರೀ ಗುರೂಜಿಯ ಕಾರು ಚಾಲಕ ವಸಂತ್ ಮತ್ತು ದೇವಿಶ್ರೀ ಫೌಂಡೇಶನ್ನಿನ ಮ್ಯಾನೇಜರ್ ಉದಯ್ ಎಂಬಿಬ್ಬರು ಸಭ್ಯಸ್ಥರೇ ಈತನ ಅಸಲೀ ರೂಪವನ್ನು ಬಯಲಿಗೆಳೆದವರು. ದೇವಿಶ್ರೀಗೆ ಜ್ಯೋತಿಷ್ಯ ಗೊತ್ತಿಲ್ಲ, ಆತ ದೇವಮಾನವನಲ್ಲ ಕನಿಷ್ಠ ಮಾನವ ಎನಿಸಿಕೊಳ್ಳುವಷ್ಟೂ ಯೋಗ್ಯನಲ್ಲ ಎಂಬುದು ವಸಂತ್ ಮತ್ತು ಉದಯ್‌ಗೆ ಗೊತ್ತಾಗಿದ್ದೇ ಇಲ್ಲಿಗೆ ವರ್ಷದ ಹಿಂದೆ. ಮೈಸೂರಿನ ಯುವತಿಯೊಬ್ಬಳನ್ನು ಇದೇ ರೀತಿ ಬಳಸಿಕೊಂಡು ದೇವಿಶ್ರೀ ವಂಚಿಸಿದ್ದನ್ನು ಅವರಿಬ್ಬರೂ ಕಣ್ಣಾರೆ ಕಂಡಿದ್ದರು.

ಯಾವತ್ತು ಯಶಸ್ವಿನಿ (ಹೆಸರು ಬದಲಿಸಿದೆ) ಜೊತೆ ಚಕ್ಕಂದ ಆಡಿದ ದೃಶ್ಯಾವಳಿಗಳು ಆತನದ್ದೇ ಜ್ಯೋತಿಷ್ಯಾಲಯದ ಸಿಸಿ ಟೀವಿಯಲ್ಲಿ ಸೆರೆಯಾಯಿತೋ ಅದು ದೇವಿಶ್ರೀಗೆ ಗೊತ್ತಿತ್ತಾದರೂ ತನ್ನದೇ ಸ್ವಾಧೀನದಲ್ಲಿರುವ ಸಿಸಿ ಟೀವಿಯ ಫೂಟೇಜು ಹೇಗೆ ತಾನೇ ಬೇರೆಯವರ ಕೈ ಸೇರಲು ಸಾಧ್ಯ? ಎಂಬುದು ಆತನ ಲೆಕ್ಕಾಚಾರವಾಗಿತ್ತು. ಮುಂದೆ ಇದೇ ವೀಡಿಯೋ ದೃಶ್ಯವನ್ನು ಇಟ್ಟುಕೊಂಡು ಯಶಸ್ವಿನಿಯನ್ನು ಬೇಕೆಂದಾಗೆಲ್ಲ ಬಳಸಿಕೊಳ್ಳುವ ದುರ್ಬುದ್ಧಿಯೂ ಆತನ ತಲೆ ಹೊಕ್ಕಿತ್ತು. ನಾಳೆ ಆಕೆ ಯಾರನ್ನೇ ಮದುವೆಯಾದರೂ ತಾನು ಕರೆದಾಗ ಬರಲೇಬೇಕಾದಂಥ ಬ್ಲಾಕ್‌ಮೇಲ್ ತಂತ್ರವೂ ಇದಾಗಿತ್ತು.

ಇಂಥ ಕೆಟ್ಟ ಉದ್ದೇಶದಿಂದ ತನ್ನ ತಿಜೋರಿಯಲ್ಲಿ ಜೋಪಾನವಾಗಿ ಇಟ್ಟಿದ್ದ ಸಿಸಿ ಟೀವಿಯ ಫೂಟೇಜು ಸಹಜವಾಗೇ ಟ್ರಸ್ಟಿನ ಮ್ಯಾನೇಜರ್ ಉದಯ್ ಮತ್ತು ವಸಂತ್‌ರ ಕೈಸೇರಿದೆ. ತನ್ನ ಮನದ ಬೆಂಕಿ ಮನೆಯನಲ್ಲದೆ ನೆರೆಮನೆಯನ್ನು ಸುಟ್ಟೀತೆ ಎಂಬಂತೆ ತಾನೇ ತೋಡಿದ ಗುಂಡಿಗೆ ದೇವಿಶ್ರೀ ಬಿದ್ದಿದ್ದಾನೆ. ಈಗ ಬಚಾವಾಗಲು ಕಾರು ಚಾಲಕ ವಸಂತ್ ತನಗೆ 10 ಲಕ್ಷದ ಬೇಡಿಕೆಯಿಟ್ಟಿದ್ದ ಕೇವಲ ಐದು ಲಕ್ಷ ಮಾತ್ರ ಕೊಟ್ಟೆ ಉಳಿಕೆ ಐದು ಲಕ್ಷ ಕೊಡಲಿಲ್ಲ ಎಂದು ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆಂದು ಕತೆ ಹೊಸೆಯುತ್ತಿದ್ದಾನೆ ನಂಬಲು ಮೂರ್ಖರಿರಬೇಕಲ್ಲ...?



...ಶ್ರೀನಗರದ ದೇವಸ್ಥಾನಕ್ಕೆ ಅಂಟ ಹಾಕಿದರೆ ನಾಲ್ಕೇ ...ಗಳಲ್ಲಿ ರಾಮು ತನ್ನ ಬುದ್ಧಿ ತೋರಿಸಿಬಿಟ್ಟ. ಪ್ರತಿನಿತ್ಯ ...ರ್ಶನಕ್ಕೆಂದು ಬರುತ್ತಿದ್ದ ಬ್ರಾಹ್ಮಣ ವಿಧವೆಯೊಬ್ಬಳಿಗೆ ...ಸಲ್ಲದ ಚೇಷ್ಟೆ ಮಾಡಲು ಹೋಗಿ ರಾಮು ...ರ್ವಜನಿಕರಿಂದ ಒದೆ ತಿಂದು ಶ್ರೀನಗರದಿಂದ ...ರಾರಿಯಾಗಿದ್ದ. ಹಾಗೆ ಪರಾರಿಯಾಗುವ ಮುನ್ನ ...ಬುಕಿಯೊಬ್ಬಳ 70 ಸಾವಿರ ರೂಪಾಯಿಗಳ ಸಮೇತ ...ಪತ್ತೆಯಾಗಿದ್ದ.

ತದನಂತರ ರಾಮು ವಕ್ಕರಿಸಿದ್ದು ಹೊಸೂರು ರಸ್ತೆ ...ಬ್ಬಗೋಡಿಯ ಶ್ರೀಕೃಷ್ಣ ಧರ್ಮರಾಜ ದೇವಸ್ಥಾನಕ್ಕೆ. ಅದರ ...ರ್ಚಕರಾಗಿದ್ದ ಪದ್ಮನಾಭಾಚಾರ್ ವೇದಶಾಸ್ತ್ರ ಪಾರಂಗತ. ...ಮಾವಿನಲ್ಲಿ ಅವರ ಕಾರಿಗೆ ಡ್ರೈವರ್ ಕೆಲಸ ಮಾಡಿಕೊಂಡಿದ್ದ ...ಮು ಉರ್ಫ್ ರಾಮಮೂರ್ತಿ ತಾನು ಪೌರೋಹಿತ್ಯ ...ತ್ತು ವೇದಾಧ್ಯಯನ ಮಾಡುತ್ತೇನೆಂದೇ ...ದ್ಮನಾಭಾಚಾರ್‌ರನ್ನು ನಂಬಿಸಿದ್ದನಾದರೂ ತನ್ನದೇ ...ತಿಯಲ್ಲಿ ತನ್ನ ಹುಟ್ಟು ಚಾಳಿಯನ್ನು ತೋರಿಸಿಬಿಟ್ಟ. ...ಕೃಷ್ಣ ಧರ್ಮರಾಜ ದೇವಸ್ಥಾನದ ಹುಂಡಿಗೆ ಬೀಳುತ್ತಿದ್ದ ...0, 50 ರೂಪಾಯಿಗಳ ನೋಟುಗಳನ್ನು ಕಡ್ಡಿಯೊಂದಕ್ಕೆ ...ಚ್ಯೂಯಿಂಗ್ ಗಮ್ ಅಗಿದು ಅಂಟಿಸಿ ಅದನ್ನು ...ಹುಂಡಿಯೊಳಕ್ಕೆ 100, 50 ರ ನೋಟಿಗೇ ಗುರಿಯಿಟ್ಟು ...ಟಿಸಿ ಹೊರತೆಗೆಯುತ್ತಿದ್ದ. ಏಕಾಏಕಿ ಹುಂಡಿಯಿಂದ ...ಪತ್ತೆಯಾಗುತ್ತಿದ್ದ ನೋಟುಗಳ ಬಗ್ಗೆ ಸದ್ದಿಲ್ಲದೆ ಕಣ್ಣಿಟ್ಟಿದ್ದ ...ರ್ಚಕರಿಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಒದೆತಿಂದು ...ಪರಾರಿಯಾಗಿದ್ದ.

...ನಂತರ ಅದೇ ಹೊಸೂರು ರಸ್ತೆ ವೀರಸಂದ್ರದ ...ವೇರಮ್ಮನ ದೇವಸ್ಥಾನಕ್ಕೆ ವಕ್ಕರಿಸಿ ತನ್ನ ಹೆಸರನ್ನು ...ಮಸ್ವಾಮಿ ಎಂದು ಬದಲಿಸಿಕೊಂಡ. ಅಲ್ಲಿ ವಾಮಾಚಾರ ...ತ್ತು ದೇವಸ್ಥಾನದ ಒಳಗೆ ಬಾಗಿಲು ಹಾಕಿಕೊಂಡು ...ಗಸರಿಗೆ ಶಾಸ್ತ್ರ ಹೇಳುತ್ತಿದ್ದದ್ದು ಗೊತ್ತಾಗಿ ಜನ ...ಚ್ಚಿಗೆದ್ದರು. ಕಾವೇರಮ್ಮ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ...ಮುಕೃಷ್ಣಪ್ಪನವರೇ ನಿಂತು ನೆರೆದ ಜನರೆದುರು ನಾಲ್ಕು ... ಈತನನ್ನು ಒದ್ದೋಡಿಸಿದರು.

2004 ರಲ್ಲಿ ಅಂದರೆ ಕೇವಲ ಒಂದೇ ವರ್ಷದಲ್ಲಿ ...ಮಸ್ವಾಮಿ ಉರ್ಫ್ ರಾಮು ಮೂರು ದೇವಸ್ಥಾನಗಳಿಂದ ... ತಿಂದು ಹೊರದಬ್ಬಿಸಿಕೊಂಡಿದ್ದ. ಹೀಗೆ ಕಾಲಿಟ್ಟಲ್ಲೆಲ್ಲ ...ತಿ ಮಾಡಿಕೊಂಡು ಒದ್ದೋಡಿಸಲ್ಪಟ್ಟ ರಾಮಸ್ವಾಮಿ ...05ರ ಹೊತ್ತಿಗೆ ವೈದಿಕ ಪರಂಪರೆಗೆ ತೀರ ವ್ಯತಿರಿಕ್ತವಾದ ...ದ್ರ ದೇವಾಲಯವೊಂದಕ್ಕೆ ಎಂಟ್ರಿ ಕೊಟ್ಟ. ಅದು ಹೆಬ್ಬಗೋಡಿಯ ಮುನೇಶ್ವರ ದೇವಸ್ಥಾನ. ಹೆಬ್ಬಗೋಡಿಯ ಜಿಲ್ಲಾ ಪಂಚಾಯ್ತಿ ಸದಸ್ಯ ರಾಜಣ್ಣ ಎಂಬುವವರು ಅಧ್ಯಕ್ಷರಾಗಿದ್ದ ಮುನೇಶ್ವರನ ದೇವಾಲಯದಲ್ಲಿ ಶೂದ್ರ ಪೂಜಾವಿಧಿಯಿತ್ತು. ಈತ ಏಕಾಏಕಿ ವೈದಿಕ ಪೂಜಾವಿಧಿ ಶುರು ಹಚ್ಚಿಕೊಂಡಿದ್ದಲ್ಲದೆ ಇಲ್ಲೂ ಹೆಂಗಸರನ್ನು ಒಳ ಸೇರಿಸಿಕೊಂಡು ವಿಶಿಷ್ಟ ಶಾಸ್ತ್ರ ಶುರು ಹಚ್ಚಿಕೊಂಡ.

ಜೊತೆಗೆ ದೇವಸ್ಥಾನದ ಹುಂಡಿಯನ್ನೂ ಕದಿಯುತ್ತಿದ್ದದ್ದು ಗೊತ್ತಾಗಿದ್ದು ಈತ ರಾಜಣ್ಣನ ಮಗನ ಕೈಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ನಂತರವೆ. ಹುಂಡಿ ಕದಿಯುತ್ತಿದ್ದವನನ್ನು ಹಿಡಿಯಲೆತ್ನಿಸಿದ ರಾಜಣ್ಣನ ಮಗ ಪ್ರಭುವನ್ನು ತಾರಾಮಾರ ಥಳಿಸಿ ಪರಾರಿಯಾದ ರಾಮಸ್ವಾಮಿಗಾಗಿ ಜಿ.ಪಂ. ಸದಸ್ಯ ರಾಜಣ್ಣ ಮತ್ತು ಹೆಬ್ಬಗೋಡಿ ಪೊಲೀಸರು ಸಾಕಷ್ಟು ಹುಡುಕಿದರಾದರೂ ವಂಚಕ ಪೂಜಾರಿ ಮಾತ್ರ ಪತ್ತೆಯಾಗಲೇ ಇಲ್ಲ. ಅಲ್ಲಿಗೆ ಪೊಲೀಸರಿಗೆ ಒಂದಂತೂ ಸ್ಪಷ್ಟವಾಗಿತ್ತು. ನಾಪತ್ತೆಯಾದವನು ಮಾಮೂಲಿಯ ಪುರೋಹಿತನಲ್ಲ ಮತ್ತು ಪುರೋಹಿತರಿಗಿರುವಂಥ ಯಾವ ಲಕ್ಷಣಗಳೂ ಈತನಲ್ಲಿಲ್ಲ!

ಹೀಗೆ ಹೆಬ್ಬಗೋಡಿ ಮುನೇಶ್ವರ ದೇವಾಲಯದ ಹುಂಡಿ ಕದ್ದು ಪರಾರಿಯಾದ ರಾಮಸ್ವಾಮಿ ಮತ್ತೆ ಸಾರ್ವಜನಿಕವಾಗಿ ಪ್ರತ್ಯಕ್ಷನಾಗಿದ್ದು ಟೀವಿ ಚಾನಲ್ಲುಗಳ ಜ್ಯೋತಿಷ್ಯ ವಂಚನೆಯ ಮೂಲಕವೆ. ಅದು 2010ರಲ್ಲಿ ಜೀ ಕನ್ನಡ ಚಾನಲ್ಲಿನ ಮೂಲಕ. ಆ ಹೊತ್ತಿಗೆ ಆತನ ಗೆಟಪ್ಪೇ ಬದಲಾಗಿತ್ತು. ತನ್ನ ಹೆಸರನ್ನು ರಾಮಸ್ವಾಮಿಗೆ ಬದಲಾಗಿ ದೇವಿಶ್ರೀ ಗುರೂಜಿ ಎಂದು ಬದಲಾಯಿಸಿಕೊಂಡಿದ್ದ. ಹೆಂಗಸರಂತೆ ಉದ್ದುದ್ದ ಕೂದಲು ಬಿಟ್ಟಿದ್ದ. ದೇವಮಾನವನಂತೆ ಸುಮ್ಮಸುಮ್ಮನೆ ನಗುವುದನ್ನು ರೂಢಿಸಿಕೊಂಡಿದ್ದ. ಹೀಗೆ ಕಳ್ಳ ಪೂಜಾರಿಯಾಗಿದ್ದ ರಾಮು ಹುಂಡಿ ಕದ್ದು ಪರಾರಿಯಾಗಿ ಮತ್ತೆ ದೇವಿಶ್ರೀ ಗುರೂಜಿ ರೂಪದಲ್ಲಿ ಪರಾರಿಯಾಗುವುದಕ್ಕೂ ನಡುವಿನ ಮೂರು ವರ್ಷಗಳ ಆತನ ಅಜ್ಞಾತವಾಸವಿತ್ತಲ್ಲ; ಅದೇ ಮತ್ತೊಂದು ಹಾಸ್ಯ ಕಥಾನಕವಾದೀತು.

ಹುಂಡಿ ಕದ್ದು ನಾಪತ್ತೆಯಾದವನು ಬಯೋಕಾನ್ ಫ್ಯಾಕ್ಟರಿಯ ಎದುರು ಬಾಡಿಗೆ ಮನೆ ಮಾಡಿಕೊಂಡಿದ್ದು ಮೂರು ವರ್ಷಗಳ ಕಾಲ ವಾಮಾಚಾರ ಮಾಡಿಕೊಂಡೇ ರಾಮು ಕಾಲ ನೂಕಿದ್ದ. ಈ ಮಧ್ಯೆ ತಮಿಳುನಾಡಿನ ಕೃಷ್ಣಗಿರಿಗೆ ಹೋಗಿ ಅಲ್ಲಿ ಕಪಟ ಜ್ಯೋತಿಷಿಯೊಬ್ಬನಿಂದ ವಂಚಕ ಟೆಕ್ನಿಕ್ಕುಗಳನ್ನು ಕಲಿತು ಬಂದ. ಅದರ ಪ್ರತಿಫಲವೇ ಟೀವಿಗಳಲ್ಲಿ ಈತ ದೇವಿಶ್ರೀ ಅವತಾರದಲ್ಲಿ ಪ್ರತ್ಯಕ್ಷನಾಗಿದ್ದು.

ಇಲ್ಲಿ ಯಾರೂ ಗಮನಿಸದ ಕಟು ವಾಸ್ತವವೊಂದಿದೆ. ಟೀವಿಗಳಲ್ಲಿ ಬರುವ ಜ್ಯೋತಿಷ್ಯ ಮತ್ತು ವಂಚಕ ಜ್ಯೋತಿಷಿಗಳ ಕಾರ್ಯಕ್ರಮಕ್ಕೆ ಚಾನೆಲ್ಲಿನವರೇ ಮೇಲೆ ಬಿದ್ದು ಜ್ಯೋತಿಷಿಗಳನ್ನು ಬರಮಾಡಿಕೊಳ್ಳುತ್ತಾರೆಂದರೆ ಅದು ನಮ್ಮ ಅಜ್ಞಾನವಷ್ಟೆ. ವಿಕಟವೆಂದರೆ ಇಂಥ ವಂಚಕ ಜ್ಯೋತಿಷಿಗಳೇ ದುಡ್ಡು ಕೊಟ್ಟು ಆಯಾ ಚಾನಲ್ಲುಗಳ ಸ್ಲಾಟ್ ಖರೀದಿಸುತ್ತಾರೆ. ತಮ್ಮದೇ ಖರ್ಚಿನಲ್ಲಿ ತಮ್ಮನ್ನೇ ದೇವಮಾನವರಂತೆ ಬಿಂಬಿಸಿಕೊಳ್ಳುತ್ತಾರೆ. ಟೀವಿಯಲ್ಲಿ ಪ್ರಸಾರವಾಗುವುದು ಜ್ಯೋತಿಷ್ಯ ಸಂಬಂಧಿ ಕಾರ್ಯಕ್ರಮವಾದರೂ ಜ್ಯೋತಿಷಿಯ ಯೋಗ್ಯತೆ, ಅಸಲಿಯತ್ತು, ವ್ಯಕ್ತಿತ್ವ ಹಿನ್ನೆಲೆ ಏನೊಂದೂ ಗೊತ್ತಿಲ್ಲದ ಮುಗ್ಧ ವೀಕ್ಷಕ ಆತನ ವಿಚಿತ್ರ ವೇಷಭೂಷಣ, ಮ್ಯಾನರಿಸಂ, ಶೈಲಿಗೇ ಬೆರಗಾಗಿ ಬಿಡುತ್ತಾನೆ.

ಇನ್ನೂ ವಿಚಿತ್ರವೆಂದರೆ ಜ್ಯೋತಿಷಿಗೂ ಸ್ವಾಮೀಜಿಗೂ ಮಠಾಧಿಪತಿಗೂ ಪೀಠಾಧಿಪತಿಗೂ ಸಂತನಿಗೂ ಅವಧೂತನಿಗೂ ಏನು ವ್ಯತ್ಯಾಸವೆಂಬುದೇ ಗೊತ್ತಿಲ್ಲದ ಮುಗ್ಧ ಜನ ಇಂಥ ಜ್ಯೋತಿಷಿಗಳನ್ನೇ ಸ್ವಾಮೀಜಿಗಳೆಂದೋ ಸಾಕ್ಷಾತ್ ದೇವಮಾನವರೆಂದೋ ಭಾವಿಸಿಬಿಡುತ್ತಾರೆ. ಎದುರಿಗೆ ಆದಿಚುಂಚನಗಿರಿ ನಿರ್ಮಲನಾಥರೇ ಬಂದರೂ ಲೆಕ್ಕಿಸದ ಮೂಢಾತ್ಮರು ಆನಂದ ಗುರೂಜಿ ಎಂಬ ವಂಚಕ ಜ್ಯೋತಿಷಿ ಬರುತ್ತಾನೆಂದಾಕ್ಷಣ ಲಕ್ಷಗಟ್ಟಲೇ ಸೇರಿ ಗೌರವಪೂರ್ವಕವಾಗಿ ಜನಜಂಗುಳಿಯಾಗಿದ್ದು ಇಂಥ ಟೀವಿ ಜ್ಯೋತಿಷಿ ... ಫಲಿತಾಂಶವೇ.

... ... ... ಜ್ಯೋತಿಷ್ಯದ ಗಂಧ ಗಾಳಿ ಗೊತ್ತಿಲ್ಲದೇ ... ಏಕಾಏಕಿ ... ಗುರೂಜಿಯಾಗಿ ... ವಂಚಕ ... ಗುರೂಜಿಯಾಗಿದ್ದು, ಆಯುರ್ವೇದದ ಔಷಧಿ ಹೇಳುತ್ತಿದ್ದ ಸಂತೋಷ್ ಎಂಬ ಪಾಖಂಡಿ ಇದ್ದಕ್ಕಿದ್ದಂತೆ ಸಂತೋಷ ಭಾರತಿ ಗುರೂಜಿಯಾದ ಹಾಗೆಯೇ ಹುಂಡಿಕಳ್ಳ ರಾಮು ಏಕಾಏಕಿ ದೇವಿಶ್ರೀ ಗುರೂಜಿಯಾಗಿ ತಲೆ ಎತ್ತಿದ್ದ.

ಜೀ ಟೀವಿ, ಸಮಯ ಟೀವಿ, ಸುವರ್ಣ- ಹೀಗೆ ಸಿಕ್ಕಸಿಕ್ಕ ಚಾನಲ್ಲುಗಳನ್ನೆಲ್ಲ ಸುತ್ತಿಬಂದ ದೇವಿಶ್ರೀ ಗುರೂಜಿಗೆ ಆತನ ಆದಾಯದ ಮೂಲವೇ ಟೀವಿ ಪ್ರಚಾರ. ಟೀವಿ ನೋಡಿದ ಜನಕ್ಕೆ ಆತನಿಗೆ ನಿಜಕ್ಕೂ ಜ್ಯೋತಿಷ್ಯ ಗೊತ್ತಾ ಎಂಬ ಬಗ್ಗೆ ಯಾವುದೇ ಆಸಕ್ತಿಯಿರಲಿಲ್ಲ. ಪೌರೋಹಿತ್ಯವೇ ಗೊತ್ತಿಲ್ಲದೆ ಪುರೋಹಿತನಾದಂತೆಯೇ ದೇವಿಶ್ರೀ ಗುರೂಜಿ ಜ್ಯೋತಿಷ್ಯದ ಗಂಧಗಾಳಿ ಕೂಡ ತಿಳಿಯದೇ ಕೇವಲ ತನ್ನ ಮಾತು ಮತ್ತು ವೇಷಭೂಷಣದಿಂದಾಗಿಯೇ ಜ್ಯೋತಿಷ್ಯವನ್ನು ಬಳಸಿಕೊಂಡು ಸ್ವಾಮೀಜಿ, ಸಾಧು-ಸಂತರನ್ನೆಲ್ಲ ಹಿಂದಿಕ್ಕಿ ದೇವ ಮಾನವನ ಗೆಟಪ್ಪಿಗೆ ಬಂದು ಬಿಟ್ಟಿದ್ದ.

ಜ್ಯೋತಿಷ್ಯವೆಂಬುದೇ ಮಣ್ಣಾಂಗಟ್ಟಿ. ಅಂಥಾದ್ದರಲ್ಲಿ ತಮ್ಮೆಲ್ಲಾ ಕಷ್ಟ ಕಾರ್ಪಣ್ಯಕ್ಕೂ ಜ್ಯೋತಿಷ್ಯದಲ್ಲಿ ಪರಿಹಾರವಿದೆ ಎಂಬಂತೆ ಟೀವಿಗಳು ನಂಬಿಸುತ್ತಿವೆ. ಹೀಗೆ ಟೀವಿ ನೋಡಿ ಜ್ಯೋತಿಷ್ಯಕ್ಕೂ, ಆಧ್ಯಾತ್ಮಕ್ಕೂ, ಭಕ್ತಿಗೂ, ವಂಚನೆಗೂ ವ್ಯತ್ಯಾಸ ಗೊತ್ತಿಲ್ಲದೆ ದೇವಿಶ್ರೀಯ ಜಾಲದಲ್ಲಿ ಸಿಕ್ಕಿಬಿದ್ದವಳು ಗಿರಿನಗರದ ಯುವತಿ ಯಶಸ್ವಿನಿ (ಹೆಸರು ಬದಲಿಸಿದೆ). ತನಗೆ ಕೆಲಸ ಸಿಗುತ್ತಿಲ್ಲ ಎಂದಿದ್ದಕ್ಕೆ ನಾನೇ ಕೆಲಸ ಕೊಡ್ತೀನಿ ಅಂದ, ಮದುವೆಯಾಗುತ್ತಿಲ್ಲ ಎಂದಿದ್ದಕ್ಕೆ, ನಾನೇ ಮದುವೆಯಾಗ್ತೀನಿ ಅಂದ. ತನಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದೂ ಸಂಕಷ್ಟ ನಿವಾರಣೆಗೆಂದು ಬಂದಿದ್ದ ಯುವತಿಯನ್ನೇ ಮುಕ್ಕಿದ ದೇವಿಶ್ರೀ ಗುರೂಜಿ ಅಲಿಯಾಸ್ ಹುಂಡಿಕಳ್ಳ ರಾಮುವಿಗೂ ತನ್ನದೇ ಜ್ಯೋತಿಷ್ಯಾಲಯದ ಸಿಸಿ ಟೀವಿಯಲ್ಲಿ ತನ್ನ ಕಾಮ ವಿಕೃತಿಗಳೆಲ್ಲ ಚಿತ್ರೀಕರಿಸಲ್ಪಡುತ್ತಿವೆ ಎಂಬುದು ಗೊತ್ತಿದ್ದೂ ಮುಂದೆ ಅದೇ ತನ್ನ ಭವಿಷ್ಯದ ಸಮಾಧಿಗೂ ಕಾರಣವಾಗಲಿದೆ ಎಂಬ ಅತೀಂದ್ರಿಯ ಜ್ಞಾನವಿರಲಿ, ಕನಿಷ್ಠ ಕಾಮನ್‌ಸೆನ್ಸ್ ಕೂಡ ಇರಲಿಲ್ಲ.

● ರಾ.ಸೋಮನಾಥ್

# ...ರಮಾನಂದ ಸ್ವಾಮೀಜಿ ಗರ್ಭ ಕೊಟ್ಟ, ಗರ್ಭ ಕಿತ್ತ, ಮರ್ಮಕ್ಕೆ ಒದ್ದ...!



ಟೀವಿ ಪ್ರಾಯೋಜಿತ ದೇವಮಾನವ ಜ್ಯೋತಿಷಿಗಳ ವಂಚನೆ, ವಿಕೃತಿಗೆ ...ಲಿಸಿದರೆ ಈತನದ್ದು ತೀರ ವ್ಯತಿರಿಕ್ತ ಮತ್ತು ವಿಭಿನ್ನ ಶೈಲಿ. ತನ್ನ ...ಾಲುಟೋಪಿ ಬುದ್ಧಿಗೀತ ಟೀವಿ ಚಾನಲ್ಲುಗಳನ್ನು ಅವಲಂಬಿಸಿಲ್ಲ. ಹಾಗಂತ ...ತಿಷ್ಯ ಈತನ ಹೊಟ್ಟೆ ಪಾಡಲ್ಲ. ಹೆಸರು ರಮಾನಂದ ಸ್ವಾಮೀಜಿ. ...ಷೆಯೆಂದರೆ ಈತನಿಗೆ ಮದುವೆಯಾಗಿದೆ. 24 ವರ್ಷ ಪ್ರಾಯದ ಒಬ್ಬ ...ಗ, 21 ವರ್ಷದ ಮದುವೆಗೆ ನಿಂತ ಮಗಳಿದ್ದೂ ಪತ್ನಿ ಸಂಸಾರ ಸಮೇತ ...ವಿದ್ದೂ ತನ್ನನ್ನು ತಾನೇ ಸ್ವಾಮೀಜಿ ಎಂದು ಸ್ವಯಂ ...ೋಷಿಸಿಕೊಳ್ಳುತ್ತಾನೆಂದರೆ ಅದು ನಂಬುವವರು ನಂಬಿ ತಲೆ ...ೆಳಿಸಿಕೊಳ್ಳುವವರ ಕರ್ಮ ತಾನೆ?

ಇಂಥ ರಮಾನಂದ ಗುರೂಜಿ ತನ್ನ ಪತ್ನಿಯನ್ನು ಗರ್ಭಿಣಿ ಮಾಡಿದ್ದಾನೆ, ...ು ನನ್ನ ಗಮನಕ್ಕೆ ಬಂದದ್ದು ಗೊತ್ತಾಗಿ ಆಕೆಯನ್ನು ಮತ್ತಿಕೆರೆಯ ಸುಬ್ಬಯ್ಯ ...ತ್ರೆಗೆ ಕರೆದೊಯ್ದು ಗರ್ಭಪಾತ ಮಾಡಿಸಿದ್ದಾನೆ, ಅನ್ಯಾಯವನ್ನು ಪ್ರಶ್ನಿಸಿದ್ದಕ್ಕೆ ...ು ಜೊತೆ ನನ್ನ ಮಾವ ಅಂದರೆ ಹೆಂಡತಿಯ ತಂದೆಯೇ ಸೇರಿಕೊಂಡು ... ಮರ್ಮಾಂಗಕ್ಕೆ ಒದ್ದು ಹಲ್ಲೆ ನಡೆಸಿದ್ದಾರೆ ಎಂದು ಯಶವಂತಪುರ ...ಲೀಸ್ ಠಾಣೆಗೆ ಬಂದು ದೂರು ದಾಖಲಿಸಿದವನು ಯಶವಂತಪುರ ... ಶ್ರೀನಿವಾಸ್ ನಾಯ್ಡು ಎಂಬ 35 ರ ಪುರುಷ.

...ಹೇಕತ್ತನ್ನು ಆತನ ಬಾಯಿಂದಲೇ ಕೇಳುವುದಾದರೆ-

'ಹೋದಿ ಸಾರ್; ಅವರನ್ನು ನನ್ನ ಸರ್ವಸ್ವ ಎಂದುಕೊಂಡಿದ್ದೆ. ನನ್ನ ...ನ ದೇವರು ಎಂದು ಪೂಜಿಸುತ್ತಿದ್ದೆ. ಅವರ ಬಳಿ ಪತ್ನಿ ಸಮೇತ ನನ್ನನ್ನು ...ಯ್ದಿದ್ದು ನನ್ನ ಮಾವ ಕೆ. ನಾರಾಯಣಸ್ವಾಮಿ ನಾಯ್ಡು. ಏಕೆ ಗೊತ್ತಾ? ...ಗೆ ಮಕ್ಕಳಾಗಲಿ ಅನ್ನೋ ಒಂದೇ ಕಾರಣಕ್ಕೆ!

ಅದು 2011ರ ಜನವರಿ 14ನೇ ತಾರೀಖು. ವಿದ್ಯಾರಣ್ಯಪುರದ ನಂಜಪ್ಪ ...ರ್ ದಾಟುತ್ತಿದ್ದಂತೆ ತಿಂಡ್ಲು ಏರಿಯಾ ಇದೆ. ಅದಕ್ಕೆ ಹೊಂದಿಕೊಂಡಂತೆ ...ವ್ಯೂ ಗಾರ್ಡನ್ ಎಂಬ ಬಡಾವಣೆಯಿದೆ. ಅದರ ಎರಡನೇ ಕ್ರಾಸಿನ ... ನಂಬರಿನ ಮನೆಯೇ ಅಚಲಾಶ್ರಮ. ಸದ್ಗುರು ನಿಲಯ ಎಂಬ ...ಡ್ ನ್ನೂ ಹಾಕಿದ್ದಾರೆ. ಹಾಗೆ ರಮಾನಂದರು, ಶ್ರೀಶ್ರೀಶ್ರೀ ರಮಾನಂದರು, ...ದ್ಗುರು ರಮಾನಂದ ಸ್ವಾಮೀಜಿ ಇತ್ಯಾದಿ ಹೆಸರುಗಳನ್ನೂ ವಿವಿಧೆಡೆ ಬರೆಸಿದ್ದೂ ...ಸುತ್ತದೆ. ಪತ್ನಿ ಸಮೇತ ಬಿಟ್ಟ ವರ ನೀಡುವಂತೆ ಗಂಡ ಹೆಂಡಿರಿಬ್ಬರು ...ಮುದ್ರಿತ ಫೋಟೋ ಕೂಡ ಹಾಕಿಸಿದ್ದಾರೆ. ಇದರರ್ಥ ರಮಾನಂದರ ... ಶೋಭಾಳನ್ನು ನಾವೆಲ್ಲಾ ಶೋಭಾ ಮಾತಾಜಿ ಎಂದು ಕರೆಯಬೇಕಂತೆ. ... ಸ್ವಾಮಿಯ ಮಕ್ಕಳೂ ದೈವಾಂಶಸಂಭೂತರಾ ಎಂದು ತಲೆಕೆಡಿಸಿಕೊಂಡ ...ಗೆ ಗೊತ್ತಾದ ಪರಮ ಸತ್ಯವೆಂದರೆ ಸ್ವಾಮಿಯ ಮಗ ಓರ್ವ ಡ್ರಗ್ ...!

...ದ್ಗುರು ಧ್ಯಾನ ಕೇಂದ್ರ, ಅಚಲಾಶ್ರಮ ಇತ್ಯಾದಿ ಹೆಸರು ಬರೆಸಿ ಹಾಕಿಸಿದ ... ... ... ರಮಾನಂದರ ಪವಾಡಲೀಲೆಯಾದರೆ ... ಅವರ ಹೆಂಡತಿ ಮಕ್ಕಳು ನೆಲೆಸಿದ್ದಾರೆ. ಇದೊಂಥರ ... ಅಂದರೆ ಕೌಟುಂಬಿಕ ಆಧ್ಯಾತ್ಮ ಕೇಂದ್ರವಿದ್ದಂತೆ ಎಂದುಕೊಳ್ಳಲು ... ...

... ರಮಾನಂದ ಸ್ವಾಮೀಜಿ ಮಹಾನ್ ಧ್ಯಾನ ... ಶಕ್ತಿಯುಳ್ಳವರೆಂದೇ ನಾನು ಭಾವಿಸಿದ್ದೆ. ದೌರ್ಭಾಗ್ಯವೆಂದರೆ ಮದುವೆಯಾಗಿ 11 ವರ್ಷವಾದರೂ ನನಗೆ ಮಕ್ಕಳಾಗಲಿಲ್ಲ. ಕಂಡ ಕಂಡ ಆಸ್ಪತ್ರೆ, ಸಂತಾನ ಚಿಕಿತ್ಸಾ ಸಂಸ್ಥೆಗಳೆಲ್ಲವನ್ನೂ ಸುತ್ತಿ ಹೈರಾಣಾದೆನೇ ಹೊರತು ನನ್ನ ಪತ್ನಿ ಮಾತ್ರ ಗರ್ಭಿಣಿಯಾಗಲಿಲ್ಲ. ಪ್ರಾರಂಭದಲ್ಲಿ ನನ್ನ ಮಾವನವರೇ ರಮಾನಂದರ ಬಳಿ ಕರೆದೊಯ್ದರು. ಶಾಸ್ತ್ರದಂತೆ ನಾವಿಬ್ಬರೂ ಅವರಿಗೆ ಹೂಹಾರ ಹಾಕಿ ಕಾಲಿಗೆ ಬಿದ್ದೆವು.


ಸ್ವಾಮೀಜಿ ತಿಂಗಳಿಗೊಮ್ಮೆ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮನೆಯಲ್ಲೇ ತಂಗುತ್ತಿದ್ದರು. ಅವರು ಬಂದರೆಂದರೆ ನಾನು ದೇವರು ಬಂದಷ್ಟೇ ಖುಷಿ ಪಡುತ್ತಿದ್ದೆ. ಆಗ ನನ್ನ ಮನೆಯಿದ್ದದ್ದು ಯಶವಂತಪುರದ ಮುತ್ಯಾಲನಗರದಲ್ಲಿ. ವಠಾರದ ಮನೆ ನೋಡಿ. ಸ್ವಾಮೀಜಿ ಬಂದು ಹೋಗೋದನ್ನು ವಠಾರದ ಬೇರೆ ಮನೆಯವರೆಲ್ಲ ಚಿತ್ರವಿಚಿತ್ರವಾಗಿ ನೋಡೋದು ಬಹುಶಃ ಕಸಿವಿಸಿಯಾಗಿರಬೇಕು. ಅದೊಂದು ದಿನ ಸ್ವಾಮೀಜಿಯೇ ಬಂದು ಈ ಮನೆಯಲ್ಲಿ ವಾಸ್ತು ಸರಿ ಇಲ್ಲ, ಇಲ್ಲೇ ಇದ್ದರೆ ಈ ಜನ್ಮದಲ್ಲಿ ನಿಮಗೆ ಮಕ್ಕಳು ಆಗಲ್ಲ. ಮೊದಲು ಈ ಮನೆ ಖಾಲಿ ಮಾಡಿ, ನಿಮಗೆ ಸಂತಾನ ಪ್ರಾಪ್ತಿ ಆಗೋಕೆ ಲಾಯಕ್ಕಾದ ವಾಸ್ತು, ಯೋಗವುಳ್ಳ ಮನೆಯೊಂದನ್ನು ನಾನೇ ಹುಡುಕಿದ್ದೇನೆ. ಎಂದು ಮತ್ತಿಕೆರೆಯಲ್ಲಿದ್ದ ಭೋಗ್ಯದ ಮನೆಯೊಂದಕ್ಕೆ ಕರೆದೊಯ್ದರು. ಹೇಗೂ ಅದು ಪ್ರತ್ಯೇಕ ಪ್ರವೇಶವಿದ್ದ ಒಂಟಿ ಮನೆ. ಮತ್ತಿಕೆರೆಯಂಥ ಸುಸಜ್ಜಿತ ಬಡಾವಣೆಯಾಗಿತ್ತು, ನಾನೇ ಅಡ್ವಾನ್ಸ್ ಕೊಟ್ಟು ಹೆಂಡತಿ ಹೆಸರಿಗೇ ಅಗ್ರಿಮೆಂಟ್ ಮಾಡಿಸಿದೆ. ಸ್ವಾಮೀಜಿ ನನ್ನ ಮೇಲೆ ದಯೆ ತೋರಿಯೇ ಇಷ್ಟೆಲ್ಲಾ ಮಾಡುತ್ತಿದ್ದಾರೆಂದು ನಂಬಿದ್ದ ನನಗೆ ಇದು ನನ್ನ ಪತ್ನಿಯ ಮೇಲೆ ಕಣ್ಣಿಟ್ಟೇ ಸ್ವಾಮೀಜಿ ಆಡುತ್ತಿರುವ ಕಳ್ಳಾಟವೆಂದು ಹೇಗೆ ತಾನೇ ಅರ್ಥವಾಗಲು ಸಾಧ್ಯವಿತ್ತು?

ಹೊಸ ಮನೆಗೆ ಬಂದ ಮೇಲಂತೂ ವಾರಕ್ಕೊಮ್ಮೆ ಸ್ವಾಮಿ ಬರಲಾರಂಭಿಸಿದರು. ನನ್ನ ಮಾವ ಮೊದಲೇ ಸ್ವಾಮಿಯ ಪರಮಭಕ್ತನಾಗಿ ಬಿಟ್ಟಿದ್ದ. ಸ್ವಾಮಿಗೆ ಬ್ರಾಹ್ಮಣರನ್ನು ಕಂಡರೆ ಮಹಾದ್ವೇಷವಂತೆ. ಬ್ರಾಹ್ಮಣರನ್ನು ಸಿಕ್ಕಾಪಟ್ಟೆ ಬಯ್ಯುತ್ತಿದ್ದದ್ದಕ್ಕೆ ನಾನೂ ಖುಷಿ ಪಟ್ಟಿದ್ದೆ. ಸ್ವಾಮೀಜಿಗೆ ಮಾಂಸದ ಊಟ ಅಂದರೆ ಭಲೇ ಪ್ರೀತಿ. ವಾರಕ್ಕೊಮ್ಮೆ ಕುರಿ ಮಾಂಸದ ಸಾರು ಬೇಕೇ ಬೇಕು. ಎರಡು ದಿನಕ್ಕೊಮ್ಮೆಯಾದ್ರೂ ಹಂದಿ ಬಾಡಿರಲೇಬೇಕು. ಆಗಾಗ ಅವರಿಗೆ ಜಿಂಕೆ ಮಾಂಸ ಬರೋದು. ಇವರೇ ಬೇಟೆಗೆ ಹೋಗುತ್ತಿದ್ದರಾ ಅಥವಾ ಬೇರೆ ಯಾರೋ ಕಾಡುಗಳ್ಳರ ಮೂಲಕ ಇವರಿಗೆ ಜಿಂಕೆ ಮಾಂಸ ಬರುತ್ತಿತ್ತಾ ಗೊತ್ತಿಲ್ಲ. ಜಿಂಕೆ ಮಾಂಸದ ಅಡಿಗೆ ದಿನ ನಮ್ಮನ್ನೂ ಊಟಕ್ಕೆ ಕರೀತಿದ್ರು...!

ನನಗೆ ಮಕ್ಕಳಾಗುವ ಹಾಗೆ ನನ್ನ ವೀರ್ಯಕ್ಕೆ ಶಕ್ತಿ ಬರಲಿ ಎಂದು ಕುಂಡಲಿನಿ ಯೋಗ ಅಂತ ಶುರು ಹಚ್ಚಿಕೊಂಡರು. ವೀರ್ಯಕ್ಕೆ ಶಕ್ತಿ ಬರುತ್ತದೆ ಎಂದು ಬಲಗೈಗೆ ಅದೇನನ್ನೋ ಕಾಯಿಸಿ ಬರೆಯನ್ನೂ ಇಟ್ಟರು. 2012ರ ಹೊತ್ತಿಗೆ ನನ್ನ ಅರಿವಿಗೆ ಬಾರದೆಯೇ ನನ್ನ ಪತ್ನಿ ಸ್ವಾಮೀಜಿಯ ಪಾಲಾಗಿಹೋಗಿದ್ದಳು. ನಿನ್ನ ಗಂಡ ಷಂಡ. ಆತನಿಂದ ನಿನಗೆ ಮಕ್ಕಳಾಗಲು ಸಾಧ್ಯವಿಲ್ಲ. ಆತನಿಂದ ನಿನಗೆ ಲೈಂಗಿಕ ಸುಖ ಕೂಡ ಸಿಗುವುದಿಲ್ಲ ಎಂದು ಸ್ವಾಮೀಜಿ ನಂಬಿಸಿಬಿಟ್ಟಿದ್ದ.

ಇದು ನನ್ನ ಗಮನಕ್ಕೆ ಬರುವ ಹೊತ್ತಿಗೆ ಕಾಲ ಮಿಂಚಿತ್ತು. ನನ್ನ ಪತ್ನಿಗೆ ನಾನೇ ಅಸಹ್ಯವಾಗಿ ಬಿಟ್ಟೆ. ಸ್ವಾಮೀಜಿ ಜೊತೆ ದಿನಕ್ಕೆ ಕಮ್ಮಿಯೆಂದರೂ ಮೂರು ಗಂಟೆ ಮಾತಾಡೋಳು. 2014ರ ಜನವರಿ 8ಕ್ಕೆ ನಾನು ಶಬರಿಮಲೆಗೆ ಹೋದಾಗ ಪತ್ನಿ ಫೋನ್ ಮಾಡಿ ನಾನು ಪ್ರೆಗ್ನೆಂಟ್ ಆಗಿದ್ದೀನಿ ಎಂದಾಗಲೇ ನನಗೆ ಡೌಟ್ ಬಂತು. ಬೆಂಗಳೂರಿಗೆ ಬಂದು ನೋಡಿದರೆ ಆಕೆ ಮನೆ ಖಾಲಿ ಮಾಡಿಕೊಂಡು ತಾಯಿ ಮನೆ ಸೇರಿಕೊಂಡಿದ್ದಳು. ಸ್ವಾಮೀಜಿ ಆಕೆಗೆ 6 ಲಕ್ಷ ಖರ್ಚು ಮಾಡಿ ಪತಂಜಲಿ ಪ್ರಾಡಕ್ಟುಗಳ ಅಂಗಡಿ ಹಾಕಿಕೊಟ್ಟಿದ್ದ. ಅಲ್ಲಿಗೆ ಹುಡುಕಿಕೊಂಡು ಹೋದರೆ ಆಕೆ ಸ್ವಾಮೀ ಜೊತೆ ಓರಿಯನ್ ಮಾಲ್‌ನಲ್ಲಿ ಸಿನಿಮಾ ನೋಡುತ್ತಿದ್ದಳು.

ನನ್ನ ಹೆಂಡತಿ ಮೊಬೈಲ್ ಫೋನ್ ಮಾಡಿದರೆ ಅದನ್ನು ಸ್ವಾಮೀಜಿ ಎತ್ತಿದ್ದೇ 'ಮಗನೇ ನಿನ್ನ ಹೆಂಡತಿ ಪಾಲಿಗೆ ಗಂಡು ನೀನಲ್ಲ ನಾನು. ನಿನ್ನ ಥರ ಆಕೆಗೆ ಸುಖಾ ಕೊಡೋಕ್ಕೆ ಈ ಜನ್ಮದಲ್ಲಿ ನಿನ್ನಿಂದ ಸಾಧ್ಯವಿಲ್ಲ ನಿನ್ನಿಂದಾಗದ ಮಗುವನ್ನು ನಾನು ಕೊಡ್ತಾ ಇದ್ದೀನಿ... ಮುಚ್ಕೊಂಡು ಕೊಟ್ಟ ಮಗುವನ್ನ ಸಾಕೋದು ನೋಡು. ಕನಿಷ್ಠ ಸಮಾಜದ ಕಣ್ಣಿಗಾದ್ರೂ ಅಪ್ಪಾ ಅನ್ನಿಸ್ಕೋ...!' ಎಂದು ಬಿಟ್ಟ.



ಆಗಲೇ ನಾನು ನನ್ನ ಮಾವನನ್ನು ಸಂಪರ್ಕಿಸಿ ಡಿಎನ್‌ಎ ಟೆಸ್ಟ್ ಮಾಡಿಸಿ ಕೇಸ್ ಹಾಕ್ತೀನಿ ಎಂದೆ ನೋಡಿ, ಉಲ್ಟಾ ಹೊಡೆದು ಸುಬ್ಬಯ್ಯ ಆಸ್ಪತ್ರೆಯಲ್ಲಿ ಅಬಾರ್ಷನ್ ಮಾಡಿಸಿಬಿಟ್ಟರು. ಮಾಡಿದ ಅನಾಚಾರ ಪ್ರಶ್ನಿಸಿದ್ದಕ್ಕೆ, ಸ್ವಾಮೀಜಿ, ನನ್ನ ಮಾವ, ಇನ್ಯಾರೋ ಗೋವಿಂದರಾಜು ಎಂಬಾತ ಸೇರಿಕೊಂಡು ನನ್ನ ಮರ್ಮಾಂಗಕ್ಕೆ ಒದ್ದು ಹೊಡೆದಿದ್ದಾರೆ. ಹೆಂಡ್ತೀನೂ ಕಿತ್ಕೊಂಡು, 35 ಲಕ್ಷದ ನನ್ನ ಆಸ್ತಿನೂ ಕಿತ್ಕೊಂಡು. ಸ್ವಾಮೀಜಿ ಎಂದರೆ ಈ ಥರಾನಾ...?

... ಯಶವಂತಪುರದ ಶ್ರೀನಿವಾಸ ನಾಯ್ಡು ಕಣ್ಣೀರಿಟ್ಟ ...

# ಚಾನೆಲ್ ಭೂತಗಳು-ಭವಿಷ್ಯ ಪ್ರೇತಗಳು



ದೇವಿಶ್ರೀ ಎಂಬ ವಂಚಕ ಜ್ಯೋತಿಷಿ ತನ್ನ ಆಶ್ರಮವೆಂಬ ಅಡ್ಡಾದಲ್ಲಿ ನಡೆಸುತ್ತಿದ್ದ ಲೈಂಗಿಕ ದೌರ್ಜನ್ಯಗಳ ವಿಡಿಯೋ ಕ್ಲಿಪ್ಪಿಂಗ್ಸ್ ಬಹಿರಂಗ ಮಾಡುವ ಮೂಲಕ ನ್ಯೂಸ್ ಚಾನೆಲ್‌ಗಳು ಮತ್ತೊಬ್ಬ ಕಪಟಿ ಜ್ಯೋತಿಷಿಯನ್ನು ಬೆತ್ತಲುಗೊಳಿಸಿದವು. ಈ ಕ್ಲಿಪ್ಪಿಂಗ್ ಸಿಗುವವರೆಗೂ ಆ ದೇವಿಶ್ರೀ ಎಲ್ಲ ಚಾನೆಲ್ ಜ್ಯೋತಿಷಿಗಳಂತೆ ಚಾನೆಲ್‌ಗಳ ಮೂಲಕವೇ ತನ್ನ 'ಮಾರುಕಟ್ಟೆ'ಯನ್ನು ವಿಸ್ತರಿಸಿಕೊಳ್ಳುತ್ತ ಬಂದಿದ್ದ. ಅಂದರೆ ಚಾನೆಲ್‌ಗಳಿಗೆ ಮುಖ್ಯವಾಗಿದ್ದು ಆ 'ರೋಚಕ' ದೃಶ್ಯಾವಳಿಯಷ್ಟೆ!

ಒಟ್ನಲ್ಲಿ ಹಿಂದೊಮ್ಮೆ ಅರ್ನಾಬ್ ಗೋಸ್ವಾಮಿಯೇ ಹೇಳಿದಂತೆ 'ಟಿವಿ ಎಂದರೆ ಡ್ರಾಮಾ'! ಡ್ರಾಮಾ, ಮೆಲೋಡ್ರಾಮಾ, ಗದ್ದಲ, ಗಜಿಬಿಜಿ ಇದ್ದರೆ ಅದು ಟಿಆರ್‌ಪಿ ಸರಕು! ಜನರ - ಅದರಲ್ಲೂ ಮಧ್ಯಮ ವರ್ಗದವರ - ನಂಬಿಕೆಗಳ ಸುತ್ತ ಆಟ ಆಡುವ ಜ್ಯೋತಿಷ್ಯವೂ ಟಿಆರ್‌ಪಿ ಸರಕೇ! ಹೀಗಾಗಿ ದೇಶದ ಎಲ್ಲ ಪ್ರಾದೇಶಿಕ ಚಾನೆಲ್‌ಗಳಲ್ಲಿ ಮುಂಜಾನೆ ಹೊತ್ತು ಭವಿಷ್ಯಕಾರರ ಹಾವಳಿಯೋ ಹಾವಳಿ! ನ್ಯೂಸ್ ಚಾನೆಲ್ಲು ಮತ್ತು ಮನರಂಜನಾ ಚಾನೆಲ್ಲುಗಳೆರಡಕ್ಕೂ ಬೆಳಕು ಹರಿಯುವುದು ಈ ವ್ಯಾಪಾರಿ ಜ್ಯೋತಿಷಿಗಳಿಂದಲೇ! ಅಂದಂತೆ ಮೊದಲ 'ಬೋಣಿ'ಯೂ ಇವರದೇ!

ಮುಂಜಾನೆಯ ಸ್ಲಾಟುಗಳನ್ನು ಪೈಪೋಟಿಗೆ ಬಿದ್ದು ಖರೀದಿಸುತ್ತಾರಂತೆ ಜ್ಯೋತಿಷಿಗಳು! ಜನರಿಂದ ದೋಚಿದ 'ದಕ್ಷಿಣೆ'ಯಲ್ಲಿ ಒಂದು ಪಾಲು ಚಾನೆಲ್‌ಗಳಿಗೆ! ಬುರುಡೆ ದಾಸರಿಗೆ ಚಾನೆಲ್‌ಗಳೇ ಅಂಗಡಿಗಳು. ಈ ನ್ಯೂಸ್ ಚಾನೆಲ್‌ಗಳ ದುಷ್ಪರಿಣಾಮವೋ ಏನೋ, ಒಂದು ಘಟ್ಟದಲ್ಲಿ ಮನರಂಜನಾ ಚಾನೆಲ್‌ಗಳಲ್ಲಿ ಸ್ವಾಮೀಜಿ, ಬುರುಡೆದಾಸರು ಇರದ ಧಾರಾವಾಹಿಗಳೇ ಇರಲಿಲ್ಲ. ನಿತ್ಯಾನಂದನ ಅವಾಂತರಗಳು ಸುದ್ದಿಯಾದ ಮೇಲಷ್ಟೇ ಈ ಪಿಡುಗಿಗೆ ಒಂದಿಷ್ಟು ಬ್ರೇಕ್ ಬಿದ್ದದ್ದು!

## ಚರ್ಚೆಗಳಿಗೂ ವಕ್ಕರಿಸಿದ ಪ್ರೇತಗಳು!


ಮುಂಜಾನೆ ಹರಳು, ಉಂಗುರ ಮಾರಿಕೊಳ್ಳುತ್ತಿದ್ದ ಕಪಟಿಗಳನ್ನು ಪ್ಯಾನೆಲ್ ಡಿಸ್ಕಸನ್‌ಗಳಿಗೆ ತಂದು ಕೂಡಿಸಲಾಯಿತು. ಕಾಗೆ ಕಾಟ, ಗೂಬೆ ಸಂಕಟಗಳ ಸುತ್ತ ಚರ್ಚೆಗಳು! ಇದಕ್ಕೆ ಅವರಿಂದಲೇ ಪರಿಹಾರಗಳು! ಅದೆಲ್ಲ ಹೋಗಲಿ, ಭಾರತದ ಆರ್ಥಿಕ ಮುಗ್ಗಟ್ಟಿನ ಚರ್ಚೆಯಲ್ಲೂ ಈ ಪಂಡಿತರಿಂದ ಪರಿಹಾರಗಳು. ಹಲವು ತಿಂಗಳುಗಳ ಹಿಂದೆ ಕನ್ನಡದ ನ್ಯೂಸ್ ಚಾನೆಲ್‌ಗಳಲ್ಲೂ ರೂಪಾಯಿ ಕುಸಿತದ ಬಗ್ಗೆ ವಿಪರೀತ ಡಿಸ್ಕಸನ್ ಆಯಿತು. ಒಂದೆರಡು ಚಾನೆಲ್‌ಗಳಲ್ಲಿ ಜ್ಯೋತಿಷಿಗಳಿಗೂ ಅವಕಾಶ ನೀಡಲಾಗಿತ್ತು.

ಇವರ ಪ್ರಕಾರ ರೂಪಾಯಿ ಚಿಹ್ನೆ ಬದಲಿಸಿದ್ದೇ ಇದಕ್ಕೆಲ್ಲ ಕಾರಣವಂತೆ. ಇದೆಲ್ಲಕ್ಕೂ ತಿರುಪತಿ ತಿಮ್ಮಪ್ಪನ ಬಳಿ ಪರಿಹಾರ ಇದೆಯಂತೆ! ಹಣಕಾಸು ಸಚಿವರು ತಿಮ್ಮಪ್ಪನ ದರ್ಶನ ಮಾಡಿ, ಕ್ಷಮೆ ಕೇಳಿದ್ದರೆ ರೂಪಾಯಿ ಕುಸಿತ ತಡೆಯಬಹುದಿತ್ತಂತೆ! ಹೀಗೆಲ್ಲ ತಲೆಬುಡವಿಲ್ಲದೇ ಈ ಜ್ಯೋತಿಷಿ ಒದರುವಾಗ ಆಂಕರ್‌ಗಳು ಗಂಭೀರವಾಗಿ ಕುಳಿತು ಗೋಣು ಅಲ್ಲಾಡಿಸುತ್ತಿದ್ದರು! ಅವರು ಏನಾದರೂ ಹೇಳಲಿ, ಪಾಪ ಚರ್ಚೆಯಲ್ಲಿದ್ದ ಶೈಲೇಶಚಂದ್ರ ಗುಪ್ತರಂತಹ ಅರ್ಥಶಾಸ್ತ್ರ ಬಲ್ಲವರು ಇದನ್ನೆಲ್ಲ ಕೇಳಿಸಿಕೊಳ್ಳುವ ಶಿಕ್ಷೆ ಅನುಭವಿಸಬೇಕಲ್ಲ?

ಆಂಧ್ರದಲ್ಲಿ ತಂಬಿ ಎನ್ನುವ ಯುವಕನಿಗೆ ಕಾಗೆ ಕಾಟ ಶುರುವಾಯಿತಂತೆ. ಮನೆಯಾಚೆ ಬಂದರೆ ಕಾಗೆಗಳು ಆತನ ತಲೆ ಸುತ್ತ ಹಾರಾಡುತ್ತಿದ್ದವಂತೆ! ಈ ಕುರಿತು ಟಿವಿ ಒಂಭತ್ತರಲ್ಲಿ ಒಂದು ಚರ್ಚೆ. ಆಂಕರ್ ರಾಧಿಕಾರಿಗೆ ಉತ್ಸಾಹವೋ ಉತ್ಸಾಹ! ಆ ಚಾನೆಲ್ಲಿನ ಭಾಗವೇ ಆದಂತಿರುವ ಸಚ್ಚಿದಾನಂದ ಎಂಬ ಜ್ಯೋತಿಷಿಯಿಂದ ಪರಿಹಾರ! ಪಿತೃ ತಿಥಿಯಲ್ಲಿನ ಲೋಪವೇ ಇದಕ್ಕೆಲ್ಲ ಕಾರಣವಂತೆ.

ಇದಾದ ಆರು ತಿಂಗಳ ನಂತರ ಬೆಂಗಳೂರಲ್ಲಿ ಲಕ್ಷ್ಮೇಶ್ವರ ಮೂಲದ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಾಗ ಮತ್ತೆ ಚಾನೆಲ್‌ಗಳಲ್ಲಿ ಕಾಗೆಗಳು ಕಾವ್ ಕಾವ್ ಎಂದವು. ಕಾಗೆ ಮುಟ್ಟಿದ್ದರಿಂದ ಅಪಶಕುನ ಎಂದು ಹೆದರಿದ ಯುವಕ ಸಾವಿಗೆ ಶರಣಾದನಂತೆ! ನಿಜಕ್ಕೂ ಸಾವಿಗೆ ಅದೇ ಕಾರಣವಾಗಿದ್ದರೆ ಅದಕ್ಕೆ 'ಒಂಭತ್ತು' ಚಾನೆಲ್ಲು ಹುಟ್ಟು ಹಾಕಿದ ಅನಗತ್ಯ ಭೀತಿಯೇ ಕಾರಣವಲ್ಲವೇ?

ಈ 'ಕಾಗೆ' ಎಕ್ಸ್‌ಪರ್ಟ್ ಸಚ್ಚಿದಾನಂದನಿಗೆ ಹಂದಿಗಳ ಮೇಲೂ ದ್ವೇಷ ಅಂತ ಕಾಣುತ್ತದೆ. ಕಳೆದ ಮಾರ್ಚ್ 9



ರವಿವಾರದಂದು ಈತ ವಿಶೇಷ ಕಾರ್ಯಕ್ರಮವೊಂದನ್ನು ನೀಡಿದ. ಅವತ್ತಿನ ವಿಷಯ: 'ತಂದೆಯ ಅಕಾಲ ಮೃತ್ಯುವಿಗೆ ಕಾರಣಗಳೇನು ಮತ್ತು ಪರಿಹಾರಗಳೇನು?'

ಮಕ್ಕಳ ಜಾತಕದಲ್ಲಿ ಅಕಾಲಿಕ ಪಿತೃ ಮರಣದ ಸೂಚನೆಗಳಿರುತ್ತವಂತೆ. ಮುಂದೆ ಕುಳಿತ ಆಂಕರ್ ವಿನಮ್ರತೆಯಿಂದ (ನೋಡುಗರಿಗೆ ಉಪಕಾರ ಮಾಡುವವಳಂತೆ) ಕೇಳುತ್ತಾಳೆ "ಗುರೂಜಿ, ಸಾಮಾನ್ಯವಾಗಿ ಯಾರೂ ತಂದೆಯನ್ನು ಕಳೆದುಕೊಳ್ಳಲು ಬಯಸುವುದಿಲ್ಲ, ಅಂತಹ ದೋಷಗಳಿದ್ದರೆ ಅದಕ್ಕೆ ಪರಿಹಾರಗಳನ್ನು ಹೇಳಿ."

ಇದಕ್ಕೆ ಗುರೂಜಿಯ ಉತ್ತರ ಹೀಗಿತ್ತು: "ಹಂದಿಗೆ ವಾಹನ ಹಾಯಿಸಿ, ಆ ಹಂದಿ ಸತ್ತರೆ 14 ದಿನಗಳಲ್ಲಿ ವಾಹನ ಸವಾರನ(ಳ) ತಂದೆಯ ಸಾವು ನಿಶ್ಚಿತ. ಗರ್ಭಿಣಿಯ ಕನಸಿನಲ್ಲಿ ಇಲಿ ಬಂದರೆ ತಂದೆಗೆ ಹತ್ತಿರದಲ್ಲೇ ಸಾವು ಕಾದಿದೆ ಎಂದರ್ಥ. ಇದನ್ನು ತಪ್ಪಿಸಲು ಜ್ಯೋತಿಷ್ಯದಲ್ಲೇ ಪರಿಹಾರಗಳಿವೆ. ಉಂಗುರ (ಅದ್ಯಾವುದೋ ಹೆಸರಿನ ಉಂಗುರ) ಧರಿಸಿ ನಾಲ್ಕು ತಿಂಗಳು ಬ್ರಹ್ಮಚರ್ಯ ಪಾಲನೆ ಮಾಡಿದರೆ ತಂದೆ ಸಾವನ್ನು ತಪ್ಪಿಸಬಹುದು."

ಹೀಗೆ ತಳಬುಡವಿಲ್ಲದ ಮಾತುಗಳಿಂದ ಜನರಲ್ಲಿ ಭಯ ಹುಟ್ಟಿಸುವ, ಆ ಮೂಲಕ ಅವರನ್ನು ಗಿರಾಕಿಗಳನ್ನಾಗಿ ಮಾಡಿಕೊಳ್ಳುವ ಈ 'ಕಲೆ' ಅಪರಾಧವೇ ಅಲ್ಲವೇ?

## ಯಂತ್ರ, ತಾಯತಗಳ ಮಾರ್ಕೆಟಿಂಗ್

ಯಂತ್ರ, ತಾಯತ, ಹರಳು, ಉಂಗುರಗಳನ್ನು ಮಾರುವವರಿಗೂ ಈ ಚಾನೆಲ್‌ಗಳೇ ವೇದಿಕೆಗಳು ಅಥವಾ ಅಂಗಡಿಗಳು. 15 ನಿಮಿಷಗಳ ಜಾಹೀರಾತಿನ ಮೂಲಕ ಈ ದಂಧೆಯ ಪ್ರಚಾರ ಜರುಗುತ್ತದೆ! ನೋಡಲಿಕ್ಕೆ ಇದು ಕಾರ್ಯಕ್ರಮದಂತೆ ಇರುವುದರಿಂದ ನೋಡುಗರು ಬೇಗ ಬಲಿಪಶುಗಳಾಗುತ್ತಾರೆ. ಈಗ ಸಿಕ್ಕಿಬಿದ್ದಿರುವ ದೇವಿಶ್ರೀ ಕೂಡ 'ಭೈರವಿ ಯಂತ್ರ' ಮಾರುವವನೇ. ಬಹುಪಾಲು ಎಲ್ಲ ಚಾನೆಲ್ಲುಗಳಲ್ಲಿ ಈತನ ಈ ಜಾಹೀರಾತು ಪ್ರಸಾರವಾಗಿದೆ. ಈತನೇ 'ಸಂಶೋಧಿಸಿರುವ' ಈ ಯಂತ್ರದಿಂದ ಸಕಲ ಸಮಸ್ಯೆಗಳಿಗೆ ಪರಿಹಾರ ಸಿಗುವುದಂತೆ. ಯಂತ್ರದ ಬೆಲೆ ಸಾವಿರದಿಂದ ಮೂರು ಸಾವಿರ ಮಾತ್ರ!

ಇದೇ ಬಗೆಯಲ್ಲಿ ಉತ್ತರ ಭಾರತದ ಕಪಟ ಸಂಸ್ಥೆಯೊಂದು 'ಮಹಾಧನ್' ಎಂಬ ಯಂತ್ರವನ್ನು ಕನ್ನಡ ಚಾನೆಲ್‌ಗಳ ಮೂಲಕ ಮಾರ್ಕೆಟಿಂಗ್ ಮಾಡುತ್ತಿದೆ. ಎಷ್ಟೊಂದು ವ್ಯವಸ್ಥಿತ ಮಾರುಕಟ್ಟೆಯಲ್ಲವೇ? ಈ ವಂಚಕರು ಆನ್‌ಲೈನ್ ವ್ಯಾಪಾರವನ್ನೂ ಮಾಡುತ್ತಾರೆ!

## ವಾಸ್ತು ಎಂಬ ಸಾಂಕ್ರಾಮಿಕ ರೋಗ!


ಮನೆಮುರುಕರು ಎಂಬ ಪದದ ಅರ್ಥ ಈಗ ವಿಸ್ತರಣೆಯಾಗಿದೆ. ಇರುವ ಮನೆಯನ್ನು ವಿರೂಪಗೊಳಿಸುವ 'ವಾಸ್ತು' ಪಿಶಾಚಿಗಳನ್ನು ಮನೆಮುರುಕರು ಎನ್ನಲಡ್ಡಿಯಿಲ್ಲ. ಈಗ ಈ ವಾಸ್ತು ಪೀಡೆ ಸಾಂಕ್ರಾಮಿಕ ರೋಗದಂತೆ ಹರಡುತ್ತಿದೆ. ಕನ್ನಡದ ಬಹುಪಾಲು ನ್ಯೂಸ್ ಚಾನೆಲ್‌ಗಳಲ್ಲಿ ಚಂದ್ರಶೇಖರ ಗುರೂಜಿ ಎಂಬ ವಾಸ್ತು ಪಂಡಿತ ಜಾಹೀರಾತಿನ ಮೂಲಕವೋ, ಕಾರ್ಯಕ್ರಮದ ಮೂಲಕವೋ ವಕ್ಕರಿಸಿ ಗಿರಾಕಿಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಇವನದು ಬರೀ ವಾಸ್ತು ಅಲ್ಲವಂತೆ! ಅದು ವೈಜ್ಞಾನಿಕ ವಾಸ್ತುವಂತೆ! ಇವನೇ ಇದನ್ನು ಸಂಶೋಧಿಸಿದ್ದಾನಂತೆ. ಮನೆಯಲ್ಲಿರುವ ನೆಗೆಟಿವ್ ಎನರ್ಜಿಯನ್ನು ಹೊಡೆದೋಡಿಸಿ ಪಾಸಿಟಿವ್ ಎನರ್ಜಿ ಸೃಷ್ಟಿಸುವಲ್ಲಿ ಇವನು ಎಕ್ಸ್‌ಪರ್ಟ್ ಅಂತೆ!

ಮನೆ ತುಂಬಾ ಗಂಟೆ ಬಾರಿಸಿದರೆ ನೆಗೆಟಿವ್ ಎನರ್ಜಿ ಹೊರಗೆ ಓಡಿ ಪಾಸಿಟಿವ್ ಎನರ್ಜಿ ಬರುತ್ತದಂತೆ! ಮೊಬೈಲ್ ರಿಂಗಾದಾಗ ನೆಗೆಟಿವ್ ಎನರ್ಜಿ ಉತ್ಪಾದನೆಯಾಗುತ್ತಂತೆ! ಯಾವ ದಿಕ್ಕಿಗೆ ಕೂತು ಓದಿದರೆ ರ್‍ಯಾಂಕ್ ಬರುತ್ತೆ ಯಾವ ದಿಕ್ಕಿಗೆ ಮುಖ ಮಾಡಿದರೆ ಒಳ್ಳೆ ಕನಸು ಬೀಳುತ್ತೆ ಇತ್ಯಾದಿಯನ್ನು 'ಸಂಶೋಧಿಸಿರುವ' ಈ ಮಹಾಶಯ ಕನಸು ಮಾರಿ ಲಾಭ ಮಾಡಿಕೊಳ್ಳಬಲ್ಲ ಅಸಾಮಿ!

ಮೂಲತಃ ಬಾಗಲಕೋಟೆಯ ಈತ ಅಲ್ಲಿನ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಓದಿದ್ದಾನಂತೆ! ಇನ್ನು ಕೆಲವರ ಪ್ರಕಾರ ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ನಾಲ್ಕು ವರ್ಷದ ಸಿವಿಲ್ ಇಂಜಿನಿಯರಿಂಗ್ ಕೋರ್ಸ್ ಅನ್ನು ಎಂಟು ವರ್ಷಕ್ಕೆ ಮುಗಿಸಿರುವ ಚತುರನಂತೆ!

ಅದೆಲ್ಲ ಇರಲಿ, ಪ್ರತಿ ರವಿವಾರ ಮುಂಜಾನೆ ಸುವರ್ಣ ನ್ಯೂಸ್‌ನಲ್ಲಿ ಈತ ಕಾರ್ಯಕ್ರಮ ಕೊಡುತ್ತಾ ಜನರ 'ದಿಕ್ಕು' ತಪ್ಪಿಸುತ್ತಾನೆ! ಈ ಸರಣಿಯ ನೂರನೇ ಕಾರ್ಯಕ್ರಮಕ್ಕೆ ವಿಶ್ವೇಶ್ವರ ತಾಂತ್ರಿಕ ವಿವಿಯ ಮೊದಲ ಉಪ ಕುಲಪತಿಯಾಗಿದ್ದ ಡಾ. ಎಸ್. ರಾಜಶೇಖರಯ್ಯ ಅತಿಥಿಗಳಾಗಿ ಬಂದು ತಮ್ಮ 'ಶಿಷ್ಯ'ನ ವ್ಯವಹಾರಕ್ಕೆ ಬೆಂಬಲ ಸೂಚಿಸಿ ಮಾತಾಡಿದರು. ಇಂತಹ ಮಹಾಶಯರೇ ಹೀಗೆ ವರ್ತಿಸುವಾಗ, ಅನಂತ್ ಚಿನಿವಾರ್ ತಾನೇ ಏನು ಮಾಡಿಯಾರು?

### ಸಿನಿಮಾ, ಚಾನೆಲ್ ಮತು ಮೌಢ್ಯ




ರವಿಚಂದ್ರನ್ ತಮ್ಮ ಹೆಸರನ್ನು ರವಿಚಂದಿರನ್ ಎಂದು ಬದಲಾಯಿಸಿಕೊಂಡರಂತೆ. ಸದ್ಯದಲ್ಲೇ ಅವರು ಮನೆ ಬದಲಾಯಿಸುತ್ತಾರಂತೆ. ಅದೆಲ್ಲವೂ ವಾಸ್ತುದೋಷ ನಿವಾರಣೆಗಂತೆ!

ಇದನ್ನೇ ಇಟ್ಟುಕೊಂಡು ಚಾನೆಲೊಂದು ಅರ್ಧ ತಾಸಿನ ಬುರುಡೆ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಸಿನಿಮಾ ಮತ್ತು ಮೌಢ್ಯ- ಒಟ್ಟೊಟ್ಟಿಗೆ! ಇದಕ್ಕಿಂತ ಟಿಆರ್‌ಪಿ ಸರಕು ಬೇಕೆ?

'ಜಯಮ್ಮನ ಮಗ' ಚಿತ್ರದಲ್ಲಿ ನಟ ವಿಜಯ್ ಕಾಳಿ ದೇವಿಯ ಪಾತ್ರ ಹಾಕಿದ್ದ, ಆತನಿಗೆ ಇದರಿಂದ ಭಯಾನಕ ಅನುಭವ ಆಯಿತಂತೆ! ಭಯ ನಿವಾರಣೆಗೆ ಅಮಾವಾಸ್ಯೆಯಂದು ಪ್ರತ್ಯಂಗಿರಾ ಹೋಮ ಮಾಡಿದ. ಎಲ್ಲ ನ್ಯೂಸ್ ಚಾನೆಲ್‌ಗಳೂ ಪೈಪೋಟಿಗೆ ಬಿದ್ದವರಂತೆ ಈ ಹೋಮವನ್ನು ಲೈವ್ ಟೆಲಿಕಾಸ್ಟ್ ಮಾಡಿ 'ಪುಣ್ಯ' ಕಟ್ಟಿಕೊಂಡವು. ಸಾಲದ್ದಕ್ಕೆ ವಿಜಯ್‌ನ ಸಂದರ್ಶನ ನಡೆಸಿ ಕೃತಾರ್ಥಗೊಂಡವು. ಬಲ್ಲವರ ಪ್ರಕಾರ ಇದು 'ಜಯಮ್ಮನ ಮಗ' ಚಿತ್ರದ ಮೊದಲ ಪ್ರೊಮೊ ಆಗಿತ್ತಂತೆ!


ಒಬ್ಬರಿಗೆ ಟಿಆರ್‌ಪಿ 'ಲಾಭ', ಇನ್ನೊಬ್ಬರಿಗೆ ಪ್ರಚಾರದ ಅವಕಾಶ!

### ನಂಬರ್ ಸ್ವಾಮಿಯೂ, ಪ್ರನಾಳ ಶಿಶು ಜನಕನೂ

ಆರ್ಯವರ್ಧನ ಎಂಬಾತ ನಂಬರ್‌ಗಳಲ್ಲಿ ರೀಲು ಬಿಡುತ್ತ ನ್ಯೂಮರಾಲಜಿ ಹೆಸರಲ್ಲಿ ಜನರನ್ನು ದಾರಿ ತಪ್ಪಿಸುತ್ತಾನೆ. ನಂಬರ್ ಅದೃಷ್ಟವಿದ್ದರೆ ಬ್ಯಾಟಿನಿಂದ ಸುಮ್ಮನೆ ಟಚ್ ಮಾಡಿದರೂ ಅದು ಸಿಕ್ಸರ್ ಆಗುತ್ತದಂತೆ! ಬಹುಶಃ ಈತ ಈ ಹಿಂದೆ ಮಟ್ಕಾ ಏಜೆಂಟನಾಗಿದ್ದ ಎಂದು ಕಾಣುತ್ತದೆ!

ಕನ್ನಡ ಚಾನೆಲ್‌ಗಳೇ ಬೆಳೆಸಿದ ನಕಲಿ ಡಾಕ್ಟರ್ ಗುರುಮೂರ್ತಿ ಈಗ ಜೈಲು ಪಾಲಾಗಿದ್ದಾನೆ. ಈಗ ಚಾನೆಲ್‌ಗಳಿಂದ ಬೆಳೆದ ದೇವಿಶ್ರೀ ಕೂಡಾ ಜೈಲು ಪಾಲಾಗಿದ್ದಾನೆ. ಚಾನೆಲ್‌ನವರು ಮಾತ್ರ ಸದಾ ಸೇಫ್!

### ಪುಸ್ತಕ ಓದದೇ ಒದರಿದವರು!



ಕನ್ನಡ ನ್ಯೂಸ್ ಚಾನೆಲ್‌ಗಳು 'ಢುಂಢಿ'ಯ ಲೇಖಕ ಯೋಗೀಶ್ ಮಾಸ್ಟರ್‌ರನ್ನು ಭಯೋತ್ಪಾದಕ ಎಂಬಂತೆ ಬಿಂಬಿಸಲು ಯತ್ನಿಸಿದವು. ಒಂದು ಚಾನೆಲ್ ಇನ್ನಷ್ಟು ಮುಂದಕ್ಕೆ ಹೋಗಿ, ಪ್ರಣವಾನಂದ ಸ್ವಾಮಿ, ಜಯಕುಮಾರ್ ಹಿರೇಮಠ ಎಂಬ ಕಿರಾತಕ ಆಸಾಮಿಗಳನ್ನು ಸ್ಟುಡಿಯೋದಲ್ಲಿ ಕೂಡಿಸಿಕೊಂಡು ಚರ್ಚೆ ನಡೆಸಿತು. ಈ ಕಿರಾತಕರು 'ಲೇಖಕನ ಮೇಲೆ ಅಟ್ಯಾಕ್ ಮಾಡಿ' ಎಂದೆಲ್ಲ ಜನರನ್ನು ಪ್ರಚೋದಿಸಿದರು.

ವಿಚಿತ್ರ ಎಂದರೆ ಈ ಇಬ್ಬರೂ ಆ ಕಾದಂಬರಿಯನ್ನೇ ಓದಿರಲಿಲ್ಲ! ಬಂಜಗೆರೆ ಜಯಪ್ರಕಾಶರು ಫೋನ್ ಮೂಲಕ ಸಂಪರ್ಕಿಸಿ ಈ ಆಸಾಮಿಗಳನ್ನು ತರಾಟೆಗೆ ತೆಗೆದುಕೊಂಡಾಗಲೇ ಆ ಇಬ್ಬರೂ 'ಹಿಂದೂ' ಸೇನಾನಿಗಳು ತಾವು ಕಾದಂಬರಿ ಓದೇ ಇಲ್ಲ ಎಂದು ಒಪ್ಪಿಕೊಂಡರು.

ಈ ಚಾನೆಲ್ ಮಹಾಶಯರಾದರೂ ಈ ಕಾದಂಬರಿ ಓದಿರಬಹುದೇ ಎಂಬ ಅನುಮಾನ ಕಾಡತೊಡಗಿತ್ತು!

## 2012 : ಪ್ರಳಯಭೀತಿಯ ದಂಧೆ!


2012ರಲ್ಲಿ ಪ್ರಳಯ ಎಂಬ ಬೊಗಳೆಯನ್ನು ಒಂದಿಷ್ಟು ಚಾನೆಲ್‌ಗಳು ನಿರಂತರವಾಗಿ ಪ್ರಸಾರ ಮಾಡುತ್ತ ಟಿಆರ್‌ಪಿ ಏರಿಸಿಕೊಂಡಿದ್ದವು. ಆಗ 'ಜನಶ್ರೀ'ಯಲ್ಲಿದ್ದ ಚಿನಿವಾರ್ 'ಪ್ರಳಯ ಎಂಬ ಬುರುಡೆ' ಎಂಬ ವಾಸ್ತವವನ್ನು ನಿರಂತರವಾಗಿ ಪ್ರಸಾರ ಮಾಡಿ ಜನಪರ ಕಾಳಜಿ ಪ್ರದರ್ಶಿಸಿದ್ದರು. ಅವರು ಅಲ್ಲಿ ಇರುವತನಕ ಜ್ಯೋತಿಷಿಗಳಿಗೆ ಮಣೆ ಹಾಕಲಿಲ್ಲ. ಆದರೆ ಸುವರ್ಣ ನ್ಯೂಸ್‌ಗೆ ಬಂದನಂತರ ಅವರಿಗೂ ಭವಿಷ್ಯದ ಭೂತ ವಕ್ಕರಿಸಿಕೊಂಡುಬಿಟ್ಟದೆ. ಏನು ಮಾಯೆಯೋ?

ಮೌಢ್ಯವು ಅಜ್ಞಾನದಿಂದ ಉಂಟಾಗಿದ್ದರೆ ತಿದ್ದಬಹುದು. ಆದರೆ ಟಿಆರ್‌ಪಿ ಏರಿಕೆಗೆ, ಲಾಭಕ್ಕೆ ಮತ್ತು ಸ್ವಾರ್ಥಕ್ಕಾಗಿ ಮೌಢ್ಯದ ಪ್ರಚಾರ, ಪ್ರಸಾರ ಮಾಡಿದರೆ ಅದು ಜನದ್ರೋಹ. ಇಂತಹ ವ್ಯವಸ್ಥಿತ ಜಾಲದಲ್ಲಿರುವವರೆಲ್ಲ 'ಮೌಢ್ಯ ಪ್ರತಿಬಂಧಕ ಮಸೂದೆ' ಜಾರಿಗೆ ಬರದಂತೆ ಹುನ್ನಾರ ನಡೆಸಿದ್ದರಲ್ಲಿ ಆಶ್ಚರ್ಯವೇನು ಬಂತು?

ಆರೆಸ್ಸೆಸ್ ಚಿಂತನೆಗಳು ಮತ್ತು ಬ್ರಾಹ್ಮಣಶಾಹಿ ಮನಸುಗಳ ವಿರುದ್ಧ ಜನಾಂದೋಲನಗಳು ತೀವ್ರಗೊಂಡಾಗ ಮಾತ್ರ ಜ್ಯೋತಿಷ್ಯ ವಾಸ್ತು ಪೀಡೆಗಳಿಂದ ಮುಕ್ತಿ ಸಿಗಬಹುದು.

● ಪಿ.ಕೆ.ಮಲ್ಲನಗೌಡರ್

# ಹಂಡ್ರೆಡ್ ರುಪೀಸ್ ಕರೆನ್ಸಿ ಹಾಕ್ಸಿ ಮಾತಾಡ್ತೀನಿ!




ಜೆಡಿಎಸ್ ಅಧ್ಯಕ್ಷ ಎ. ಕೃಷ್ಣಪ್ಪ ತೀರಿಕೊಂಡಿದ್ದಾರೆ. ...ಚುನಾವಣೆ ಪ್ರಚಾರ ಮುಗಿಸಿ ನಿರುಮ್ಮಳವಾಗಿ ...ಡ್‌ಮಿಂಟನ್ ಆಡುವಾಗ ಕುಸಿದು ಕೊನೆಯುಸಿರೆಳೆದಿ...ದ್ದರೆ. ನಿಜಕ್ಕೂ ಒಬ್ಬ ಆಟಗಾರ ಮಾತ್ರ ತನ್ನ ಮೈದಾನದಲ್ಲಿ ...ರೋಚಿತವಾಗಿ ತೀರಿಕೊಳ್ಳುವಂತಹ ಸಾವಿದು. ಈ ...ಗೆ ಕಾಂಗ್ರೆಸ್ ಕಾರಣ ಎಂದು ಕಟ್ಟಾ ಕಾಂಗ್ರೆಸ್ಸಿಗರ ...ರೋಪ. ಕಳೆದ ನಲವತ್ತು ವರ್ಷಗಳಿಂದ ಕಾಂಗ್ರೆಸ್ ...ಜಕಾರಣ ಮಾಡಿಕೊಂಡು ಬಂದಿದ್ದ ಕೃಷ್ಣಪ್ಪನವರನ್ನು ...ಷ್ಟ ಹಾಲು ಕೊಡದ ಹಸುವನ್ನು ಕಸಾಯಿಖಾನೆಗೆ ...ಡುವಂತೆ ನೂಕಿತ್ತು. ಇಂತಹ ಸಮಯಕ್ಕಾಗಿ ...ಯುತ್ತಿದ್ದ ದೇವೇಗೌಡರು ನೂರಾರು ಕೋಟಿ ...ತೆಯ ಮತ್ತು ಹಿಂದುಳಿದ ಸಮುದಾಯದ ...ಮುಖ ಕೃಷ್ಣಪ್ಪನವರನ್ನು ಅಪ್ಪಿಕೊಂಡು ಪಾರ್ಟಿ ...ಸಿಡೆಂಟರನ್ನು ಮಾಡಿ ಮಹಾಭಾರತದ ಕೌರವನ ...ಣ್ಮೆಯನ್ನು ಮೆರೆದಿದ್ದರು. ಆದರೇನು, ...ಷ್ಣಪ್ಪನವರಲ್ಲಿ ಮೂಲ ಕಾಂಗ್ರೆಸ್ಸಿನ ಸಿನುಗು ...ಸನೆ ಹಾಗೇ ಇತ್ತು. ಅಪ್ಪ ಮಕ್ಕಳನ್ನ ಮೂಲಾಗ್ರ ಅರಿತಿದ್ದ ಅವರು ಪಾರ್ಟಿ ಕಟ್ಟಲು ...ಹು ಬಿಚ್ಚದವರಾಗಿದ್ದರು. ಪಾರ್ಟಿಯ ...ದುರದೃಷ್ಟವೆಂಬಂತೆ ಒಂದು ಕಾಲದಲ್ಲಿ ಸಂಸ್ಥಾ ಕಾಂಗ್ರೆಸ್ಸಿಗರ ...ತಾಣವಾಗಿದ್ದ ಪಾರ್ಟಿ ಆಫೀಸು ಕಾಂಗ್ರೆಸ್ಸಿಗೆ ಸೇರಿದ್ದೆಂದು ...ಕೋರ್ಟು ತೀರ್ಪು ಬೇರೆ ಎಗರಿತ್ತು. ಅಲ್ಲದೆ ...ಡಿಸೆಂಬರ್‌ವರೆಗೂ ಕಾಲಾವಕಾಶವೂ ಇತ್ತು. ಇಂತಹ ...ಕಾಲದಲ್ಲಿ ಕೃಷ್ಣಪ್ಪನ ಕಣ್ಮರೆ ದೇವೇಗೌಡರ ಕಣ್ಣೀರನ್ನೇ ...ಸಿವೆಯಂತಲ್ಲಾ, ಥೂತ್ತೇರಿ!

* * * *

ಕೃಷ್ಣಪ್ಪನ ಸಾವಿನಿಂದ ಕಂಗಾಲಾದ ಜೆಡಿಎಸ್ ದೈವಭಕ್ತರು ...ಕೊ ಬೆಚ್ಚಿ ಕೂತರಂತಲ್ಲಾ. ಅವರ ಬೆದರು ದನಿಯ ...ಳಿಕೆಯಂತೆ ಜೆಡಿಎಸ್ ಸಾವಿನ ಮನೆಯಾಗಿದೆಯಂತೆ. ...ದರು ಬೆರಳು ಮಡಿಚಿ ಕೊಡುವ ಸಂಖ್ಯೆಯ ಪ್ರಕಾರ ...ರಾಮಯ್ಯನ ಎದುರು ನಿಂತಿದ್ದ ವೀರಭದ್ರಪ್ಪ ...ವಾಸವಾಸಿಗಳಾದರು. ಆನಂತರ ಗುರುಸ್ವಾಮಿ ಕೂಡ ...ಮವಿನ ಪಾದ ಸೇರಿಕೊಂಡರು. ಇನ್ನ ಕುಮಾರಣ್ಣನ ...ತರ ಯಾವ ಕಾರಣಕ್ಕೂ ಯಡಿಯೂರಪ್ಪ ...ಮುಖ್ಯಮಂತ್ರಿಯಾಗಲು ಅವಕಾಶ ಕೊಡುವುದಿಲ್ಲವೆಂದು ...ನದಲ್ಲೇ ಹೇಳಿದ್ದ ಜಯಕುಮಾರ್ ಹೃದಯಾಘಾತಕ್ಕೆ ...ಸ್ತಾದರು. ಆನಂತರ ಪಾರ್ಟಿ ಪ್ರೆಸಿಡೆಂಟ್ ಮಿರಾಜುದ್ದೀನ್ ...ಲ್ "ಅಲ್ಲಾಹೋ ಅಕ್ಬರ್" ಎಂದುಕೊಂಡೇ ಕಬರಸ್ಥಾನ್ ...ದರು. ಇನ್ನ ಗಂಟೆಗಟ್ಟಲೆ ಶಟಲ್ ಆಡುತ್ತಿದ್ದ ...ಟ್ಸ್‌ಮ್ಯಾನ್ ಬಂಗಾರಪ್ಪ ಕೈಕಾಲಿನ ಸ್ವಾಧೀನವನ್ನೇ ...ಮಕೊಂಡು ಕೊನೆಯುಸಿರೆಳೆದರು. ಆನಂತರ ಅವರ ...ಪದವಿಯ ಸರದಿ. ಈಗ ಪಾರ್ಟಿ ಪ್ರೆಸಿಡೆಂಟ್ ಎ. ಕೃಷ್ಣಪ್ಪನ ...ತ್ಯ ಇವೆಲ್ಲವನ್ನು ಮೆಲುಕು ಹಾಕಿ ಹೆದರುತ್ತಿರುವ ಜೆಡಿಎಸ್ ಪಡೆ "ಅದ್ಯಾವ ಬಾಯಿಂದ ಇಬ್ರಾಹಿಂ ಎಂಬ ಶನಿ 'ದೇವೇಗೌಡರಿಗೆ ತಿಥಿ ಊಟದ ಯೋಗವಿದೆಯೇ ಹೊರತು ಮದುವೆ ಅನ್ನವುಂಡ ಅಭ್ಯಾಸವಿಲ್ಲ' ಎಂದನೊ ಅವತ್ತಿನಿಂದ ಜೆಡಿಎಸ್ ಪಾರ್ಟಿಯಲ್ಲಿ ಸರಣಿ ಸಾವು ಸಂಭವಿಸಿವೆ" ಎಂದರಂತಲ್ಲಾ.

ಇದೆಲ್ಲವನ್ನು ಗ್ರಹಿಸಿದ ರೇವಣ್ಣ ಮಂತ್ರಿಸಿದ ನಿಂಬೆಹಣ್ಣು ಸುತ್ತಿಸುತ್ತ "ನಾನು ಮಾತ್ರ ಪಾರ್ಟಿ ಪ್ರೆಸಿಡೆಂಟಾಗಕುಲ್ಲ. ನಮ್ಮಪ್ಪ ಯಾರ್ನಾರ ಮಾಡ್ಲಿ" ಎಂದರಂತಲ್ಲಾ, ಥೂತ್ತೇರಿ!!

* * * *

ಪರಿಶುದ್ಧ ಪ್ರಧಾನಿಯಾದರೂ ಕೂಡ ಬ್ರಹ್ಮಾಂಡ ಭ್ರಷ್ಟತೆಯನ್ನು ನೋಡಿಯೂ ಸುಮ್ಮನಿದ್ದ ಮನಮೋಹನ ಸಿಂಗ್ ಸಾಕಿದವರಿಗೇ ಬೇಡವಾದ ಬೆಕ್ಕಿನಂತಾಗಿದ್ದಾರಂತಲ್ಲಾ. ಮನಮೋಹನ್ ಸಿಂಗ್ ಹಿಂದೂ ಅಲ್ಲದ ಅರೆ ಹಿಂದೂ ಪ್ರಧಾನಿ. ಈ ದೇಶವನ್ನು ಹತ್ತು ವರ್ಷ ಮುನ್ನಡೆಸಿದ್ದಾರೆ. ಅಮೆರಿಕವೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾಗಲೂ ಕೂಡ ಭಾರತ ಅರ್ಥವಂತಿಕೆ ಸುಸ್ಥಿತಿಯಲ್ಲಿರುವಂತೆ ನೋಡಿಕೊಂಡರು. ಈ ಹತ್ತು ವರ್ಷದಲ್ಲಿ ಪಾರ್ಟಿಯ ಯಾರೊಬ್ಬರೂ ಕೂಡ ಅವರ ವಿರುದ್ಧ ಅಪಸ್ವರ ಎತ್ತಲಿಲ್ಲ. ಅವರ ವಿದ್ವತ್ತಿಗೆ ಪ್ರಪಂಚದ ಪ್ರಧಾನಿಗಳೇ ತಲೆಬಾಗಿದರು. ಬರಾಕ್ ಒಬಾಮಾನಂತೂ ಜೊತೆಯಲ್ಲೇ ಮನೆಯಿಂದ ಹೊರಬಂದು ಕಾರಿಗೆ ಹತ್ತಿಸಿ ಒಳಗೆಹೋದರು. ಇಂತಹ ಗೌರವಕ್ಕೆ ಈ ಹಿಂದಿನ ಪ್ರಧಾನಿಗಳಾರೂ ತುತ್ತಾಗಿಲ್ಲ. ಇಷ್ಟೆಲ್ಲಾ ಇರುವ ಸಜ್ಜನ ವ್ಯಕ್ತಿಯನ್ನು ಕಾಂಗೈ ಖೂಳರು ಯಾವ ಚುನಾವಣಾ ಪ್ರಚಾರಕ್ಕೂ ಬಳಸಿಕೊಳ್ಳಲಿಲ್ಲ. ಹೋಗಲಿ, ಪರಿಶುದ್ಧ ಪ್ರಧಾನಿಗೊಂದು ಪ್ರಣಾಮ ಎಂಬ ಹೇಳಿಕೆಯನ್ನೂ ನೀಡಲಿಲ್ಲ.

ಇನ್ನ ಮಾಧ್ಯಮದ ಮೂರ್ಖರು ಹತ್ತು ವರ್ಷ ಈ ದೇಶವನ್ನಾಳಿದ ಪ್ರಧಾನಿಯೊಬ್ಬ ಇದ್ದಾನೊ ಇಲ್ಲವೊ ಆತನನ್ನು ಮಾತನಾಡಿಸಬೇಕೆಂಬ ಪರಿಜ್ಞಾನವೂ ಇಲ್ಲದೆ, ಹೊಟ್ಟೆ ಹೊರೆಯುತ್ತ ಮೋದಿಯನ್ನೆ ಹಾಲಿ ಪ್ರಧಾನಿಯೆಂದು ಬಿಂಬಿಸುತ್ತ ಹೊಗಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಠಾತ್ತನೆ ಕಾಣಿಸಿಕೊಂಡ ಇಂದಿರಾ ಗಾಂಧಿಯ ಮೊಮ್ಮಗಳಾದ ಪ್ರಿಯಾಂಕ "ಮಿಸ್ಟರ್ ಮೋದಿ, ಮಕ್ಕಳಿಗೆ ಪಾಠ ಮಾಡುವಂತೆ ಮಾತನಾಡಬೇಡ. ಇದು ಬಹುದೊಡ್ಡ ಪ್ರಜಾಪ್ರಭುತ್ವದ ದೇಶ ಅನ್ನುವುದು ನಿನ್ನ ತಲೆಯಲ್ಲಿರಲಿ" ಎಂದ ಕೂಡಲೆ ಚೆಡ್ಡಿಗಳು ಬೆಚ್ಚಿ ಕಾಂಗೈಗಳು 'ಅಂತೂ ನಮ್ಮ ಗರ್ಭಗುಡಿಗೊಂದು ಸುಂದರ ಮೂರ್ತಿ ಸಿಗಲಿದೆ' ಎಂಬಂತೆ ಕುಣಿದಾಡಿದವಂತಲ್ಲಾ, ಥೂತ್ತೇರಿ!!!

* * * *

ಚುನಾವಣೆ ಮುಗಿಯುವವರೆಗೂ ಹರಿಯಮುರಿಯ ಜಗಳ ಕಾಯ್ದ ಮಂಡ್ಯ ಜಿಲ್ಲೆ ಚುನಾವಣಾ ಫಲಿತಾಂಶ ಏನಾಗಬಹುದೆಂದು ತಿಳಿಯಲು ಆ ಪ್ರಾಂತ್ಯದ ವಾಟಿಸ್ಸೆಗೆ ಫೋನ್ ಮಾಡಿದರೆ ಹೇಗೆಂದು ಯೋಚಿಸಿ, ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: "ಕ್ಯಂಚಾಲೊ ಮಚ್ಚಾಲೊ ಯಂಗವುಲಾ ನಿನ್ ಕನಸ್‌ಗಳು ಗೋವಿಂದಾ, ಜೇಡ್ರಳ್ಳಿ.....

"ಹಲೋ ಯಾರು?"

"ನಾನು ಯಾಹು ಅಂತ ಪತ್ರಕರ್ತ ವಾಟಿಸ್ಸೆ."

"ಡೈಲಿನೊ? ವೀಕ್ಲಿನೊ?"

"ವೀಕ್ಲಿ, ಗೌರಿ ಲಂಕೇಶ್ ಪತ್ರಿಕೆ."

"ಯಂಗಿದಾರೆ ನಮ್ಮ ಸಿಸ್ಟರು?"

"ಚೆನ್ನಾಗಿದ್ದಾರೆ. ನಿಮಗೆ ಫೋನ್ ಮಾಡಕ್ಕೇಳಿದ್ರು."

"ಹಂಡ್ರೆಸ್ ರುಪೀಸ್ ಕರೆನ್ಸಿ ಹಾಕುಸ್ತಿರಾ?"

"ಓಯೆಸ್, ಈಗ್ಲೆ ಹಾಕುಸ್ತಿನಿ. ಜುಮ್ಮಕ್ಕ ಹ್ಯಂಗಿದಾರೆ?"

"ಚೆನ್ನಾಗ್ಯವುಳೆ. ರಮ್ಯಾನಿಗೆ ಓಟು ಕೇಳಿಕೇಳಿ ಸುಸ್ತಾಗಿ ರೆಸ್ಟ್ ತಗತಾ ಅವುಳೆ ವಂಗೆ ಮರದ ನೆರಳಲ್ಲಿ."

## ಥೂತ್ತೇರಿ

▸ ಯಾಹೂ

"ಯಂಗಿದೆ ಅಲ್ಲಿ?"

"ಏನು?"

"ವಾತಾವರಣ."

"ತುಂಬ ಹೀಟು. ನೆತ್ತಿ ಕೂದಲಲ್ಲಿ ಜಲ ಕಣ್ಣು ಕಾಣಿಸಿಗಂಡು ಬಾಡಿ ವಾಟರೆಲ್ಲಾ ಹೋಗಿ ಡ್ರೈಯಾಗಿದೆ."

"ನಿನ್ನ ಬಾಡಿ ವಾತಾವರಣ ಅಲ್ಲ, ಚುನಾವಣೆ ಫಲಿತಾಂಶದ ಬಗ್ಗೆ ಕೇಳಿದ್ದು."

"ಅದನ್ನ ಮಾತಾಡಬೇಕಾದ್ರೆ ಎಲ್ಲಾರ ಕುಂತಗಬೇಕು ಸಾರ್."

"ಆದ್ರೆ ನಾನು ಬೆಂಗಳೂರಲ್ಲಿದ್ದಿನಿ."

"ಬನ್ನಿ, ಕೇವಲ ಒಂದೂವರೆ ಗಂಟೆ ಜರ್ನಿ. ಇಲ್ಲೇ ಗೇಟಲ್ಲಿ ಕಾಯ್ತಾಯಿರತಿನಿ."

"ಫಸ್ಟು ನ್ಯೂಸ್ ಕೊಡು. ಆಮ್ಯಾಲೆ ಬತ್ತಿನಿ."

"ನ್ಯೂಸ್ ಏನಪ್ಪ ಅಂದ್ರೇ ರಮ್ಯಾ ಟ್ರಬಲ್ಲಲ್ಲವುಳೆ ಅಂತ ನನಿಗೆ ಅನ್ನಸ್ತಾ ಅದೆ. ಯಾಕೆ ಅಂದ್ರೆ ನಮ್ಮ ಮಂಡ್ಯಾದ ಕಾಂಗ್ರೆಸ್‌ನ ಡರ್ಟಿ ಫೆಲೋಸ್ ಚುನಾವಣೆ ಸ್ಟಾರ್ಟಾದಾಗಿಂದ ಅದು ಮುಗಿಯೋವರಿಗೂ ಜಗಳ ಆಡಿದ್ರು."

"ಅಡುನ್ನ ನಾನೂ ನೋಡಿದೆ."

"ಈ ಜಗಳದಲ್ಲಿ ಜೆಡಿಎಸ್ ಕೈವಾಡ ಇತ್ತೊ ಇಲ್ಲವೊ ಗೊತ್ತಿಲ್ಲ, ಸಿಓಡಿ ತನಿಖೆಯಿಂದ ಗೊತ್ತಾಗಬೇಕಷ್ಟೆ. ಆದ್ರೆ ಒಂದು ಇಂಪಾರ್ಟೆಂಟ್ ಮ್ಯಾಟ್ರೇನು ಅಂದ್ರೆ, ನಮ್ಮ ಆದರ್ಶ ದಂಪತಿಗಳಾದ ಶಿವಲಿಂಗಯ್ಯ ಮತ್ತು ಮೀರಾ ಬಿಜೆಪಿ ಪ್ರಸನ್ನಗಳಾಗಿ ಕನಿಷ್ಠ ಒಂದೂವರೆ ಲಕ್ಷ ಓಟು ತಗಂಡ್ರೆ, ಅದು ಯಾರೋಟು, ಕಳೆದ ಬಾರಿ ಯಾರಿಗೋಗಿದ್ದೊ ಅನ್ನೋದು ಪ್ರಶ್ನೆ. ಇಡೀ ಜಿಲ್ಲೆ ಗಾಣಿಗರು ಅಂದ್ರೆ ಆಯಿಲ್ ಪ್ರಸನ್ಸ್ ನಮ್ಮ ಜನಾಂಗದ ಮೋದಿ ಪ್ರಧಾನಿಯಾಯ್ತನೆ ಅಂತ ಬಿಜೆಪಿಗೆ ಓಟು ಮಾಡಿದರಂತೆ. ಒಬ್ಬ ಕನ್ನಡಿಗ ಪ್ರಧಾನಿಯಾಯ್ತನೆ ಅಂತ ನಮ್ಮ ಕಾಳ ದೊಡ್ಡಪ್ಪನ ಕಡೆಯವರು ವಿತೌಟ್ ಕ್ಯಾಶ್ ಓಟು ಮಾಡಿದರಂತೆ. ರಮ್ಯಾ ರೆಬೆಲ್‌ಸ್ಟಾರ್ ಅಂಬರೀಷನ್ನ ನೆಗ್ಲೆಟ್ ಮಾಡಿದ್ಲು ಅಂತ ಅಂಬಿ ಅಭಿಮಾನಿಗಳು ಎಲ್ಲಿಗೆ ಓಡೋದ್ರೊ ಏನೋ? ಅಂತೂ ಮಂಡ್ಯ ಜಿಲ್ಲೆ ರಾಜಕಾರಣ ತಲೆ ಕೆಟ್ಟೋರ ರಾಜಕಾರಣ ಆಯ್ತು ಗುರು. ನಾಳೆ ಬನ್ನಿ ಕಾಯ್ತಾಯಿರತಿನಿ."

"ಥೂತ್ತೇರಿ!!!"

## ...ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ...

2 ◂◂

...ದಲ್ಲಿ ನಡೆಸುತ್ತೇವೆ' ಎಂದು ಈ ಅಧಿಕಾರಿಗಳು ...ತ್ತಾರೆ. ಹಾಗಾಗಿಯೇ ಸರ್ಕಾರದ ಮುಂದೆ ಅವರ ...ಕ ಡಿಮ್ಯಾಂಡ್ ಏನೆಂದರೆ ಬಸ್ ದರವನ್ನು ಏರಿಸಲು ...ಮತಿ ಕೊಡಿ ಎಂದು. ಇಂದಿಗೂ ಬಸ್ ದರ ಏರಿಕೆಯ ...ತಿಯನ್ನು ಸರ್ಕಾರಕ್ಕೆ ತಿಳಿಸಿ, ಅನುಮತಿ ಪಡೆದುಕೊಳ್ಳುವ ...ಮವನ್ನು ಉಳಿಸಿಕೊಂಡಿದ್ದಾರೆ. ತಾನು ಒಂದು ...ಪಾಯಿ ಅನುದಾನವನ್ನೂ ಕೊಡದಿದ್ದ ಮೇಲೆ ಸರ್ಕಾರ ...ಏರಿಕೆಯನ್ನು ಹೇಗೆ ತಾನೇ ತಡೆಯಲು ಸಾಧ್ಯ? ...ನಾವಣಾ ಸಂದರ್ಭವನ್ನು ಹೊರತುಪಡಿಸಿ ಮಿಕ್ಕೆಲ್ಲಾ ...ವರ್ಷಗಳಲ್ಲಿ ಸರ್ಕಾರಗಳು ಅನುಮತಿ ನೀಡುತ್ತದೆ.


...ಪ್ರಯಾಣಿಕರನ್ನು ಹಿಂಡುವುದರ ಜೊತೆಗೆ ಈ ...ಕಾರಿಗಳು ಕಂಡುಕೊಂಡಿರುವ ಇನ್ನೊಂದು ವಿಧಾನ ...ರ್ಮಿಕರನ್ನು ಹಿಂಡುವುದು. ಅವರಿಂದ ಸಾಕಷ್ಟು ಕೆಲಸ ...ಮಕೊಳ್ಳುವ ಜೊತೆಗೆ ವಿವಿಧ ರೀತಿಯ ಕಿರುಕುಳಗಳನ್ನು ...ನೀಡಲಾಗುತ್ತದೆ. ಖಾಸಗಿ ಮ್ಯಾನೇಜ್‌ಮೆಂಟ್‌ಗೂ ಇದಕ್ಕೂ ...ಾವುದೇ ವ್ಯತ್ಯಾಸವಿಲ್ಲವೆಂಬಷ್ಟು ಮಟ್ಟಿಗೆ ಕಾರ್ಮಿಕರಿಗೆ ...ಸಿ ನೀಡಲಾಗುತ್ತದೆ. ಅವರ ಯೂನಿಯನ್‌ನ ಹಕ್ಕುಗಳನ್ನು ...ತ ದಮನಕಾರೀ ಕ್ರಮಗಳ ಮೂಲಕ ಹತ್ತಿಕ್ಕಲಾಗಿದೆ. ...ಒಕ್ಕೆಲೆಯಲ್ಲಿ ಕಳೆದ ವರ್ಷ ಪ್ರತಿಭಟನಾ ಮುಷ್ಕರ ...ದದ್ದು ಎಲ್ಲರಿಗೂ ಗೊತ್ತೇ ಇದೆ.

...ಅಂದರೆ ಸರ್ಕಾರೀ ಅಧಿಕಾರಿಗಳು ಕಂಪೆನಿ ...ಜವಾನರ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ...ಸ್ಪರ್ಧಾಶೀಲತೆಯನ್ನು ತೋರುವಲ್ಲಿಯೂ ಇದು ...ಗುತ್ತಿದೆ. ಅದು ಪ್ರಯಾಣಿಕರನ್ನು ಗ್ರಾಹಕರೆಂದು ...ಪರಿಗಣಿಸುವಲ್ಲಿ ಮತ್ತು ಕಾರ್ಮಿಕರನ್ನು ಬಂಡವಾಳಶಾಹಿ ... ಯಂತ್ರಗಳಾಗಿ ಪರಿಗಣಿಸಿರುವುದರಲ್ಲಿ ಎರಡರಲ್ಲೂ ವ್ಯಕ್ತವಾಗುತ್ತದೆ. ಇದೊಂದು ಸರ್ಕಾರೀ ಕಂಪೆನಿಯಾದ್ದರಿಂದ ಪ್ರಯಾಣಿಕ ಸ್ನೇಹಿ ಮತ್ತು ಕಾರ್ಮಿಕ ಸ್ನೇಹಿ ವಾತಾವರಣ ಮತ್ತು ನೀತಿ ಇರಬೇಕೆನ್ನುವುದು ಅವರ ಆದ್ಯತೆಯಾಗಿಲ್ಲ, ಬದಲಿಗೆ ಗ್ರಾಹಕ ಸ್ನೇಹಿಯಾಗಿರುವುದಕ್ಕೆ ಒತ್ತಿದೆ.

ಇಂದು ನಮ್ಮ ದೇಶದ ಸರ್ಕಾರವೇ ಒಂದು ಕಂಪೆನಿಯಾಗಿ ಬದಲಾಗುತ್ತಿರುವುದಕ್ಕೆ ಇದೊಂದು ನಿದರ್ಶನವಾಗಿದೆ. ಆಂಧ್ರದ ಮುಖ್ಯಮಂತ್ರಿಯಾಗಿದ್ದ ಚಂದ್ರಬಾಬು ನಾಯ್ಡು ತನ್ನನ್ನು ಆಂಧ್ರ ಸರ್ಕಾರದ ಸಿಇಒ ಎಂದು ಕರೆದುಕೊಳ್ಳಲು ನಾಚಿಕೆಯನ್ನೇ ಪಟ್ಟುಕೊಳ್ಳಲಿಲ್ಲ. ನಮ್ಮ ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳೂ ಇದೇ ಮನೋಭಾವದವರಾಗಿದ್ದಾರೆ. ಎಲ್ಲರೂ ಕಂಪೆನಿ ಮ್ಯಾನೇಜರ್‌ಗಳು. ಮೂಲಭೂತವಾಗಿ ಈ ಮನಸ್ಥಿತಿಯ ಮೇಲೆ ದಾಳಿ ನಡೆಸದೇ ನಮ್ಮ ಜನಸಾಮಾನ್ಯರ ಮೇಲೆ ಏರುತ್ತಲಿರುವ ಬಸ್ ದರ ಏರಿಕೆಯನ್ನು ತಡೆಗಟ್ಟಲು ಅಸಾಧ್ಯವಾಗಿದೆ. ಬಸ್ ದರ ಏರಿಕೆಯಾದಾಗ ಒಂದೆರಡು ದಿನ ಬಯ್ದುಕೊಂಡು ನಂತರ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಿದ್ದ ಪ್ರಯಾಣಿಕರಿಗೂ ಈಗ ಕಷ್ಟವಾಗುತ್ತಿದೆ. ಏಕೆಂದರೆ ಕಂಪೆನಿ ಖಾಸಗಿಯದ್ದಾದ ಮೇಲೆ ಅದರ ಉದ್ದೇಶ ಲಾಭ ಮಾಡುವುದು ಮಾತ್ರವಾಗಿರುತ್ತದೆ. ಬಂಡವಾಳ ಹೂಡಿ ಲಾಭ ಮಾಡುವುದು ಬಂಡವಾಳಶಾಹಿಯ ಮೂಲಗುಣವಾಗಿದೆ. ಪ್ರಜಾಪ್ರಭುತ್ವ ಸರ್ಕಾರವೂ ಅದೇರೀತಿ ಆಗಿಬಿಟ್ಟರೆ, ಜನತೆ ಗ್ರಾಹಕರಾಗಿಬಿಡುತ್ತಾರೆ. ಲೋಕಸೇವಾ ಆಯೋಗದಿಂದ ನೇಮಕಗೊಳ್ಳುವ ಅಧಿಕಾರಿಗಳು ಎಂಬಿಎ ಮಾಡಿರುವ ಮ್ಯಾನೇಜ್‌ಮೆಂಟ್ ಸಿಬ್ಬಂದಿಯಾಗುತ್ತಾರೆ.

ಸಿದ್ದರಾಮಯ್ಯನವರ ಸರ್ಕಾರಕ್ಕೆ ಈ ಪ್ರಶ್ನೆಗಳನ್ನು ಕೇಳುವ ಮೂಲಕ ನಿಜವಾದ ಪ್ರಜಾಪ್ರಭುತ್ವದ ನಾಗರಿಕ ಹಕ್ಕು ಚಲಾಯಿಸಬೇಕಿದೆ.

## ಭಟ್ ಮೇಲೆ ಹಲ್ಲೆ ಖಂಡನೀಯ



ದಕ್ಷಿಣ ಕನ್ನಡ ಜಿಲ್ಲಾ ಕೋಮು ಸೌಹಾರ್ದ ವೇದಿಕೆಯ ಅಧ್ಯಕ್ಷರಾಗಿರುವ ಶ್ರೀ ಸುರೇಶ್ ಭಟ್ ಬಾಕ್ರಬೈಲ್ ಅವರ ಮೇಲೆ ಕಿಡಿಗೇಡಿಗಳು ಆಕ್ರಮಣ ಮಾಡಿದ್ದಾರೆ. ಆ ಮೂಲಕ ಭಾರತದ ಪ್ರಜಾಸತ್ತೆಗೆ ಅವಮಾನ ಮಾಡಿದ್ದಾರೆ ಮತ್ತು ಭಾರತದ ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ.

ಶ್ರೀ ಸುರೇಶ ಭಟ್ ಅವರು ತಮ್ಮ ಮಾತು ಮತ್ತು ಬರಹಗಳ ಮೂಲಕ, ಭಾರತೀಯ ಸಂವಿಧಾನ ಎತ್ತಿಹಿಡಿದಿರುವ, ಜಾತ್ಯತೀತತೆ ಹಾಗೂ ಬಹುರೂಪೀ ಸಂಸ್ಕೃತಿಯನ್ನು ಕಾಪಾಡಲು ನಿರಂತರವಾಗಿ ಶ್ರಮಿಸುತ್ತಲೇ ಬಂದಿದ್ದಾರೆ. ಮತ ಧರ್ಮಗಳು ಪ್ರಚುರಪಡಿಸಿಕೊಂಡು ಬಂದಿರುವ ಅಮಾನವೀಯತೆಗಳ ವಿರುದ್ಧ ಅವರು ಜನರಿಗೆ ತಿಳಿವಳಿಕೆ ನೀಡುತ್ತಾ ಬಂದಿದ್ದಾರೆ. ಕೋಮುಶಕ್ತಿಗಳು ಉಂಟು ಮಾಡುತ್ತಿರುವ ಅನಾಹುತಗಳನ್ನು ಅವರು ದಿಟ್ಟವಾಗಿ ಬೆಳಕಿಗೆ ತಂದಿದ್ದಾರೆ. ಭಾರತೀಯ ಮಹಿಳೆಯರ ಘನತೆಯನ್ನು ಅವರು ಸದಾ ಎತ್ತಿಹಿಡಿದಿದ್ದಾರೆ. ಅವರ ವಿಚಾರಧಾರೆಯು ಒಪ್ಪಿತವಾಗದೇ ಇದ್ದರೆ, ಅದರ ವಿರೋಧವಾಗಿ ಬರೆಯಬಹುದು, ಬಹಿರಂಗ ಚರ್ಚೆಗೆ ಅವರನ್ನು ಕರೆಯಬಹುದು. ಇದಾವುದನ್ನೂ ನಡೆಸದೆ ಈ ರೀತಿಯಲ್ಲಿ ಹಲ್ಲೆ ಮಾಡಿ, ಪ್ರಾಣಭಯ ಒಡ್ಡಿರುವುದು ನಮ್ಮ ಸಮಾಜ ಹಿಡಿಯುತ್ತಿರುವ ಫ್ಯಾಸಿಸ್ಟ್ ಹಾದಿಗೆ ಒಂದು ಸಂಕೇತವಾದಂತೆ, ಹಲ್ಲೆಕಾರರ ಬೌದ್ಧಿಕ ದಾರಿದ್ರ್ಯವನ್ನೂ ಸೂಚಿಸುತ್ತದೆ.

ಬರಹಗಾರ, ಚಿಂತಕ, ಸರಳ ಸಜ್ಜನಿಕೆಯ ಶ್ರೀ ಸುರೇಶ್ ಭಟ್ ಅವರ ಮೇಲೆ ನಡೆದ ಹಲ್ಲೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ನಾವು ಸರಕಾರವನ್ನು ಕೋರಿಕೊಳ್ಳುತ್ತೇವೆ.

ಅಮೃತ ಸೋಮೇಶ್ವರ, ಸಾರಾ ಅಬೂಬಕ್ಕರ್, ವೈದೇಹಿ, ಪುರುಷೋತ್ತಮ ಬಿಳಿಮಲೆ, ಎಚ್.ಎಸ್.ಅನುಪಮಾ, ದು ಸರಸ್ವತಿ, ಸಿ.ಎಚ್. ಕೃಷ್ಣಶಾಸ್ತ್ರಿ ಬಾಳಿಲ, ಸಬಿಹಾ ಭೂಮಿಗೌಡ, ಮರ್ಲಿನ್ ಮಾರ್ಟಿಸ್, ಜ್ಯೋತಿ ಗುರುಪ್ರಸಾದ್, ಕೆ.ವಿ.ಶರ್ಮ ಬಾಳಿಲ, ವಿದ್ಯಾ ಕಾರ್ಕಳ, ಸದಾಶಿವ ಮಾಸ್ತರ್, ಸಂಕೊಳಿಗೆ, ಬಿ.ಎಂ.ರೋಹಿಣಿ, ರಮೇಶ್ ಕೋಟೆ, ಭೂಮಿಗೌಡ, ಜ್ಯೋತಿ ಚೇಳ್ಯಾರು, ಶ್ರೀನಿವಾಸ ಕಾರ್ಕಳ, ಗುಲಾಬಿ ಬಿಳಿಮಲೆ




# ಬೌದ್ಧಿಕ ದಿವಾಳಿತನಕ್ಕೆ ಕೊನೆ ಇಲ್ಲವೆ?

ಜನನಾಯಕ ಕರ್ಪೂರಿ ಠಾಕೂರ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಿದ್ದುದು ಬಿಹಾರದ ಕೋಮುವಾದಿ ಶಕ್ತಿಗಳ ಸಹನೆಯನ್ನು ಕೆಣಕತೊಡಗಿತ್ತೇನೋ. ಅವರ ಆಡಳಿತಕ್ಕೆ ಕೆಟ್ಟ ಹೆಸರು ತರುವುದಕ್ಕೆಂತಲೇ ಜಮಶೇಡಪುರದಲ್ಲಿ ಕೋಮು ಭಾವನೆಗಳನ್ನು ಕೆರಳಿಸುವುದರಲ್ಲಿ ಕೋಮುವಾದಿಗಳು ಪೈಪೋಟಿಗಿಳಿದಂತಿತ್ತು. ಪರಿಸ್ಥಿತಿ ಬಿಗಡಾಯಿಸತೊಡಗಿತ್ತು. ಯಾವಾಗಲಾದರೂ ಕೋಮುಗಲಭೆ ಭುಗಿಲೇಳಬಹುದಿತ್ತು. ಅಂಥ ಸಂದರ್ಭದಲ್ಲಿ ಉರ್ದು ಸಾಹಿತಿಯೊಬ್ಬ ಕೋಮುಗಲಭೆ ತಡೆಯಲು ಮುಂದಾದರು. ಹಿಂಸಾಚಾರವನ್ನು ಅಹಿಂಸೆಯ ಅಸ್ತ್ರದಿಂದಲೇ ಬಗ್ಗುಬಡಿಯಬೇಕೆಂದಿದ್ದ ಆ ಗಾಂಧಿವಾದಿ ಪ್ರೊ. ಜಕಿ ಅನ್ವರ್ ಪಣ ತೊಟ್ಟಿದ್ದರೇನೋ.

ನಗರದ ಗಾಂಧಿಚೌಕಿನಲ್ಲಿ ಆಮರಣ ಉಪವಾಸ ಕೈಗೊಳ್ಳಲು ಆ ಮೇಸ್ಟ್ರು ತೀರ್ಮಾನಿಸಿದರು. ಆದರೆ ನಗರದಲ್ಲೆಲ್ಲ "ಮುಸಲ್ಮಾನರಿಗಾಗಿ ಪಾಕಿಸ್ತಾನ ನಿರ್ಮಾಣ ಆಗಿದ್ದು ನೀವು ಆ ದೇಶಕ್ಕೆ ಹೊರಟುಹೋಗಬೇಕು ಇಲ್ಲವೆ ನಾವು ನಿಮ್ಮನ್ನು ದಫನ್ ಮಾಡುತ್ತೇವೆ" ಎನ್ನುವ ಬೆದರಿಕೆಯ ಮಾತುಗಳು ಘೋರ ಹತ್ಯಾಕಾಂಡಕ್ಕೆ ಮುನ್ನುಡಿಯಾಗಿ ಹೊರಹೊಮ್ಮಿದವು. ನಿರೀಕ್ಷೆಯಂತೆ ಕೋಮುಗಲಭೆ ಭುಗಿಲೆದ್ದಿತು.

ಅಮಾಯಕರ ಕಗ್ಗೊಲೆಯ ನಂತರ ಕೋಮುವಾದಿ ಶಕ್ತಿಗಳು ಜಯಭೇರಿ ಬಾರಿಸಿದವು. ಆದರೆ ಆ ಕಟುಕರ ಮನಪರಿವರ್ತನೆಗೆ ಮುಂದಾಗಿದ್ದ ಸಾಹಿತಿ ಹಾಡುಹಗಲೇ ಹೆಣವಾಗಿ ಮಲಗಿದ್ದರು. ಸಮೂಹ ಸನ್ನಿ ತಣ್ಣಗಾಗುತ್ತಿದ್ದಂತೆ 'ಪ್ರೀತಿ' ಶೀರ್ಷಿಕೆಯ ಆ ಸಾಹಿತಿಯ ಕತೆಯೊಂದು ಪ್ರಸಿದ್ಧ ಉರ್ದು ಪತ್ರಿಕೆಯಲ್ಲಿ ಪ್ರಕಟವಾಯಿತು. ಕತೆ ಓದಿದ ಮಾನವತಾವಾದಿಗಳು ಕತೆಗಾರನ ದಾರುಣ ಕೊಲೆಗಾಗಿ ಮಮ್ಮಲ ಮರುಗಿದರು.

**'Riot After Riot'** ಪುಸ್ತಕ ಮನುಷ್ಯ ಪ್ರೀತಿಗೆ ದ್ಯೋತಕವಾಗಿದ್ದ ಜಮಶೇಡಪುರದ ಜಕಿ ಅನ್ವರ ಅವರ ಆ ಪ್ರಸಂಗವನ್ನು ಜಗತ್ತಿಗೆ ಸಾರಿ ಸಾರಿ ಹೇಳುತ್ತಿದೆ. ಆದರೆ ಪುಸ್ತಕದ ಲೇಖಕನೇ ಇಂದು ಭಾರತೀಯ ಜನತಾ ಪಕ್ಷದ ವಕ್ತಾರರಾಗಿದ್ದಾರೆ. ಪತ್ರಕರ್ತ ಹಾಗೂ ಪ್ರಖರ ಬುದ್ಧಿಜೀವಿ ಎನಿಸಿ ಕೊಂಡಿದ್ದ ಆ ಪುಸ್ತಕದ ಲೇಖಕ ಎಂ.ಜೆ.ಅಕಬರ್ ಅವರು ಭಾರತದ ಮುಸಲ್ಮಾನರನ್ನು ಪಾಕಿಸ್ತಾನಕ್ಕೆ ಅಟ್ಟಬೇಕೆನ್ನುತ್ತಿರುವ ಗಿರಿರಾಜ ಸಿಂಗ್ ಅವರ ಪಾಳೆಯ ಸೇರಿದ್ದು ನಮ್ಮ ಬುದ್ಧಿಜೀವಿಗಳು ಹಾಗೂ ಪತ್ರಕರ್ತರ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾಗಿದ್ದಾರೆ.




* * *

ಪ್ರೊ. ಜಕಿ ಅನ್ವರ್ ಅವರನ್ನು ಕೊಂದವರನ್ನು ಪತ್ತೆ ಹಚ್ಚುವುದು ಇಂದಿಗೂ ಸಾಧ್ಯವಾಗಿಲ್ಲ. ಆದರೆ ಕೋಮುವಾದಿಗಳ ಕ್ರೌರ್ಯಕ್ಕಿಂತ ಬುದ್ಧಿಜೀವಿಗಳ ಹೊಣೆಗೇಡಿತನ ತುಂಬ ಅಪಾಯಕಾರಿ ಎನ್ನುವುದಕ್ಕಾಗಿ ಜಕಿ ಅನ್ವರ್ ಅವರ ಪ್ರಸಂಗವನ್ನು ನೆನಪಿಸಿಕೊಳ್ಳಬೇಕಾಗಿದೆ.

ಪ್ರೊ. ಜಕಿ ಅನ್ವರ್ ಅವರು ಅಂದಿನ ಅತ್ಯಂತ ಜನಪ್ರಿಯ ಉರ್ದು ಪತ್ರಿ... 'ಬೀಸವೀಂ ಸದಿ'ಯ ಸಂಪಾದಕರಿಗೆ ಬರೆದ ಪತ್ರ ಹಾಗೂ ಪತ್ರಿಕೆಯ ಮೆ... 1979ರ ಸಂಚಿಕೆಯಲ್ಲಿ ಪ್ರಕಟವಾದ ಅವರ ಕತೆ ಇಲ್ಲಿದೆ.

ಪ್ರೊ. ಜಕಿ ಅನ್ವರ್

ಗಾಂಧಿನಗರ, ಮಾಂಗು

ಜಮಶೇಡಪುರ-831012

ಪ್ರಿಯ ನಯ್ಯರ್ ಸಾಹೇಬರಿಗೆ

ಸಲಾಂ ಮತ್ತು ಒಲವು.

ತಮ್ಮ ಮನವಿ ಪತ್ರ ತಲುಪಿತು. ತಾವು ಆ ಮೂಲಕ 'ಕಥಾ ವಿಶೇಷಾಂಕ'ದಲ್... ಪಾಲ್ಗೊಳ್ಳಬೇಕೆಂದು ಕೇಳಿಕೊಂಡಿದ್ದಿರಿ. ನನ್ನ ಕಾಯಿಲೆ ಮತ್ತು ಒಂದಷ್ಟು ಕೆಲಸದ... ಒತ್ತಡದಿಂದಾಗಿ ವಿಶೇಷಾಂಕಕ್ಕೆ ಸಮಯಕ್ಕೆ ಸರಿಯಾಗಿ ಏನನ್ನೂ ಕಳಿಸಲಾಗಲಿಲ್ಲ... ಅದಕ್ಕಾಗಿ ವಿಷಾದಿಸುತ್ತೇನೆ. ತುಂಬ ವಿಳಂಬವಾಗಿ ಬಿಟ್ಟಿತೇನೋ. ಅದೇನೆ... ಇರಲಿ 'ಪ್ರೀತಿ' ಶೀರ್ಷಿಕೆಯ ಕತೆ ಕಳಿಸುತ್ತಿದ್ದೇನೆ.

ತಮಗೆ ಮತ್ತು ಓದುಗರಿಗೆ ಕತೆ ಇಷ್ಟವಾಗಬಹುದೆಂದು ಆಶಿಸುತ್ತೇನೆ.

ತಾವು ಕ್ಷೇಮವೆಂದು ಭಾವಿಸುತ್ತೇನೆ.

ಸಲಾಂ.

ತಮ್ಮ

ಜಕಿ ಅನ್ವರ್

* * *

# ಪ್ರೀತಿ

ತನ್ನ ಗಂಡನ ಸಾವಿನ ನಂತರ ಆತ್ಮೀಯರೆನ್ನುವವರು ಇಲ್ಲಿ ಯಾರೂ ಇಲ್ಲ ಎನ್ನುವ ಅನ್ನಿಸಿಕೆ ಬೇಗಂ ಅಲ್ತಾಫ್‌ರನ್ನು ಕಾಡಲಾರಂಭಿಸಿತು. ಮನೆಯಲ್ಲೇ ಆಗಲಿ ಓಣಿಯಲ್ಲೇ ಆಗಲಿ ತನ್ನವರೆನ್ನುವವರು ಯಾರೂ ಇಲ್ಲ. ಈ ನಗರದಲ್ಲಿ ಅಷ್ಟೇ ಏಕೆ ಈ ದೇಶದಲ್ಲೇ ತನ್ನವರಿಲ್ಲ ಎಂದು ಅವರಿಗೆ ಅನ್ನಿಸತೊಡಗಿತು. ಅವರು ತೀವ್ರ ಹತಾಶೆಯಿಂದ ತತ್ತರಿಸಿಹೋಗಿದ್ದರು. ಕಾರಣ ಅಲ್ತಾಫ್ ಸಾಹೇಬರ ಸಾವಿನ ನಂತರದ ನಾಲ್ಕು ತಿಂಗಳ ಅವಧಿಯಲ್ಲಿ ನಗರದಿಂದ ಮತ್ತು ನಗರದ ಹೊರಗಿನಿಂದ ಬಂದುಹೋಗುತ್ತಿದ್ದ ನೆಂಟರು ಸಂಬಂಧದ ಮುಖವಾಡ ಧರಿಸಿದ್ದಾರೇನೋ ಎಂದು ಅವರಿಗೆ ಎನ್ನಿಸತೊಡಗಿತು. ಯಾರಿಂದಲೂ ತನಗೆ ಪ್ರಯೋಜನವಿಲ್ಲ ಎನ್ನುವಂಥ ಪರಿಸ್ಥಿತಿ ಅವಳದಾಗಿತ್ತು. ವಾಸ್ತವದಲ್ಲಿ ಎಲ್ಲರೂ ಎರಡು ಮುಖಗಳನ್ನು ಬೇಕೆಂತಲೇ ಅಲಕ್ಷಿಸಿದಂತಿತ್ತು. ಅವೆರಡೂ ಮುಖಗಳು ಪರಕೀಯವಾಗಿದ್ದವು. ಆದ್ದರಿಂದ ಅವು ಮುಖವಾಡ ಧರಿಸಿರಲಿಲ್ಲ.

ಆ ಮುಖಗಳಲ್ಲೊಂದು ಅಲ್ತಾಫ್ ಸಾಹೇಬರೊಂದಿಗೆ ಕೆಲಸ ಮಾಡುತ್ತಿದ್ದ ಮುನ್ಶಿ ಹರಬನ್ಸ್ ಲಾಲ್ ಅವರದು. ಇನ್ನೊಂದು ಅಲ್ತಾಫ್ ಸಾಹೇಬರ ನೆರೆಮನೆಯ ಕಲಾವಿದ ಫಿರೋಜ್‌ನದು.

ಅಲ್ತಾಫ್ ಸಾಹೇಬರ ದೀರ್ಘ ಕಾಲಿಕ ಚಿಕಿತ್ಸೆ ಹೇಗೆ ನಡೆಯುತ್ತಿದೆ ಎನ್ನುವುದಾಗಲಿ ಡಾಕ್ಟರ್‌ರ ಬಿಲ್ ಹೇಗೆ ಸಂದಾಯವಾಗುತ್ತಿದೆ ಎನ್ನುವುದಾಗಲಿ ಬೇಗಂ ಅಲ್ತಾಫ್‌ರನ್ನು ಕಾಡದಂತೆ ಮುನ್ಶಿ ಹರಬನ್ಸ್ ಲಾಲ್ ನೋಡಿಕೊಂಡಿದ್ದರಿಂದ ತಾನಾಯಿತು ತನ್ನ ಮನೆಗೆಲಸವಾಯಿತು ಎಂದು ಅವರು ನಿಶ್ಚಿಂತವಾಗಿದ್ದರು.

ಫಿರೋಜ್ ತನ್ನ ಕೆಲಸಕಾರ್ಯವನ್ನೆಲ್ಲ ಬಿಟ್ಟು ಹಗಲೂರಾತ್ರಿ ಎನ್ನದೆ ಅಲ್ತಾಫ್ ಸಾಹೇಬರ ಶುಶ್ರೂಷೆಯಲ್ಲಿ ತೊಡಗಿರುತ್ತಿದ್ದ.

ನಿರಾಶೆಯ ದಟ್ಟಿರುಳಿನಲ್ಲೂ ಈ ಎರಡು ಉಜ್ವಲ ಮುಖಗಳು ಕೂಡ ಬೇಗಂ ಅಲ್ತಾಫ್‌ಗೆ ಕಾಣದಾದವು. ಅವರು ತಮ್ಮ ಮಗ ಸಲಾಮ್‌ನೊಂದಿಗೆ ಪಾಕಿಸ್ತಾನಕ್ಕೆ ಹೊರಟುಹೋಗುವ ತೀರ್ಮಾನ ಮಾಡಿದ್ದರು.

ಹಿರಿಯ ಮಗನಂತೂ ಈ ಮೊದಲು ಎಲ್ಲರೂ ಬರಬೇಕೆಂದು ಅದೆಷ್ಟೋ ಸಲ ಕೇಳಿಕೊಂಡಿದ್ದ. ಆದರೆ ಅಲ್ತಾಫ್ ಸಾಹೇಬರ ಮಗಳು ಏನೇ ಆದರೂ ಪಾಕಿಸ್ತಾ... ಹೋಗುವುದಿಲ್ಲ ಎನ್ನುತ್ತಿದ್ದಳು. ಪಾಕಿಸ್ತಾನಕ್ಕೆ ಹೊರಡು... ತಯಾರಿ ನಡೆಯಿತೆಂದರೆ ಅವಳು ಅಳು... ಕೂತುಬಿಡುತ್ತಿದ್ದಳು. ಸಲಾಮ್‌ನ ಹೆಂಡತಿ ಒಂದು ವ... ಭಾರತದಲ್ಲಿದ್ದು ಹೊರಡಲು ಪೂರ್ಣ ತಯಾ... ಮಾಡಿಕೊಂಡಾಗ ಎಲ್ಲರೂ ಕನಿಷ್ಠ ನಾಲ್ಕೈದು ತಿಂ... ಮಟ್ಟಿಗೆ ಹೊರಟೇಬಿಡುವುದೆಂದು ತೀರ್ಮಾನವಾಯಿತ... ಆಗ ಸಾಜಿದಾಳ ಸ್ಥಿತಿ ಎಷ್ಟು ಶೋಚನೀಯವಾಯಿತೆಂದ... ಒತ್ತಾಯದಿಂದ ಅವಳನ್ನು ಪಾಕಿಸ್ತಾನಕ್ಕೆ ಕರೆದೊಯ್ದರೆ ಅ... ಸ್ವಾಸ್ಥ ಹದಗೆಡಬಲ್ಲದೆಂದು ಡಾಕ್ಟರ್ ಅಭಿಪ್ರಾಯಪಟ್ಟ... ಹಾಗಾಗಿ ಈ ಸಲವೂ ಸಲಾಮ್‌ನ ಹೆಂಡತಿ ಹೊರತ... ಯಾರಿಗೂ ಹೋಗಲಾಗಲಿಲ್ಲ.

ಅಲ್ತಾಫ್ ಸಾಹೇಬರ ನಿಧನಾನಂತರ ಬೇಗಂ ಅಲ್ತಾ... ಸ್ಪಷ್ಟವಾದ ಶಬ್ದಗಳಲ್ಲಿ ಆಜ್ಞೆ ಮಾಡುವವರಂತೆ ತಾ... ಹಾಗೂ ತನ್ನ ಕಿರಿಯ ಮಗ ಶೌಕತ್ ಪಾಕಿಸ್ತಾ... ಹೊರಟಿದ್ದು ಸಾಜಿದಾ ಕೂಡ ಹೊರಡಬೇಕೆಂದು ಅವ... ತಾಕೀತು ಮಾಡಿದರು.

ಬೇಗಂ ಅಲ್ತಾಫ್ ಆ ತೀರ್ಮಾನ ಕೈಗೊಂಡ... ಸಾಜಿದಾ ತುಂಬ ಅತ್ತಿದ್ದಳು. ಬೇಗಂ ಅಲ್ತಾಫ್ ಮ... ಹರಬನ್ಸ್ ಲಾಲ್ ಅವರೊಂದಿಗೆ ತಮ್ಮ ಮನೆ ಮಾರು... ಕುರಿತು ಸಮಾಲೋಚನೆ ನಡೆಸಿದಾಗ ಅತ್ತ... ಪಾಸ್‌ಪೋರ್ಟ್ ಸಲುವಾಗಿ ಫೋಟೊ ತೆಗೆಸಿಕೊಳ್ಳ... ಸ್ಟುಡಿಯೊಗೆ ಹೊರಟು ನಿಂತಾಗಲೂ ಅವಳ ಅಳು... ನಿಲ್ಲಲಿಲ್ಲ. ಅವಳು ಅದೆಷ್ಟು ಅತ್ತಿದ್ದಳೆಂದರೆ ಅವಳ ಫೋ... ಬಂದಾಗ ಅವಳ ಮುಖ ಊದಿಕೊಂಡಿತ್ತು. ಆ ಫೋ... ಅವಳ ಮುಖವನ್ನೇ ಹೋಲುತ್ತಿರಲಿಲ್ಲವೆಂದು ಬೇ... ಅಲ್ತಾಫ್ ಸಿಡಿಮಿಡಿಗೊಂಡರು. ಸಂಬಂಧಪಟ್ಟ ಅಧಿಕಾರಿ... ಫೋಟೊ ಅವಳದಲ್ಲವೆಂದರೆ ಏನು ಮಾಡುವುದೆಂ... ಅವರು ಯೋಚಿಸಲಾರಂಭಿಸಿದರು. ಅಷ್ಟೊತ್ತಿಗೆ ಸಾಜಿದಾ... 'ಮೂಡ್' ಬಂದಂತಿತ್ತು. ಅವಳು ಗಂಭೀರವಾಗಿ... "ಹೆದರಬೇಡ ಅಮ್ಮಿ, ನನ್ನ ಫೋಟೊ ನನ್ನ ಮ... ಹೋಲುವಂಥ ಸ್ಥಿತಿ ಬಂದರೂ ನಾನು ಅಳುತ್ತ... ಇರ್ತೀನಿ" ಎಂದಳು. ಹಾಸ್ಯಭರಿತ ಉತ್ತರ ನೀಡಿದ ಮ... ಅವಳು ನಿಟ್ಟುಸಿರು ಬಿಟ್ಟಳು. ಇನ್ನು ಕಣ್ಣೀರ ಜೊತ... ಸಂಬಂಧ ಜೀವನಪರ್ಯಂತ ಅಬಾಧಿತವ... ಮುಂದುವರಿಯಲಿದೆ ಎಂದು ತನ್ನಷ್ಟಕ್ಕೇ ಅಂದುಕೊಂ...

ಬೇಗಂ ಅಲ್ತಾಫ್ ಮನೆ ಮಾರಿ ಪಾಕಿಸ್ತಾನಕ್ಕೆ ಹೋಗುವುದು ಮುನ್ನಿ ...ನ್ಸ್ ಲಾಲ್‌ಗೆ ಇಷ್ಟವಾಗಲಿಲ್ಲ. ನಾಳೆ ಏನಾಗುವುದೋ ಯಾರು ಬಲ್ಲರು? ...ಪ ವೇಳೆ ಬೇಗಂ ಅಲ್ತಾಫ್ ಪಾಕಿಸ್ತಾನದಿಂದ ವಾಪಸ್ ಬರಬೇಕಾದ ಸ್ಥಿತಿ ...ಣವಾದರೆ ತಲೆ ಮೇಲೊಂದು ಸೂರು ಬೇಡವೆ? ಇದು ಮುನ್ನಿ ... ಮುಂದಾಲೋಚನೆಯಾಗಿತ್ತು. ಬೇಗಂ ಅಲ್ತಾಫ್ ಎಲ್ಲ ಲೆಕ್ಕ ಚುಕ್ತಾ ... ಬಿಡುವುದಾಗಿ ಹಠ ಹಿಡಿದಿದ್ದರು. ತುಂಬ ಸಮಯದವರೆಗೆ ಚರ್ಚೆ ...ಯಿತು. ಕಡೆಗೆ ಮುನ್ನಿ ಅವರ ಕಣ್ಣು ತೇವಗೊಂಡವು. "ಸರಿ ಭಾಭೀಜಿ, ... ಇಷ್ಟ ಬಂದಂತೆ ಮಾಡಿರಿ. ನಿಮಗೆ ಬುದ್ಧಿ ಹೇಳಲು ನಾನ್ಯಾರು? ...ಫ್ ಸತ್ತ ಮೇಲೆ ನನ್ನದನ್ನುವುದನ್ನೆಲ್ಲ ಕಳೆಕೊಂಡೆ ಅಂದಕೊಳ್ತೀನಿ. ಆಯಿತು ...ನಿ" ಎಂದು ಮುನ್ನಿ ಹೊರಟೇಬಿಟ್ಟರು.

...ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಹಠಾತ್ತನೇ ಪರದೆಯಾಚೆ ಬಂದ ... ಅಲ್ತಾಫ್‌ಗೆ ಬುರ್ಖಾದ ಪರಿವೆ ಕೂಡ ಇದ್ದಿರಲಿಲ್ಲವೇನೋ? ಮುನ್ನಿ ... ದಾರಿಗೆ ಅಡ್ಡವಾಗಿ ನಿಂತು ಬಿಕ್ಕುತ್ತಲೇ "ಮುನ್ನೀಜಿ ನೀವು ಬಯಸಿದಂತೇ ... ಮನೆ ಮಾರುವುದು ಬೇಡವಾದರೆ ನೀವೇ ಒತ್ತೆ ಇಟ್ಟುಕೊಳ್ಳಿರಿ" ...ರು.

ಮುನ್ನಿ ಎರಡು ಭವ್ಯ ಮನೆಗಳನ್ನು ಹೊಂದಿದ್ದರು. ಅವರಿಗೆ ಮನೆಯ ...ಕತೆಯೇ ಇದ್ದಿರಲಿಲ್ಲ, ಬೇಗಂ ಅಲ್ತಾಫ್‌ರ ಮನೆಯಿಂದ ಲಾಭ ...ಕೊಳ್ಳುವಂಥ ಕ್ಷುಲ್ಲಕ ವ್ಯಕ್ತಿ ಅವರಾಗಿರಲಿಲ್ಲ. ಬೇರೆಯವರ ಮೇಲೆ ...ಗೆ ವಿಶ್ವಾಸವಿರಲಿಲ್ಲ. ಅವರೇ ದೊಡ್ಡ ಮೊತ್ತ ನೀಡಿ ಮನೆಯನ್ನು ಒತ್ತೆ ...ಕೊಂಡರು.

ಮನೆಯ ಸಾಮಾನುಗಳ ಮಾರಾಟ ನಡೆದ ದಿನ ಸಾಜಿದಾ ಗೊಳೊ... ಅತ್ತಳು. ಭಾರತ ಬಿಡುವ ದಿನವಂತೂ ಅವಳು ಅತ್ತೂ ಅತ್ತೂ ...ಸ್ತ್ರೆ ಹೋದಳು.

ಕಾಲದ ಮದ್ದಿನಿಂದ ಎಂಥ ಗಂಭೀರ ಸ್ವರೂಪದ ಗಾಯಗಳೂ ಮಾಯುತ್ತವೆ. ...ಳಿಗೂ ಈ ಮಾತು ಅನ್ವಯಿಸಿತು. ಕಾಲದ ಮದ್ದು ಅವಳ ನೋವನ್ನು ... ಶಮನಗೊಳಿಸಿತು. ಆದರೂ ಆಕೆ ಆಗಾಗ ಕದ್ದುಮುಚ್ಚಿ ಅಳುತ್ತಲೇ ...

...ಲ ಇನ್ನೊಂದು ಪವಾಡವನ್ನು ಮಾಡಿ ತೋರಿಸಿತು. ಬೇಗಂ ಸಾಜಿದಾ ... ಫರೀದಿ ಆಗಬೇಕಾಯಿತು.

...ನ್ನ ಮದುವೆಯ ದಿನ ಸಾಜಿದಾ ಅಳಲಿಲ್ಲ, ತುಂಬ ನಕ್ಕಳು. ಬಿದ್ದು ನೆರೆಹೊರೆಯವರಂತೂ ಬೇಗಂ ಅಲ್ತಾಫ್‌ರನ್ನು ತರಾಟೆಗೆ ತೆಗೆದುಕೊಂಡರು. ... ಅಲ್ತಾಫ್ ತನ್ನ ಮಗಳ ಮೇಲೆ ಹರಿಹಾಯ್ದರು.

...ದರೆ ಆ ನಗೆ ಕಣ್ಣೀರನ್ನು ಅಡಗಿಸುವ ಮುಖವಾಡವಾಗಿತ್ತು. ತನ್ನ ಪತಿ ... ಎದುರು ಕಣ್ಣೀರು ತಡೆಯಲು ಅವಳು ಪ್ರಯತ್ನಿಸಿದಳು. ಆ ಪ್ರಯತ್ನದಲ್ಲಿ ... ಒಮ್ಮೊಮ್ಮೆ ಯಶಸ್ವಿಯಾಗುತ್ತಿದ್ದಳು, ಕೆಲವೊಮ್ಮೆ ಸೋಲುತ್ತಿದ್ದಳು. ... ಮಾತ್ರ ಈ ವಿಷಯವಾಗಿ ಕೆಲದಿನ ಚಕಾರವೆತ್ತಲಿಲ್ಲ. ಮದುಮಗಳು ...ತಿ ನೋವಿನಿಂದ ನರಳುತ್ತಿರುವುದು ಅವರಿಗೆ ನುಂಗಲಾರದ ತುತ್ತಾಗಿ ...ಮಿಸಿತು. ಒಂದು ದಿನ ಅವರು ಅವಳನ್ನು ಕೇಳಿಯೇಬಿಟ್ಟರು. ಈ ... ತನ್ನ ದೇಶ ಪ್ರೇಮದ ಕತೆ ಹೇಳುತ್ತಿವೆ ಎನ್ನುವ ಸಾಜಿದಾಳ ಮಾತು ...ಗೆ ಸಮಂಜಸವೆನಿಸಲಿಲ್ಲ. ಆದರೆ ಅವರು ಸಾಜಿದಾಳಿಗೆ ಸಂಬಂಧಿಸಿದಂತೆ ಪ್ರೇಮದ ಕತೆ ಹೆಣೆಯಲಾರಂಭಿಸಿದರು. ಬೇಗಂ ಅಲ್ತಾಫ್‌ರಿಂದ ...ಸ್ವತಃ ಸಾಜಿದಾಳಿಂದ ಫಿರೋಜ್ ಬಗ್ಗೆ ಏಷ್ಟೋ ಮಾತು ಕೇಳಿದ್ದರು. ...ಜ್ ಸಾಜಿದಾಳ ಎಷ್ಟೋ ಚಿತ್ರಗಳನ್ನು ಬಿಡಿಸಿದ್ದ. ಫರೀದಿ ಆ ಚಿತ್ರಗಳನ್ನು ...ದ್ದರು. ಫಿರೋಜ್‌ನಿಂದ ಅವಳಿಗೆ ಇನ್ನೂವರೆಗೆ ಕಾಗದ ಬರುತ್ತಿದ್ದವು. ಫರೀದಿ ಎಲ್ಲ ಗಮನಿಸಿದ್ದರು. ಅವರಿಗೆ ಸಂದೇಹ ಹುಟ್ಟು ಹಾಕುವ ... ಮಾತೂ ಆ ಕಾಗದಗಳಲ್ಲಿ ಕಂಡುಬಂದಿರಲಿಲ್ಲ.

...ಂದು ದಿನ ತಲೆ ಚಿಟ್ಟು ಹಿಡಿದು ಸಾಜಿದಾ "ಬಹುಶಃ ನಾನು ...ಜ್ ಸಾಹೇಬರನ್ನು ನೆನೆದು ಅಳುತ್ತೇನೆಂದು ನಿಮಗೆ ಸಂದೇಹ, ಅಲ್ಲವೆ?" ... ತನ್ನ ಗಂಡನನ್ನು ಕೇಳಿಯೇಬಿಟ್ಟಳು.

...ಸಂದೇಹವೆ? ನನಗೆ ಪೂರ್ತಿ ಖಾತ್ರಿಯಾಗಿದೆ" ಎಂದು ಡಾ. ಫರೀದಿ ...ಳ್ಳಕ್ಕು ಹೇಳಿದರು.

...ಅವರ ಕಾಗದಗಳು ಬರುವುದು ನಿಮ್ಮ ವಿಳಾಸಕ್ಕೆ ತಾನೆ? ಒಂದೆರಡು ... ಓದಿ ನೋಡಿರಿ."

...ಎಷ್ಟೋ ಕಾಗದ ಓದಿ ಬಿಟ್ಟಿದ್ದೇನೆ."

...ಕಾಗದಗಳಲ್ಲಿ ನೀವೇನು ಕಂಡಿರಿ?"

...ಅದೇ... ಹಳೆಯ ಕಾಲದ ಪ್ರೇಮಿಗಳಂತೆ ಈತ ...ಹಮಿಕೆ ...ಮುವಂಥವನಲ್ಲ" ಎಂದ ಫರೀದಿ ತಾವೇ ಮಾತು ಮುಂದುವರಿಸಿದರು. ...ವಗಳಲ್ಲಿ ಪ್ರೀತಿಪ್ರೇಮದ ಮಾತುಗಳೇ ತುಂಬಿಹೋದರೆ ಅದರಿಂದ ...ಜನವೇನು? ಒಬ್ಬರು ಇನ್ನೊಬ್ಬರ ಕುಶಲ ವಿಚಾರಿಸಬೇಕು ಅಷ್ಟೇ. ... ಅವನಿಗಾಗಿ ಕಣ್ಣೀರು ಸುರಿಸುತ್ತಿದ್ದಂತೇ ಅವನೂ ನಿನಗಾಗಿ ...ಡಿಸುತ್ತಿದ್ದಾನೆ ಎನ್ನುವುದು ನನಗೆ ಗೊತ್ತು. ಇದನ್ನೇ ಅಭಿವ್ಯಕ್ತಿಗೊಳಿಸಿದ್ದರೆ ...ಮೂರ್ಖತನವಾಗುತ್ತಿತ್ತು, ಅಲ್ಲವೆ? ಮೇಲಾಗಿ ಅಸಹಾಯಕತೆ ಕೂಡ ...ಫಿರೋಜ್ ಇಲ್ಲಿಗೆ ಬರಲಾರ. ನೀನು ಅಲ್ಲಿಗೆ ಹೋಗಲಾರೆ."

...ಜಿದಾಳ ಕಣ್ಣಿಂದ ನೀರು ಹರಿಯಲಾರಂಭಿಸಿತು. ಆದರೂ ...ಳ್ಳಗುತ್ತಲೇ "ಒಮ್ಮೆ ಭಾರತಕ್ಕೆ ಹೋಗಿ ಖುದ್ದಾಗಿ ವಿಷಯ ...ಕೊಳ್ಳಬಾರದೆ?" ಎಂದು ಕೇಳಿದಳು.

...ಅದೇನೂ ಬೇಕಾಗಿಲ್ಲ" ಎಂದರು ಡಾ. ಫರೀದಿ. "ನೀನು ಹಾಗೂ ಆ ...ಫಿರೋಜ್ ತುಂಬ ಜಾಣರು. ನೀವೆಂದೂ ವಿರಹದ ನೋವನ್ನು ...ಕೊಳ್ಳುವವರಲ್ಲ, ಇನ್ನು ನಾನು ಹೆಂಡತಿ ಬಗ್ಗೆ ತಲೆ ಕೆಡಿಸಿಕೊಳ್ಳುವ ...ಲ್ಲ. ಫಿರೋಜ್ ಇಲ್ಲಿಲ್ಲ, ಹೀಗಾಗಿ ನಿನ್ನ ಆ ಪ್ರೀತಿಯಿಂದ ನನಗೇನೂ ...ಲ್ಲ. ಮೇಲಾಗಿ ಆದರ್ಶ ಮಡದಿಯಲ್ಲಿರಬೇಕಾದ ಎಲ್ಲ ಗುಣಗಳೂ ...ಸಿ. ಇನ್ನೇನು ಬೇಕು? ಇನ್ನು ಸಿಕ್ಕಸಿಕ್ಕಾಗ ನೀನು ಅಳುತ್ತಿರುವುದು ನನಗೆ ...ವಾಗಿ ಕಾಣುತ್ತಿಲ್ಲ, ಇಂಥ ಅಸಮರ್ಪಕ ರೋಗಕ್ಕೆ ನಿಧಾನದ ಅವಶ್ಯಕತೆಯೂ ...ನಗೂ ಗೊತ್ತು, ಎಷ್ಟೋ ಜನರಿಗೆ ಸುಮ್ಮಸುಮ್ಮನೆ ಮುಗುಳ್ನಗುವ ...ವುತ್ತದೆ. ಎಷ್ಟೋ ಹುಡುಗಿಯರು ತಮ್ಮ ಸೆರಗಿನ ಅಂಚನ್ನು ಬೆರಳಿಗೆ ...ಸುತ್ತಿ ಹರಿದುಹಾಕುತ್ತಾರೆ. ಎಷ್ಟೋ ಹುಡುಗಿಯರಿಗೆ ಅರ್ಥವಿಲ್ಲದ ...ಗಳನ್ನು ಜಪಿಸುವ ಚಟವಿರುತ್ತದೆ. ಅದೇರೀತಿ ನೀನು ಅಳುತ್ತಿರುವುದು. ... ಅಸಮರ್ಪಕ ರೋಗಗಳೇ."

ಸಾಜಿದಾ ನಕ್ಕುಬಿಟ್ಟಳು. ಆಕೆಯ ನಗೆ ಸಹಜವಾದದ್ದಲ್ಲವೆನ್ನುವುದು ಡಾ. ಫರೀದಿಗೂ ಗೊತ್ತಾಯಿತು.

"ಸಾಕು ಸಾಕು. ನನಗೆ ಇನ್ನೇನು ಬೇಕು?", ಎಂದರು. "ಇಪ್ಪತ್ನಾಲ್ಕು ಗಂಟೆಗಳಲ್ಲಿ ಮೂರ್ನಾಲ್ಕು ಬಾರಿ ನಗೆ ಹೊರಹೊಮ್ಮಿದರೆ ಸಾಕು. ಅದು ಒರಿಜಿನಲ್ ಹೌದೋ ಅಲ್ಲವೋ ನನಗೆ ಮುಖ್ಯವಲ್ಲ. ಇಪ್ಪತ್ನಾಲ್ಕು ಗಂಟೆಗಳಲ್ಲಿ ಎಂಟು ಹತ್ತು ಬಾರಿ ಮುಗುಳ್ನಕ್ಕರೆ, ಒಂದೆರಡು ಸಲ ಕಾಲಿಗೆ ಎರಗುತ್ತಿದ್ದರೆ... ಅಷ್ಟೇ ಸಾಕು."

ಅವರು ತುಂಟನಂತೆ ಮುಗುಳ್ನಕ್ಕರು. ಸಾಜಿದಾ ಅವರ ತುಟಿ ಮೇಲೆ ಕೈ ಇರಿಸಿದಳು. "ನೀವು ನನ್ನನ್ನು ಹಾಗೂ ಫಿರೋಜ್‌ರನ್ನು ಜಾಣಪ್ರೇಮಿಗಳೆಂದು ಹೇಳಿ ಮುಂದೆ ಮಾತನಾಡುವ ಅವಶ್ಯಕತೆಯನ್ನೇ ಇಲ್ಲವಾಗಿಸಿದಿರಿ. ನಮ್ಮ ಪ್ರೀತಿಯ ಪರೀಕ್ಷೆಗಾಗಿ ಅಲ್ಲದಿದ್ದರೂ ಒಮ್ಮೆ ಭಾರತಕ್ಕೆ ಹೋಗಿ ಬರೋಣ...."

ಸಾಜಿದಾಳೊಂದಿಗೆ ಒಮ್ಮೆ ಭಾರತಕ್ಕೆ ಹೋಗಿಬರುವುದಾಗಿ ಡಾ. ಫರೀದಿ ಆಕೆಗೆ ಮಾತು ಕೊಟ್ಟರು. ಅವರ ಮಾತಿನಿಂದ ಅವಳಿಗೆ ತುಂಬ ಸಂತೋಷವಾಯಿತು. ಆದರೆ ದಿನಗಳು ಉರುಳುತ್ತಾ ಹೋದಂತೆ ತನ್ನ ಗಂಡನ ಆಶ್ವಾಸನೆ ತನಗೆ ಸಮಾಧಾನ ಮಾಡುವ ತಂತ್ರವಾಗಿತ್ತು ಎನ್ನುವುದು ಅವಳಿಗೆ ಖಚಿತವಾಗತೊಡಗಿತು. ತನ್ನ ಅನಿಸಿಕೆ ನಿಜವಾಗತೊಡಗುತ್ತಲೇ ಅವಳು ಮತ್ತೊಮ್ಮೆ ಅಳಲಾರಂಭಿಸಿದಳು.

ಮುಂದೆ ಸಾಗುವುದೇ ಕಾಲದ ಕೆಲಸ, ಅಲ್ಲವೆ? ಅದು ತನ್ನ ಕೆಲಸ ಮುಂದುವರಿಸಿತು.



ಸಾಜಿದಾಳಿಗೆ ಮೊದಲ ಮಗು ಆಯಿತು. ಮತ್ತೆ ಎರಡನೆಯದು. ಮುಂದೆ ಅವಳ ತಾಯಿ ಬೇಗಂ ಅಲ್ತಾಫ್ ತೀರಿಕೊಂಡರು. ಅನಂತರ ಡಾ. ಫರೀದಿ ಮೂರಂತಸ್ತಿನ ಭವ್ಯ ಮನೆ ಕಟ್ಟಿಸಿದರು.

ನಂತರ ಸಾಜಿದಾಳ ಹೃದಯವನ್ನು ಚೂರುಚೂರುಗೊಳಿಸಿದ ಘಟನೆಯೂ ಸಂಭವಿಸಿತು. ಕಾರ್ ಅಪಘಾತದಲ್ಲಿ ಆರೋಗ್ಯವಂತ, ಲವಲವಿಕೆಯ ಡಾ. ಫರೀದಿ ಸತ್ತುಹೋದರು. ಸಾಜಿದಾ ಮತ್ತೆ ಅದೆಷ್ಟೋ ದಿನ ಅಳುತ್ತ ಕಾಲ ಕಳೆಯಬೇಕಾಯಿತು. ಮತ್ತೆ ಕಾಲದ ಮದ್ದು ತನ್ನ ಕೆಲಸ ಮಾಡಿತು. ಸಾಜಿದಾಳ ನೋವು ಶಮನಗೊಂಡಿತು.

ಮತ್ತೆ ಇತಿಹಾಸ ಮರುಕಳಿಸಲಾರಂಭಿಸಿತು. ಸಾಜಿದಾ ತನ್ನ ಮೂರಂತಸ್ತಿನ ಮನೆಯನ್ನು ಮಾರುವ ತೀರ್ಮಾನ ಮಾಡಿದಳು - ಭಾರತಕ್ಕೆ ಮರಳುವ ಆಸೆಯಿಂದಾಗಿ. ಆಕೆಯ ಅಣ್ಣ ಮನೆ ಮಾರಬೇಡವೆಂದು ಅವಳಿಗೆ ಬುದ್ಧಿವಾದ ಹೇಳಲಾರಂಭಿಸಿದ. ನಾಳೆ ಏನಾಗುವುದೋ ಯಾರು ಹೇಳಬಲ್ಲರು? ಮತ್ತೆ ಪಾಕಿಸ್ತಾನಕ್ಕೆ ವಾಪಸಾಗುವುದಾದರೆ ತಲೆ ಮೇಲೊಂದು ಸೂರು ಇರಲಿ-ಎನ್ನುವುದು ಅವನ ವಾದವಾಗಿತ್ತು.

ಸಾಜಿದಾ ಅವನ ಮಾತಿಗೆ ಬೆಲೆ ಕೊಟ್ಟು ತನ್ನ ಮನೆಯನ್ನು ಅವನಿಗೆ ಒತ್ತೆ ಇರಿಸಿದಳು. ಅವಳು ಪಾಸ್‌ಪೋರ್ಟ್, ವಿದೇಶಿ ವಿನಿಮಯ, ಅರಿವೆ ಅಂಚಡಿ ಖರೀದಿ ಮತ್ತಿತರ ಕೆಲಸಗಳಲ್ಲಿ ನಿರತಳಾದಳು. ಆಗ ಅವಳ ಅತ್ತಿಗೆ ಬಂದಳು. ಬರುತ್ತಲೇ ಅವಳು "ಹಾಗಾದರೆ ನೀನು ಭಾರತಕ್ಕೆ ಹೋಗಿಯೇ ಬಿಡುವೆಯಾ, ಸಜ್ಜೂ?" ಎಂದು ಕೇಳಿದಳು.

"ಹೌದು ಭಾಭೀಜಿ" ಸಾಜಿದಾ ಮುಗುಳ್ನಕ್ಕಳು. ಆದರೆ ಅವಳ ಕಣ್ಣಲ್ಲಿ ನೀರೂರಿತು. "ಏನು ಹೇಳಲಿ ಭಾಭಿ? ನೀವೆಲ್ಲ ಇದ್ದರೂ ಈ ದೇಶ ಪರಕೀಯವೆನಿಸುತ್ತಿದೆ."

"ನೀನು ಹೋಗಬೇಡವೆಂದು ನಾನು ಹೇಳಲು ಬಂದಿಲ್ಲ, ಭಾರತ ಇನ್ನೂ ಪರಕೀಯವೆನಿಸುತ್ತದೆ ನೋಡು."

"ಏಕೆ?"

"ಹಾಂ ಹಾಂ... ನಾನು ನಿನಗೆ ಹೇಳಬೇಕಾದ್ದು... ಭಾರತ ಬಿಟ್ಟು ಬಂದು ಹದಿನೆಂಟು ವರ್ಷಗಳಾದರೂ ಇನ್ನೂತನಕ ನೀನೇಕೆ ಕಣ್ಣೀರು ಹಾಕುತ್ತಿದ್ದೀಯ ಎನ್ನುವುದು ನನಗೆ ಅರ್ಥವಾಗದ ವಿಷಯವೇನಲ್ಲ. ತಂದೆಯವರು ಪಾಕಿಸ್ತಾನಕ್ಕೆ ಹೊರಡುವ ಕಾರ್ಯಕ್ರಮ ಹಾಕಿಕೊಂಡಾಗೆಲ್ಲ ನೀನೆಷ್ಟು ಅಳಲಾರಂಭಿಸುತ್ತಿದ್ದಿ ಎಂದರೆ ಒತ್ತಾಯದಿಂದ ನಿನ್ನನ್ನು ಪಾಕಿಸ್ತಾನಕ್ಕೆ ಕರೆದೊಯ್ಯಕೂಡದೆಂದು ಡಾಕ್ಟರ್ ಸಹ ಸಲಹೆ ನೀಡುತ್ತಿದ್ದರು ಎನ್ನುವುದು ನನಗೆ ಗೊತ್ತಿದೆ. ಇದರ ಕಾರಣ ನನಗೆ ಗೊತ್ತು..."

"ಅದೇನು ಭಾಭೀಜಿ?" ಎಂದು ಸಾಜಿದಾ ಕುತೂಹಲದಿಂದ ಕೇಳಿದಳು.

"ಹೇಳ್ತೀನಿ. ಅದಕ್ಕೆಂತಲೇ ನಾನು ಬಂದದ್ದು, ಅದು ಸರಿ. ಫಿರೋಜ್‌ನ ಎಷ್ಟನೆ ಹುಟ್ಟುಹಬ್ಬವದು? ಬಹುಶಃ 35ನೆಯದಿರಬಹುದು..."

"ನನಗೊಂದೂ ಅರ್ಥವಾಗುತ್ತಿಲ್ಲ ಭಾಭೀಜಿ."

"ಇನ್ನೂ ಮುಗ್ಧಳಂತೆ ವರ್ತಿಸಿದರೆ ಪ್ರಯೋಜನವಿಲ್ಲ, ಇತ್ತ ಫರೀದಿ ಕೇಳುತ್ತಿದ್ದಾರೆ ಎನ್ನುವ ಮಾತೂ ಇಲ್ಲ. ಹೌದು ಅದು ಅವನ 35ನೆಯ ಹುಟ್ಟುಹಬ್ಬ. ಮಲ್ಲಿಗೆ ಕಂಟೆಗಳ ಮಧ್ಯೆ ನೀನು ಕೂತುಕೊಳ್ಳಬಾರದ ರೀತಿಯಲ್ಲಿ ಕೂತುಕೊಂಡಿದ್ದನ್ನು ನಾನು ನೋಡಿದ್ದೆ. ಸಿನಿಮಾದಲ್ಲಿ ಪ್ರೇಮಿ ಹಾಗೂ ಪ್ರೇಯಸಿಯರಂತೆ..."

"ಭಾಭೀಜಿ" ಸಾಜಿದಾ ಏಕಾಏಕಿ ಅರಚಿಕೊಂಡಳು.

"ಅರಚಿಕೊಳ್ಳಬೇಡ. ಮಕ್ಕಳೂ ಇಲ್ಲಿಗೆ ಬರಬಹುದು. ನಾನು ಏನು ಹೇಳಬೇಕೆಂದಿರುವೆನೋ ಅದನ್ನು ನಿನ್ನ ಬಿಟ್ಟು ಬೇರೆ ಯಾರೂ ಕೇಳಬಾರದು. ಇಲ್ಲದಿದ್ದರೆ ನಾನು ಕೊಟ್ಟ ಮಾತಿಗೆ ತಪ್ಪಿ ನಡೆದಂತಾಗುತ್ತದೆ. ನಾನು ಈ ಮಾತನ್ನು ಬೇರೆ ಯಾರಿಗೂ ಹೇಳುವುದಿಲ್ಲವೆಂದು ಫಿರೋಜ್‌ಗೆ ಆಣೆ ಮಾಡಿ ಹೇಳಿದ್ದೆ. ಅಲ್ಲಾಹ್‌ನಾಣೆಗೂ ಸಾಯುವತನಕ ನಾನು ಮಾತಿಗೆ ತಪ್ಪಿ ನಡೆಯಲಾರೆ. ನೀನು ಭಾರತಕ್ಕೆ ಹೋಗುವ ತೀರ್ಮಾನ ಮಾಡಿರದಿದ್ದರೆ ನಿನಗೂ ಈ ಮಾತನ್ನು ಹೇಳುತ್ತಿರಲಿಲ್ಲ. ನಿನಗೊಬ್ಬಳಿಗೆ ಇದನ್ನು ಹೇಳಿದರೆ ನಾನು ಮಾತಿಗೆ ತಪ್ಪಿ ನಡೆದಂತಾಗುವುದಿಲ್ಲ. ಆದರೂ ಅಲ್ಲಾಹ್ ನನ್ನನ್ನು ಕ್ಷಮಿಸಲಿ..."

"ನೀನು ಏನು ಹೇಳಬೇಕೆಂದಿದ್ದೀಯೋ ನನಗೆ ಗೊತ್ತಾಗಲಿಲ್ಲ" ಎಂದು ಸಾಜಿದಾ ಗೊಣಗಿದಳು.

"ಒಂದೇ ಒಂದು ಮಾತು ಹೇಳಬೇಕಾಗಿದೆ. ಈಗ 60-61ರ ಪ್ರಾಯದ ಫಿರೋಜ್ ಮಕ್ಕಳು ಮೊಮ್ಮಕ್ಕಳು ಹೊಂದಿರುವ ಮುದುಕನಾಗಿರಬಹುದು. ಅವನನ್ನು ಕಾಣುವುದು ನಿನಗೆ ಇನ್ನೂ ಸಂತಸದ ವಿಷಯವೆ?"

"ಹಾಗಾದರೆ ನಿನಗೆಲ್ಲ ಗೊತ್ತು"

"ಎಲ್ಲ ಗೊತ್ತಿದೆ. ಮಲ್ಲಿಗೆ ಕಂಟಗಳ ಆ ಪ್ರಸಂಗಕ್ಕೂ ಮೊದಲಿನದು ಕೂಡ... ಆತ ಹೆಚ್ಚುಕಡಿಮೆ ಒಂದು ತೀರ್ಮಾನಕ್ಕೆ ಬಂದಂತಿತ್ತು. ಅದೇನೇ ಇರಲಿ, ನಾನು ಅಲ್ಲಿದ್ದಷ್ಟು ಕಾಲ ನಾನೇನನ್ನೂ ನೋಡಲಿಲ್ಲ. ಪಾಕಿಸ್ತಾನಕ್ಕೆ ಬಂದಮೇಲೆ ನಿನಗೆ ದಾರಿ ಖುಲ್ಲಾ ಆಗಿಬಿಟ್ಟಿತು..."

"ಹೌದು ಭಾಭೀ. ನಾನು ಅವರನ್ನು ಪ್ರೀತಿಸಿದ್ದು ನಿಜ. ಗಾಢವಾಗಿ ಪ್ರೀತಿಸಿದೆ. ಆದರೆ ಕಾಲ ಎಲ್ಲವನ್ನು ಹಾಳು ಮಾಡಿ ಬಿಟ್ಟಿತಲ್ಲ, ಅಲ್ಲಾಹ್ ಸಾಕ್ಷಿಯಾಗಿದ್ದಾನೆ. ಭಾರತ ಬಿಟ್ಟು ಬರುವಾಗ ಫಿರೋಜ್ ಭಾರತದಲ್ಲೇ ಉಳಿಯುತ್ತಾರಲ್ಲವೆಂದು ನಾನು ಕಣ್ಣೀರು ಹಾಕಿರಲಿಲ್ಲ. ಅಲ್ಲಿ ನನ್ನ ಜೀವವಿದೆ ಎನ್ನುವ ಕಾರಣಕ್ಕಾಗಿ ನಾನು ನರಳಿದ್ದು ಕೊರಗಿದ್ದು"

"ಸುಳ್ಳು ಹೇಳಬೇಡ ಸಜ್ಜು" ಈ ಸಲ ಆಕೆಯ ಅತ್ತಿಗೆ ನಿಜಕ್ಕೂ ಅರಚಿಕೊಂಡಳು.

"ನಾನು ಸುಳ್ಳು ಹೇಳುತ್ತಿಲ್ಲ ಭಾಭಿ" ಎಂದು ಸಾಜಿದಾ ನುಡಿದಳು. "ನಾನು ಫಿರೋಜ್‌ರಿಗಾಗಿ ಭಾರತಕ್ಕೆ ಹೊರಟಿಲ್ಲ. ನಿನಗೆ ಹೇಗೆ ಮನವರಿಕೆ ಮಾಡಿಕೊಡಬೇಕೋ ತಿಳಿಯದಾಗಿದೆ."

"ಫಿರೋಜ್ ನಿನಗಾಗಿ ಕಾಯುತ್ತಿದ್ದಾನೆಂದು ನೀನು ಭಾರತಕ್ಕೆ ಹೊರಟಿದ್ದೀಯ" ಆಕೆಯ ಅತ್ತಿಗೆಯ ಮಾತಿನಲ್ಲಿ ವ್ಯಂಗ್ಯವಿತ್ತು.

"ಇಲ್ಲ, ಖಂಡಿತವಾಗಿಯೂ ಇಲ್ಲ"

"ಕನಿಷ್ಠ ಪಕ್ಷ ನನ್ನೆದುರು ನಿಜ ಹೇಳು." ಈಗ ಸಾಜಿದಾ ಅಸಹಾಯಕಳಾದಂತೆ ಕಂಡಳು. "ನಾನು ಫರೀದಿಯಲ್ಲ. ನಿಜ ಹೇಳಿದರೆ ನಿನಗೆ ನನ್ನಿಂದ ಅಪಾಯವೇನಿದೆ? ನೀನಿನ್ನೂ ಕನ್ಯೆಯಾಗಿದ್ದಾಗಲೂ ನಿನಗೆ ನನ್ನಿಂದ ಯಾವ ಅಪಾಯವಾಗಿಲ್ಲ. ನನ್ನ ಕರ್ತವ್ಯವೆಂದು ಭಾವಿಸಿ ನಿನ್ನ ಗುಟ್ಟು ರಟ್ಟಾಗುವಂತೆ ಮಾಡಿದ್ದರೆ ಅದೊಂದು ಹಗರಣವಾಗಿ ಬಿಡುತ್ತಿತ್ತು. ಈಗ ನಿನ್ನ ಈ ಮೂರ್ಖತನದ ಆಟ ನಡೆಯಗೊಡಲಾರೆ. ನಿನ್ನನ್ನು ಭಾರತಕ್ಕೆ ಹೋಗಗೊಡಲಾರೆ."

ಇಬ್ಬರೂ ಕೆಲಕ್ಷಣ ಮೌನವಾಗಿದ್ದರು. ಮತ್ತೊಮ್ಮೆ ಸಾಜಿದಾಳ ಅತ್ತಿಗೆಯೇ "ಫಿರೋಜನಿಂದ ಕಾಗದಗಳು ಬರುತ್ತಿವೆಯೆ?" ಎಂದು ಕೇಳಿದಳು.

"ಕೆಲ ತಿಂಗಳಿಂದ ಬಂದಿಲ್ಲ"

"ನಿನ್ನ ದಾರಿ ನೋಡಿ ನೋಡಿ ಆ ಬಡಪಾಯಿ ಈ ಜಗತ್ತಿನಿಂದಲೇ..." ಸಾಜಿದಾ ತಕ್ಷಣ ತನ್ನ ಅತ್ತಿಗೆಯ ಬಾಯಿಯನ್ನು ಕೈಯಿಂದ ಒತ್ತಿ ಹಿಡಿದಳು. ಅವಳ ಅತ್ತಿಗೆ ಬಿದ್ದು ಬಿದ್ದು ನಗಲಾರಂಭಿಸಿದಳು.

"ಆಯಿತಲ್ಲ... ಗುಟ್ಟು ರಟ್ಟಾಯಿತಲ್ಲ, ಅಲ್ಲಿ ನಿನ್ನ ಜೀವವಿದೆ ಎಂದು ಹೇಳಿದ್ದು ಸುಳ್ಳು" ಎಂದಳು ಸಾಜಿದಾಳ ಅತ್ತಿಗೆ.

"ಅದು ನಿಜ ಭಾಭೀ."

"ಆದರೆ ನೀನು ಭಾರತಕ್ಕೆ ಹೋಗುವುದು ಸಾಧ್ಯವಿಲ್ಲ" ಅವಳು ದೃಢಸಂಕಲ್ಪ ಮಾಡಿದವಳಂತೆ ಹೇಳಿದಳು.

"ಏಕೆ ಭಾಭಿ?"

"ಏಕೆಂದರೆ ಭಾರತಕ್ಕೆ ಹೋದಮೇಲೆ ನೀನೇನಾದರೂ ಆತ್ಮಹತ್ಯೆ ಮಾಡಿಕೊಂಡರೆ ನಿನ್ನ ಮಕ್ಕಳನ್ನು ನೋಡಿಕೊಳ್ಳುವವರು ಅಲ್ಲಿ ಯಾರಿದ್ದಾರೆ? ಇಲ್ಲೇ ನೀನು ಸತ್ತರೆ ನಾವೆಲ್ಲ ಇರ್ತೀವಿ."

"ನಿನ್ನ ಮಾತೇ ಅರ್ಥವಾಗ್ತಿಲ್ಲ ಭಾಭಿ."

ಅದಕ್ಕೆ ಉತ್ತರವಾಗಿ ಅವಳ ಅತ್ತಿಗೆ ಒಂದು ಏರೋಗ್ರಾಮನ್ನು ಅವಳತ್ತ ಸರಿಸಿದಳು.

ಸಾಜಿದಾ ಏರೋಗ್ರಾಮನ್ನು ಬಿಚ್ಚಿ ಓದಲಾರಂಭಿಸಿದಳು. ಅದು ಫಿರೋಜ್‌ನ ಹೆಂಡತಿ ತನ್ನ ಅತ್ತಿಗೆಗೆ ಬರೆದ ಕಾಗದ. ಅವಳು ತನ್ನ ಗಂಡನ ಆಕಸ್ಮಿಕ ಸಾವಿನ ಸುದ್ದಿ ತಿಳಿಸಿದ್ದಳು. ಈ ಸುದ್ದಿಯನ್ನು ಸಾಜಿದಾಳಿಗೆ ತಿಳಿಸಕೂಡದೆಂದೂ ಕೇಳಿಕೊಂಡಿದ್ದಳು. ಸಾಜಿದಾ ಈ ಸುದ್ದಿ ಕೇಳಿ ಆತ್ಮಹತ್ಯೆ ಮಾಡಿಕೊಂಡಾಳೆಂದು ಅವಳು ಆತಂಕಗೊಂಡಿದ್ದಳು.

ಕಾಗದ ಓದಿ ಸಾಜಿದಾ ಕಣ್ಣುಮುಚ್ಚಿದಳು. ಕಣ್ಣು ತೆರೆದಾಗ ಒಂದೆರಡು ಕಣ್ಣೀರ ಹನಿಗಳು ಕೆಲಕ್ಷಣ ಅವಳ ಗಲ್ಲದ ಮೇಲೆ ವಾಸ್ತವ್ಯ ಮಾಡಿದವು. ಅವಳ ಅತ್ತಿಗೆ ಏರೋಗ್ರಾಮಿಗಾಗಿ ಕೈಚಾಚುತ್ತ "ಈಗಲೂ ನೀನು ಭಾರತಕ್ಕೆ ಹೋಗಬೇಕೆಂದಿರುವೆಯಾ?" ಎಂದು ಕೇಳಿದಳು.

"ನನ್ನ ಪ್ರೀತಿ ಫಿರೋಜ್ ಅವರ ಅಸ್ತಿತ್ವವನ್ನು ಮೀರಿರುವಂಥದ್ದು ಭಾಭಿ" ಎಂದ ಸಾಜಿದಾ ನಗಲಾರಂಭಿಸಿದಳು. "ಫಿರೋಜ್ ಅವರ ಸಾವಿನ ಸುದ್ದಿ ನನಗೆ ತುಂಬ ಆಘಾತ ಉಂಟುಮಾಡಿದೆ. ಆದರೆ ಭಾರತದ ಮಣ್ಣು ಇನ್ನೂ ಜೀವಂತವಿದೆ ಎನ್ನುವುದೇ ನನ್ನ ಪಾಲಿನ ಸಂತೋಷ. ನಾನು ತೋ..."

ಸಾಜಿದಾಳ ಕಣ್ಣಲ್ಲಿ ನೀರು ತುಂ...

ಅದೇಕೋ ಈ ಸಲ ಅವಳ ...

● ಹಸನ್ ನಯೀಂ ಸುರಕೋಡ






# ಅನಾರ್ಯ ಈಡಿಗರು...

'ವರ್ಣಾಶ್ರಮಗಳ ಗೋಜಿಲ್ಲದ, ಯಜ್ಞಯಾಗಾದಿಗಳ ಆಡಂಬರವಿಲ್ಲದ, ಸಾಹಸಿಗ ಪ್ರವೃತ್ತಿಯ ಈಡಿಗರನ್ನು ಯಾರು? ಯಾವಾಗ 'ಆರ್ಯ ಈಡಿಗ'ರೆಂದು ಕರೆದರೋ ತಿಳಿಯದು. 'ಆರ್ಯ' ಎಂಬ ವಿಶೇಷಣದಿಂದ ನಾವು ಮೇಲ್ವರ್ಗದವರಾಗುತ್ತೇವೆ; ಸಾಮಾಜಿಕ ಸ್ಥಾನಮಾನಗಳು ದೊರೆಯುತ್ತವೆ ಎಂದು ಭಾವಿಸಿದರೆ ಅದಕ್ಕಿಂತ ಭ್ರಮೆ ಬೇರೊಂದಿರಲಾರದು. ಕೆಲವೊಂದು ಅನುಕರಣೆಗಳಿಂದಾಗಲಿ, ವೈದಿಕ ಲಾಂಛನಗಳನ್ನು ಧರಿಸುವುದರಿಂದಾಗಲಿ, ಪುರೋಹಿತ ವರ್ಗದವರು ಹೇಳಿದಂತೆ ನಡೆಯುವುದರಿಂದಾಗಲಿ 'ಈಡಿಗರು' ವೈದಿಕರೆನಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ಸಾಮಾನ್ಯವಾಗಿ ಆರ್ಯೇತರ ಜನಾಂಗದವರಿಗೆ ಗೋತ್ರಗಳಿರುವುದಿಲ್ಲ. ಈಡಿಗರು ಮಾತೃ ಪ್ರಧಾನ ಸಂಸ್ಕೃತಿ ಹಿನ್ನೆಲೆಯುಳ್ಳವರು. ಇವರಲ್ಲಿ ಬುಡಕಟ್ಟು ಜನಾಂಗಗಳ ಗುಣಲಕ್ಷಣಗಳು ದಟ್ಟವಾಗಿ ಕಂಡುಬರುವಷ್ಟು ವೈದಿಕ ಲಕ್ಷಣಗಳು ಕಂಡುಬರುವುದೇ ಇಲ್ಲ. ಹಾಗಾಗಿ ಈಡಿಗರು ಖಂಡಿತವಾಗಿಯೂ ದ್ರಾವಿಡ ಜನಾಂಗಕ್ಕೆ ಸೇರಿದವರೇ ಹೊರತು ಆರ್ಯರಾಗಿರಲು ಸಾಧ್ಯವೇ ಇಲ್ಲ, ಹಾಗಾಗಿ ಈಡಿಗರ ಜೊತೆ 'ಆರ್ಯ' ಪದ ಸೇರಿರುವುದರ ಔಚಿತ್ಯದ ಬಗ್ಗೆ ಈಡಿಗ ಜನಾಂಗದ ವಿಚಾರಶೀಲರು; ಹಿರಿಯರು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಸರಿ ಎನಿಸುತ್ತದೆ.

2008ರಲ್ಲಿ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಶೇಷಾದ್ರಿಪುರಂ, ಬೆಂಗಳೂರು ಅವರು ಪ್ರಕಟಿಸಿರುವ 'ಈಡಿಗರ ಸಂಸ್ಕೃತಿ' (ಇತಿಹಾಸ ಪುರಾಣ) ಕೃತಿಯ ಪುಟ ಸಂಖ್ಯೆ 79-80 ರಲ್ಲಿ ಲೇಖಕರೂ ಸಂಶೋಧಕರೂ ಆದ ಬಿ.ಸಿದ್ಧಗಂಗಯ್ಯ ಕಂಬಾಳು ಅವರು ಎತ್ತಿರುವ ಪ್ರಶ್ನೆಗಳಿಗೆ ಮತ್ತು ಸೂಚಿಸಿರುವ ಸಲಹೆಗಳಿಗೆ ಪೂರಕವಾಗಿ ಈ ವಿಚಾರಗಳನ್ನು ಮಂಡಿಸುತ್ತಿದ್ದೇನೆ.

ಈಗ್ಗೆ ಸರಿಸುಮಾರು 45 ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಹೆಂಡದ ವ್ಯಾಪಾರವನ್ನು ನಿಷೇಧಿಸುವ ಬಗ್ಗೆ ಚಿಂತನೆ ನಡೆಸಿತ್ತು, ಆಗ ನಿರುದ್ಯೋಗ ಸಮಸ್ಯೆಯ ಆತಂಕಕ್ಕೆ ಈಡಾದ ಈಡಿಗರ ಸಮೂಹ ಅಂದರೆ ಈಡಿಗಗೌಡರು (ಏಳುಮನೆ ಈಡಿಗರು, ಒಂಬತ್ತು ಮನೆ ಈಡಿಗರು, ಹನ್ನೊಂದು ಮನೆ, ಮೂವತ್ತು ಮನೆ, ಅರವತ್ತು ಮನೆ ಈಡಿಗರು ಇತ್ಯಾದಿ) ದೀವರು (ತೆಂಗಿನ ದೀವರು, ಈಚಲ ದೀವರು ಇತ್ಯಾದಿ) ಬಿಲ್ಲವರು (ಪೂಜಾರಿಗಳು) ಹೀಗೆ ನೂರೆಂಟು ಉಪ ಪಂಗಡಗಳಾಗಿ ಛಿದ್ರಗೊಂಡಿದ್ದ ಸಕಲ ಈಡಿಗರನ್ನೂ ಒಗ್ಗೂಡಿಸಿ ಮೈಸೂರಿನಲ್ಲಿ ಒಂದು ವಾರಗಳ ಕಾಲ ಮಹಾಸಮ್ಮೇಳನ ಒಂದನ್ನು ನಡೆಸಿ ಸರ್ಕಾರದಿಂದ ಪರ್ಯಾಯ ಉದ್ಯೋಗ ಒದಗಿಸಿ ಕೊಡುವವರೆಗೆ ಹೆಂಡದ ನಿಷೇಧ ಕಾಯ್ದೆ ಜಾರಿಗೆ ತರಬಾರದೆಂದು ಒತ್ತಾಯಿಸುವ ಜೊತೆಗೆ ಇನ್ನು ಮುಂದೆ ತಾವೆಲ್ಲಾ ಒಗ್ಗಟ್ಟಿನಿಂದ ಹೋರಾಡಬೇಕೆಂದು ನಿರ್ಧರಿಸಿದರು. ಮಾತ್ರವಲ್ಲ ಜನಾಂಗದವರೆಲ್ಲರೂ ಸೇರಿ ಒಂದು ಕ್ಷೇಮಾಭಿವೃದ್ಧಿ ಸಂಘ ಸ್ಥಾಪಿಸಬೇಕೆಂದು ನಿರ್ಣಯ ಕೈಗೊಂಡರು. ಅದರಂತೆ ಈಡಿಗರ ಸಂಘದ ಸ್ಥಾಪನೆಗೆ ಸಕಲ ಸಿದ್ಧತೆಗಳೂ ನಡೆದು, ಸಂಘದ ಹಿರಿಯರೆಲ್ಲರೂ ಸೇರಿ ಆ ಸಂಘಕ್ಕೆ 'ಆರ್ಯ ಈಡಿಗ ಸಂಘ' ಎಂದು ನಾಮಕರಣ ಮಾಡಿಯೇಬಿಟ್ಟರು.

'ಆರ್ಯ' ಎಂದರೆ ತಪ್ಪಾಗಿ ಪರಿಭಾವಿಸಿದ ಅವರಿಗೆ 'ಆರ್ಯ' ಎನ್ನುವುದು ಒಂದು ಜನಾಂಗದ ಹೆಸರು ಎನ್ನುವುದಾಗಲಿ, ಆ ಹೆಸರಿನ ಐತಿಹಾಸಿಕ, ಸಾಂಸ್ಕೃತಿಕ ಮಹತ್ವವಾಗಲಿ ತಿಳಿದಿರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಅದಾಗಿ ನಾಲ್ಕು ದಶಕಗಳು ಕಳೆದರೂ ಆ ಆರ್ಯಪದ ನಮಗೆ ಸರಿಯಾದುದಲ್ಲ, ಅದರಿಂದ ತಪ್ಪು ಸಂದೇಶಗಳನ್ನು ನಾವು ಸಮಾಜಕ್ಕೆ ಕೊಟ್ಟಂತಾಗುತ್ತದೆ ಎಂಬ ತಿಳಿವಳಿಕೆಗೆ ಯಾವ ಈಡಿಗರೂ ಬಾರದಿರುವುದು ನನಗೆ ಆಶ್ಚರ್ಯ ತಂದಿದೆ.

ವಿಷಯಕ್ಕೆ ಬರುವ ಮುನ್ನ ಆರ್ಯ-ದ್ರಾವಿಡ ಜನಾಂಗಗಳ ಗುಣಸ್ವಭಾವಗಳೇನು? ಆಚಾರವಿಚಾರಗಳೇನು? ಅವರ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆಗಳೇನೆಂದು ತಿಳಿದುಕೊಳ್ಳುವುದು ಅತ್ಯವಶ್ಯಕ.

## ಆರ್ಯರ ಗುಣಲಕ್ಷಣಗಳು

ಆರ್ಯರು ವೇದ ಉಪನಿಷತ್ತುಗಳನ್ನು ಅರಿತವರು, ಜನಿವಾರ ಧರಿಸುವವರು, ಹೋಮ-ಹವನ ಯಜ್ಞ-ಯಾಗಾದಿಗಳನ್ನು ನಡೆಸುವವರು, ಇಂದ್ರ, ಅಗ್ನಿ ಮುಂತಾದ ದೇವತೆಗಳನ್ನು ಪೂಜಿಸುವವರು, ಮೊದಲಿಗೆ ಮಾಂಸಾಹಾರಿಗಳಾಗಿದ್ದು ಕಾಲಾನಂತರದಲ್ಲಿ ಮಾಂಸಾಹಾರವನ್ನು ತ್ಯಜಿಸಿದರು ಎಂದು ಹೇಳಲಾಗಿದೆ. ನೇರವಾಗಿ ಹೇಳಬೇಕೆಂದರೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮಾತ್ರವೇ ಆರ್ಯರು. ಅವರ ಇನ್ನೊಂದು ಹೆಸರೇ ವೈದಿಕರು ಅಥವಾ ಪುರೋಹಿತಶಾಹಿಗಳು. ಆರ್ಯರ ಮೂಲ ಭಾಷೆ ಸಂಸ್ಕೃತ.

## ದ್ರಾವಿಡರ ಗುಣಲಕ್ಷಣಗಳು

ದ್ರಾವಿಡ ಭಾಷೆಯ ಪ್ರಭೇದಗಳಾದ ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಕೊಡವ, ತುಳು ಮುಂತಾದ ಭಾಷೆಗಳನ್ನು ಮಾತನಾಡುವ ದಕ್ಷಿಣ ಭಾರತದ ಶೂದ್ರರು, ಶಿವ-ಪಾರ್ವತಿ, ಹನುಮಹಾತ್ಮ, ಕಾಳಿ, ಯಲ್ಲಮ್ಮ, ರೇಣುಕಾ, ಮಾರಮ್ಮ ಮುಂತಾದ ಶಕ್ತಿ ದೇವತೆಗಳ ಆರಾಧಕರು. ಮದುವೆ ಮುಂತಾದ ಸಮಾರಂಭಗಳಲ್ಲಿ ಅಗ್ನಿಗೆ ಬದಲಾಗಿ ನೀರಿಗೆ ಪ್ರಾಧಾನ್ಯತೆ ಕೊಡುವವರು. ದ್ರಾವಿಡರು ಪಕ್ಕಾ ಮಾಂಸಾಹಾರಿಗಳು.

## ಆರ್ಯ- ದ್ರಾವಿಡರ ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆ

ಸುಮಾರು ಆರು ಸಾವಿರ ವರ್ಷಗಳ ಹಿಂದೆ ಸಿಂಧೂ ಕಣಿವೆಯ ನಾಗರಿಕರು ಎನಿಸಿಕೊಂಡ ಭಾರತದ ಮೂಲನಿವಾಸಿಗಳಾದ ದ್ರಾವಿಡರು ಉತ್ತರ ಭಾರತದಲ್ಲಿ ನೆಲೆಸಿದ್ದರು. ಅವರಾಡುತ್ತಿದ್ದ ಭಾಷೆಗೆ ದ್ರಾವಿಡ ಭಾಷೆ ಎನ್ನುವ ಹೆಸರಿತ್ತು, ಅವರು ಶ್ರಮಜೀವಿಗಳಾಗಿದ್ದರು. ಹರಪ್ಪ-ಮೊಹೆಂಜೋದಾರೋ (ಸಿಂಧು ನದಿಯ ನಾಗರಿಕತೆ ದ್ರಾವಿಡರದ್ದು) ಅಂದರೆ ನಿಜವಾದ ಹಿಂದೂಗಳು ದ್ರಾವಿಡರೇ ವಿನಃ ಆರ್ಯರಲ್ಲ, ಆರ್ಯರು ವೈದಿಕ ಧರ್ಮೀಯರು. ಸಾಂಸ್ಕೃತಿಕವಾಗಿ ದ್ರಾವಿಡರು ಉನ್ನತ ಮಟ್ಟದಲ್ಲಿದ್ದಾಗ ಸುಮಾರು ಮೂರು ಸಾವಿರ ವರ್ಷಗಳ ಆಸುಪಾಸಿನಲ್ಲಿ ಆರ್ಯರು ಮಧ್ಯ ಏಷ್ಯಾದಿಂದ ಅಂದರೆ ಇವತ್ತು ನಾವೇನು ಇಸ್ಲಾಂ ರಾಷ್ಟ್ರಗಳು ಎಂದು ಕರೆಯುತ್ತೇವೆಯೋ ಇರಾನ್, ಸಿರಿಯಾ, ಜೋರ್ಡಾನ್, ಕಜಕಿಸ್ತಾನ್ ಮುಂತಾದ ಅರಬ್ ದೇಶಗಳಿಂದ ಭಾರತಕ್ಕೆ ವಲಸೆ ಬಂದರು (ಆರ್ಯನ್ ಎನ್ನುವ ಪದ ಇರಾನ್ ಪದದ ಬದಲಾದ ರೂಪ ಎನ್ನುವವರಿದ್ದಾರೆ. ಇರಾನ್, ಜರ್ಮನ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹಲವು ಪದಗಳು ಕಾಮನ್ ಆಗಿರುವುದನ್ನು ಭಾಷಾ ವಿಜ್ಞಾನಿಗಳು ಗುರುತಿಸಿದ್ದಾರೆ ಕೂಡ). ಬೌದ್ಧಿಕವಾಗಿ ದ್ರಾವಿಡರಿಗಿಂತ ಹಲವು ಪಟ್ಟು ಮುಂದಿದ್ದ ಆರ್ಯರು ಬಹಳ ಸುಲಭವಾಗಿ ದ್ರಾವಿಡರ ಮೇಲೆ ಸವಾರಿ ಮಾಡತೊಡಗಿದರು. ಸಹಜವಾಗಿಯೇ ದ್ರಾವಿಡರು ಆರ್ಯರ ಗುಲಾಮರಾಗಬೇಕಾಯಿತು. ಆರ್ಯರ ಉಪಟಳವನ್ನು ಸಹಿಸಲಾಗದ ದ್ರಾವಿಡರು ಉತ್ತರ ಭಾರತದಿಂದ ಏಷ್ಯಾದ ವಿವಿಧ ಪ್ರದೇಶಗಳಿಗೆ ಓಡಿಹೋದರು. ಅದರಲ್ಲಿ ಹೆಚ್ಚಿನವರು ದಕ್ಷಿಣ ಭಾರತದ ಕಡೆಗೆ ಓಡಿಬಂದು ನೆಲೆಸಿದರು. ಆ ಕಾಲಕ್ಕೆ ದಕ್ಷಿಣ ಭಾರತ ದಟ್ಟ ಅರಣ್ಯವಾಗಿತ್ತು, ಆ ಕಾಡನ್ನೇ ನಾಡಾಗಿಸಿಕೊಂಡ ದ್ರಾವಿಡರು ಇಲ್ಲಿಯೇ ನೆಲೆಗೊಂಡರು. ಕಾಲದ ಗತಿಯಲ್ಲಿ ದ್ರಾವಿಡ ಭಾಷೆ ಒಡೆದು ಚೂರಾಗಿ ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮತ್ತಿತರ ಭಾಷೆಗಳಾಗಿ ರೂಪಾಂತರಗೊಂಡವು.

ದ್ರಾವಿಡರು ಬೌದ್ಧಿಕವಾಗಿ ಪ್ರಬಲರಾದ ಮೇಲೆ ಆರ್ಯ-ದ್ರಾವಿಡ ಕಾಳಗ ಇಂದಿನ ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಸಂಘರ್ಷಗಳಷ್ಟೇ ಪ್ರಬಲವಾಗಿ ನಡೆಯುತ್ತಿತ್ತು, ಅದನ್ನು ಶೈವ-ವೈಷ್ಣವ ಕಾಳಗ ಎಂದೂ ಸಹ ಇತಿಹಾಸಕಾರರು ಗುರುತಿಸಿದ್ದಾರೆ. ಆರ್ಯರ ಪಟ್ಟುಗಳಿಗೆ ಬಗ್ಗದೆ, ಅವರನ್ನು ಪ್ರಬಲವಾಗಿ ಎದುರಿಸಿದ ಅನಾರ್ಯರಾದ ರಾವಣ, ಹಿರಣ್ಯಕಶ್ಯಪು, ಮಹಿಷಾಸುರ ಮುಂತಾದ ಹೋರಾಟಗಾರರನ್ನು ಮೋಸದಿಂದ ಕೊಲ್ಲಿಸಿದ ಆರ್ಯರು ತಮ್ಮ ಪುರಾಣ 'ಪುಣ್ಯ' ಕಥೆಗಳಲ್ಲಿ ಅವರನ್ನು ಖಳನಾಯಕರಾಗಿ ಚಿತ್ರಿಸಿದರು. ಇಪ್ಪತ್ತೊಂದನೇ ಶತಮಾನದ ವಿಚಾರವಂತರಾದ ನಾವೂ ಸಹ ಆ ತಿರುಚಿದ ಇತಿಹಾಸದ ಸುಳ್ಳು ಕತೆಗಳನ್ನು ನಮ್ಮ ಮಕ್ಕಳಿಗೆ ಹೇಳಿಕೊಡುವಷ್ಟು ಪ್ರಭಾವಿತರಾಗಿದ್ದೇವೆ ಎಂದರೆ ಆರ್ಯರ ಚಾಣಾಕ್ಷ ಬುದ್ಧಿ ಯಾವ ಮಟ್ಟಿಗೆ ಕೆಲಸ ಮಾಡಿದೆ ಎಂದು ಅರ್ಥವಾಗುತ್ತದೆ.

ವೈದಿಕ ಧರ್ಮದ ಅನ್ಯಾಯವನ್ನು ಪ್ರತಿಭಟಿಸುತ್ತಲೇ ಹುಟ್ಟಿಕೊಂಡ ಜೈನ ಧರ್ಮ ಮತ್ತು ಬೌದ್ಧ ಧರ್ಮವನ್ನು ಕುಟಿಲತಂತ್ರಗಳಿಂದ ಹತ್ತಿಕ್ಕಿದ ಪುರೋಹಿತಶಾಹಿಗಳು ಈ ದೇಶಕ್ಕೆ ಇಸ್ಲಾಂ ಧರ್ಮ ಮತ್ತು ಕ್ರೈಸ್ತ ಧರ್ಮ ಪ್ರವೇಶಗೊಂಡ ನಂತರ ಅವುಗಳನ್ನು ಅಷ್ಟು ಸುಲಭವಾಗಿ ಬಗ್ಗು ಬಡಿಯಲು ಸಾಧ್ಯವಿಲ್ಲ ಎಂದು ಮನಗಂಡು ಆ ಹೋರಾಟಕ್ಕೆ ಬಾಹುಬಲ ಮತ್ತು ಸಂಖ್ಯಾಬಲ ಬೇಕೇಬೇಕೆಂದು ಮನಗಂಡ ಮೇಲೆ ಆರ್ಯರು ದ್ರಾವಿಡರ ಜೊತೆ ಉಪಾಯ ಅನುಸಂಧಾನ ಮಾಡಿಕೊಂಡರು. ಹಿಂದೂ ಸಂ (ದ್ರಾವಿಡ ಸಂಸ್ಕೃತಿ) ಮತ್ತು ವೈದಿಕ ಧರ್ಮದ ಸಂ ಣದಿಂದ 'ಹಿಂದೂ ಧರ್ಮ' ಎಂಬ ಹೊಸ ಹುಟ್ಟಿಕೊಂಡಿತು.

ಹಿಂದೂ ಧರ್ಮದ ನಾಲ್ಕು ಪ್ರಭೇದಗ ದ್ರಾವಿಡರಿಗೆ ಅಂದರೆ ಶೂದ್ರರಿಗೆ ನಾಲ್ಕನೆಯ 'ಪ ಸ್ಥಾನ'ವನ್ನು ದಯಪಾಲಿಸಿದರು. ಆ ಚಾತುರ್ವರ್ಣ ಮನುಷ್ಯನ ದೇಹದ ಅಂಗಗಳಿಗೆ ಹೋಲಿಸಿದ ವೈದಿ ಬ್ರಾಹ್ಮಣರು ಶಿರಸ್ಸಿನ ಭಾಗದಿಂದ ಹುಟ್ಟಿದವರು, ಯರು ಎದೆಯ ಭಾಗದಿಂದ ಹುಟ್ಟಿದವರು, ವೈ ಹೊಟ್ಟೆಯ ಭಾಗದಿಂದ ಹುಟ್ಟಿದರೆ, ಶೂದ್ರರು ಕಾ ಭಾಗದಿಂದ ಹುಟ್ಟಿದವರು ಎಂದು ಅವರವರ ಯೋ ತಾನುಸಾರವಾಗಿ ಅವರಿಗೆ ಸ್ಥಾನಮಾನಗಳನ್ನು ನೀಡಿದ ಹಿಂದೂಗಳು ನಾವೆಲ್ಲರೂ ಒಂದೇ ಎಂದು ಕೊಂಡರೂ ಸಹ ಯಾವುದೇ ಕಾರಣಕ್ಕೂ ಶೂದ ವೇದ-ಉಪನಿಷತ್ತುಗಳನ್ನು ಕಲಿಯಲು ಅರ್ಹರಲ್ಲ; ಒ ವೇಳೆ ಯಾವನಾದರೂ ಶೂದ್ರನೊಬ್ಬ ಅಪ್ಪಿತಪ್ಪಿಯಾದ ವೇದಮಂತ್ರಗಳನ್ನು ಕೇಳಿಸಿಕೊಂಡರೆ ಕೇಳಿದ ಆ ಕಿವಿಗ ಕಾದ ಸೀಸವನ್ನು ಸುರಿಯಬೇಕು ಎಂದು ಫರ್ಮಾ ಹೊರಡಿಸಿದರು. ಮೇಲ್ವರ್ಗದವರಾರೂ ಶೂದ್ರ ಮುಟ್ಟಿಸಿಕೊಳ್ಳುವಂತಿಲ್ಲ ಎನ್ನುವವರೆಗೆ 'ಪವಿತ್ರ ಹಿಂ ಧರ್ಮ'ದ ತತ್ವ ಸಿದ್ಧಾಂತಗಳು ಜಾರಿಯಾದವು. ಇಷ್ಟ ಹೇಳಿದ ಮೇಲೆ ಈಡಿಗ ಜನಾಂಗದ ವಿಚಾರವಂತ ನಾನು ಒಂದಷ್ಟು ಪ್ರಶ್ನೆಗಳನ್ನು ಕೇಳುತ್ತೇನೆ. ಈಗ ಈಡಿಗರು ಆರ್ಯರೇ? 'ಆರ್ಯ' ಪದದ ಅವ ಈಡಿಗರಿಗಿದೆಯೇ? ನಾವು ಆರ್ಯರು ಎಂದು ಹ ಕೊಳ್ಳುವುದು, ನಮ್ಮಪ್ಪ ಕಪ್ಪಾಗಿದ್ದಾನೆ ಎಂದು ಪ ಮನೆಯ ಬಿಳಿಯನನ್ನು 'ಅಪ್ಪ' ಎಂದು ಕರೆದು ನ ಶ್ರೇಷ್ಠ ಎಂದು ಹೇಳಿಕೊಂಡರೆ ಎಷ್ಟು ಅಸಹ ಎನಿಸುವುದೋ ನಾನು ಆರ್ಯ ಎಂದು ಹ ಕೊಳ್ಳುವುದೂ ಸಹ ಅಷ್ಟೇ ಅಸಹ್ಯಕರ ಅಲ್ಲವೆ? ಈಡಿ ಆರ್ಯರಲ್ಲ, ದ್ರಾವಿಡರು ಎಂದರೆ ಶ್ರೇಷ್ಠರಾಗುವುದಿಲ್ಲ

ನಮ್ಮಜ್ಜ ಹೇಳುತ್ತಿದ್ದರು 'ಈಡುಗ್ಗೌಡ, ಕುರು ಗೌಡ, ಗಂಗುಟಕಾರ್‌ಗೌಡ, ಗೊಲ್ಲಗೌಡ, ಮತ್ತಿನ್ನಾ ಒಂದ್ ಗೌಡ, ನಾವ್ ಐದ್‌ಗೌಡ್ರು ಒಂದೇ ತಾಯಿಮ ಅಣ್ಣತಮ್ಮಿರು' ಅಂತ. ಒಮ್ಮೆ ಇದೇ ಮಾತನ್ನೇ ಗೊ ಜನಾಂಗದ ಅಜ್ಜಿಯೊಬ್ಬಳು ಯಥಾವತ್ತಾಗಿ ಹೇಳಿದ ಇದಕ್ಕೆ ಏನೋ ಒಂದು ಐತಿಹಾಸಿಕ ಮಹತ್ವ ಎಂದು ಯೋಚಿಸಿದೆ. ಈಡಿಗರ ಕುಲಕಸುಬು ಹ ಸಾರಾಯಿ ಉದ್ಯಮವೇ ಆದರೂ ಬಹುಸಂಖ ಈಡಿಗರು ಕೃಷಿಕರಾಗಿದ್ದಾರೆ. ಈಡಿಗರಲ್ಲಿ ಪುಟ್ಟಸ್ವಾಮಿಗ ಚನ್ನೇಗೌಡ, ಪಾಪೇಗೌಡ, ಓಬೇಗೌಡ, ಕೊಂಡೇಗೌ ದಾಸೇಗೌಡ ಎಂಬಿತ್ಯಾದಿ ಹೆಸರುಗಳನ್ನು ಇಟ್ಟುಕೊ ರುವುದನ್ನು ಇಂದಿಗೂ ಸಹ ನಾವು ಎಲ್ಲೆಲ್ಲೂ ಕ ಬಹುದು. ಹಾಗಾಗಿ ಹಿಂದೆ ಚಾಲ್ತಿಯಲ್ಲಿದ್ದ 'ಈಡಿಗಗೌ ಎನ್ನುವುದೇ ಸರಿಯಾದ ಹೆಸರು. ಈಗಲೂ ಸಹ ನ ಹಳೇ ಮೈಸೂರು ಪ್ರಾಂತ್ಯದ ಹಳೆಯ ತಲೆಮಾ ಯಾವುದೇ ಈಡಿಗರನ್ನು 'ನೀವು ಯಾವ ಜನ?' ಎಂ ಕೇಳಿದರೆ 'ಈಡಿಗಗೌಡರು' ಎಂದು ಹೇಳುತ್ತಾರೆ. ಆ ಹೊಸ ತಲೆಮಾರಿನ ಯುವಕರು ಮಾತ್ರ 'ಆರ ಈಡಿಗರು' ಎನ್ನುತ್ತಾರೆ. ಅದರಲ್ಲಿ ಕೆಲವರು ತಮ್ಮ ಮಕ್ಕ ಸುರೇಶ್ ಆರ್ಯ, ಸಂತೋಷ ಆರ್ಯ, ಕಿರಣ್ ಆರ ಎಂದು ಹೆಸರಿಟ್ಟಿದ್ದಾರೆ. ಮಾತ್ರವಲ್ಲದೆ ಈಡಿಗರ ಮ ಮಹಾಸ್ವಾಮಿಗಳ ಹೆಸರೂ ಸಹ 'ಆರ್ಯ' ( ರೇಣುಕಾನಂದ ಸ್ವಾಮೀಜಿ ಎನ್ನುವಮಟ್ಟಿಗೆ ಈಡಿ ಆರ್ಯಾಲಂಕೃತರಾಗಿದ್ದಾರೆ.

## ಕೊನೆಯ ಭಿನ್ನಹ

ಎಲ್ಲಾ ದೃಷ್ಟಿಕೋನದಿಂದಲೂ 'ಆರ್ಯ ಈಡಿ ಎನ್ನುವುದು ಸರಿಯಾದ ಹೆಸರಲ್ಲ. 'ಈಡಿಗಗೌ ಎನ್ನುವುದೇ ಸೂಕ್ತವಾದ ಹೆಸರು. ಆದ್ದರಿಂದ ಆರ ಪದವನ್ನು ಕಿತ್ತೊಗೆದು ಗೌಡ ಪದವನ್ನೇ ಮುಂದ ರಿಸಬೇಕೆಂದು ಸಮಾಜದ ಹಿರಿಯರಲ್ಲಿ, ವಿಚಾರವಂತ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇಲ್ಲಾ 'ಆರ್ಯ ಈಡಿಗರು' ಎನ್ನುವುದ ಉಳಿಸಿಕೊಳ್ಳುತ್ತೇವೆ ಎನ್ನುವುದಾದರೆ ಅದಕ್ಕೆ ಬೇರೆಯ ಕೆಟ್ಟ ಅರ್ಥ ಪ್ರಾಪ್ತವಾಗುತ್ತದೆ. ಯಾಕೆಂದರೆ 'ಆರ ಈಡಿಗರು' ಎಂದರೆ ಬ್ರಾಹ್ಮಣರ ಅಥವಾ ವೈದಿ ಕಳ್ಳ ಬಸುರಿಗೆ ಹುಟ್ಟಿದ ಅಕ್ರಮ ಸಂತಾನವೇ 'ಈಡಿ ಎಂದು ನಾವೇ ಜಗತ್ತಿಗೆ ಸಾರಿ ಹೇಳಿದಂತಾಗುತ್ತದೆ. ಯೋಚಿಸಿ: ಆರ್ಯರೋ? ಗೌಡರೋ?

ಪ್ರಕಾಶರಾಜ್ ಮೇಹು



ಯೋಗೇಶ್ ಮಾಸ್ಟರ್

## ಪುರಾಣದ ಹೂರಣ

# ಲಲಿತೆ: ದ್ರಾವಿಡ ವನಿತೆ

ಲಲಿತೆ, ಸುಲಲಿತೆ, ಸಲಿಲತೆ, ಫಲವಂತಿ. ಏನೆಲ್ಲಾ ...ಳುವುದು ಆ ಒಂದು ಶಕ್ತಿಯ ಪರಿಕಲ್ಪನೆಗೆ. ಒಟ್ಟಾರೆ ...ಶಕ್ತಿದೇವತೆ.


### ಭಂಡಾಸುರನ ವೃತ್ತಾಂತವು

ಭಂಡಾಸುರನು ಹುಟ್ಟಿದ ಬಗೆಯೆಂದರೆ, ಶಿವನು ...ಯು ಅಥವಾ ದಾಕ್ಷಾಯಣಿಯು ಅಗ್ನಿಯಲ್ಲಿ ಬಿದ್ದು ...ಣಾಹುತಿ ಮಾಡಿಕೊಂಡ ಮೇಲೆ ತಪೋನಿರತನಾಗಿದ್ದಾಗ, ...ದ್ರಾದಿಗಳ ಕೋರಿಕೆಯ ಮೇರೆಗೆ ಮತ್ತು ಸ್ವಯಂಪ್ರೇಮ ...ದ ಪಾರ್ವತಿಯು ಶಿವಯೋಗಿಯ ಸೇವೆಯನ್ನು ...ಡುತ್ತಿದ್ದಳು. ಆಗ ಈ ಈರ್ವರ ನಡುವೆ ಕಾಮಾಂಕು ...ಗಲು ಇಂದ್ರನು ಮನ್ಮಥನನ್ನು ಕಳುಹಿಸಿದನು. ಆ ...ನ್ಮಥನನ್ನು ಶಿವನು ತನ್ನ ತಪೋಭಂಗ ಮಾಡಿದನೆಂದು ...ಟ್ಟು ಭಸ್ಮ ಮಾಡಿದಾಗ, ಆ ಚಿತಾಭಸ್ಮವನ್ನು ಚಿತ್ರಕರ್ಮ ...ಬ ಗಣೇಶ್ವರನು ಒಟ್ಟುಗೂಡಿಸಿ ಪುರುಷಾಕೃತಿಯನ್ನು ...ಡಿದನು. ಶಿವನು ಅದನ್ನು ನೋಡಿದ ಮಾತ್ರದಿಂದಲೇ ... ಆಕೃತಿಯು ಜೀವತಳೆಯಿತು. ಅವನು ಶತರುದ್ರೀಯ ...ಂತ್ರವನ್ನು ಜಪಿಸುತ್ತಾ ಶಿವನನ್ನು ಆರಾಧಿಸಿ ...ಿಸಿಕೊಂಡನು. ಅವನು "ಎಲೈ ಪರಮೇಶ್ವರನೇ, ...ನ್ನೊಡನೆ ಎದುರಾಳಿಯಾಗಿ ಯುದ್ಧ ಮಾಡುವವನ ...ದಲ್ಲಿ ಅರ್ಧಬಲವು ನನಗೇ ಸೇರಲಿ. ಅಲ್ಲದೇ ಶತ್ರುವಿನ ...ಯಲ್ಲಿ ಯಾವ ಯಾವ ಅಸ್ತ್ರಶಸ್ತ್ರಗಳಿರುತ್ತವೆಯೋ ಅವು ...ನ್ನು ವ್ಯಥೆಗೊಳಿಸದಿರಲಿ" ಎಂಬ ವರ ಕೇಳಿಕೊಂಡನು. ...ನು ಹೇಳಿದ್ದಕ್ಕೆ ಮರು ಯೋಚನೆ ಮಾಡದೇ ಶಿವನು ...ವನ್ನು ಅನುಗ್ರಹಿಸಲಾಗಿ ಬ್ರಹ್ಮನು ಶಿವನ ಈ ...ವಳಿಕೆಯನ್ನು ಕಂಡು "ಭಂಡ್ ಭಂಡ್" ಎಂದು ...ದ್ಗರಿಸಿದನು. ಹಾಗಾಗಿ ಅವನೇ ಭಂಡಾಸುರ.

ಮಹೇಶ್ವರನ ಕ್ರೋಧಾಗ್ನಿಯಿಂದ ಹುಟ್ಟಿದ ಅವನು ...ರ ದಾನವನಾದನು. ಅವನ ಬಳಿ ಎಲ್ಲಾ ಅಮೂಲ್ಯವಾದ ...ಸ್ತುಗಳಿದ್ದವು. ನಾಲ್ಕು ಜನ ಮಡದಿಯರು. ತನ್ನ ...ಜಧಾನಿಯಾದ ಶೋಣಿತಪುರವನ್ನು ದೈತ್ಯಶಿಲ್ಪಿ ...ಮನಿಂದಲೇ ನಿರ್ಮಿಸಿಕೊಂಡನು. ಅವನ ರಾಜಧಾ...ನಿಯಲ್ಲಿ ಮನೆಮನೆಗಳಲ್ಲಿಯೂ ಯಜ್ಞಯಾಗಾದಿಗಳು ...ಯುತ್ತಿದ್ದವು. ಬ್ರಾಹ್ಮಣ, ವೈಶ್ಯ ಕ್ಷತ್ರಿಯರ ಯಾಗಗಳಲ್ಲಿ ...ವತೆಗಳು ಹವಿಸ್ಸುಗಳನ್ನು ಸ್ವೀಕರಿಸುವಂತೆ ಈ ದಾನವರ ...ಜ್ಞಗಳಲ್ಲಿಯೂ ತಮ್ಮ ಯಾಗಫಲಗಳನ್ನು ...ಡುಕೊಳ್ಳುತ್ತಿದ್ದರು. ಹೀಗೆ ಅರವತ್ತು ಸಾವಿರ ವರುಷಗಳು ...ದವು.

ನಂತರ ಶೋಣಿತಾಪುರದಲ್ಲಿ ಭಂಡಾಸುರನು ...ರ್ಧಮಾನಕ್ಕೆ ಬರುತ್ತಿರುವುದನ್ನೂ, ದೇವತೆಗಳ ರಾಜನಾದ ...ನು ಕ್ರಮೇಣ ಕಳೆಗುಂದುತ್ತಿರುವುದನ್ನೂ ಶ್ರೀಮನ್ನಾರಾ...ಣನು ಗಮನಿಸಿದನು. ಭಂಡಾಸುರನ ವರ್ಚಸ್ಸನ್ನು ಮತ್ತು ...ಾವವನ್ನು ನಾಶಮಾಡಲು ಮಾಯೆಯನ್ನು ಸೃಜಿಸಿ ...ಳನ್ನು ಭಂಡಾಸುರನ ಬಳಿಗೆ ಕಳುಹಿಸಿದನು. ಅವನೋ ...ಳಲ್ಲಿ ಕಾಮವಶನಾಗಿ ತನ್ನೆಲ್ಲಾ ಯಜ್ಞಯಾಗಾದಿಗಳನ್ನು, ...ರ್ಮ ನಡಾವಳಿಗಳನ್ನು ಬಿಟ್ಟುಬಿಟ್ಟನು. ಅವನ ...ಭಿಷೇಕಕ್ಕೆ ಮತ್ತು ಅವನಲ್ಲಿನ ಅತ್ಯುತ್ತಮ ಸಂಪತ್ತಿನ ...ಗ್ರಹಕ್ಕೆ ಕಾರಣನಾದ ದೈತ್ಯಗುರು ಶುಕ್ರಾಚಾರ್ಯನು ...ನೈತಿಕ ಪತನವನ್ನು ಪ್ರಶ್ನಿಸಲು ಬಂದಾಗ ಅವರ ...ತನ್ನು ಕೇಳದೇ ಅವರನ್ನು ತಿರಸ್ಕರಿಸಿದನು. ಹೀಗಾಗಿ ...ದ್ರನು ಭಂಡಾಸುರನ ಹಿಡಿತದಿಂದ ಪಾರಾದನು. ಆದರೆ ...ದನು ಅವನ ಬಳಿಗೆ ಬಂದು "ಈಗಲಾದರೋ ಅವನು ...ನ್ನ ಮಾಯೆಯಿಂದ ಪ್ರಭಾವಿತನಾಗಿ ಕಾಮಪುರುಷಾರ್ಥಗಳಲ್ಲಿ ತೊಡಗಿರುವನು. ಒಂದು ವೇಳೆ ಅವನು ಅದರಿಂದ ಎಚ್ಚೆತ್ತುದೇ ಆದರೆ, ಅವನೇ ಯಜ್ಞೇಶ್ವರನಂತೆ ಮೂರು 'ಲೋಕಗಳನ್ನೂ ಸುಡುವನು" ಎಂದು ಎಚ್ಚರಿಸಿದನು. ಅದರಂತೆ ಅವನನ್ನು ಪರಾಶಕ್ತಿಯಿಂದ ಸಂಹರಿಸಲು ಇಂದ್ರನು ನಾರದನ ಉಪದೇಶದಂತೆ ಹಿಮಗಿರಿಯ ತಪ್ಪಲಲ್ಲಿ ಗಂಗಾನದಿಯ ದಡದಲ್ಲಿ ಪರಾಶಕ್ತಿಯನ್ನು ಬಹುವಿಧವಾದ ಪೂಜೆಯನ್ನು ಯಾಗವಿಧಾನದಿಂದ ಮಾಡಿದನು. ಆಗ ಯಜ್ಞಕುಂಡದಿಂದ ಪರಮ ತೇಜಃಪುಂಜವೂ, ಅನುಪಮವೂ ಆದ ಚಕ್ರಾಕಾರವು ಉದ್ಭವಿಸಿತು. ಆ ಚಕ್ರದ ಮಧ್ಯದಿಂದ ತೇಜಸ್ವಿನಿಯಾದ ಲಲಿತಾದೇವಿಯು ಷೋಡಶಿಯಾಗಿ ಮೂಡಿಬಂದಳು.





ಅವಳನ್ನು ಕನ್ಯೆಯಾಗಿಯೇ ಯುದ್ಧಕ್ಕೆ ಕಳುಹಿಸಲಾಗದ ಕಾರಣ ಆಕೆಯನ್ನು ಶ್ರೀಚಕ್ರನಗರದ ಸಿಂಹಾಸನವನ್ನೇರಿಸಿ, ಮಹಾರಾಜ್ಞಿಯನ್ನಾಗಿ ಮಾಡಿ, ನಂತರ ಆಕೆಗೆ ಸ್ವಯಂವರವನ್ನು ನಡೆಸಲಾಗುವುದು. ಆಗ ಕಾಮೇಶ್ವರನ ರೂಪದಲ್ಲಿದ್ದ ಶಿವನನ್ನು ಅವಳು ವರಿಸುವಳು. ನಂತರ ತನ್ನದೇ ಶಕ್ತಿಗಣದ ಅಪಾರ ಗಾತ್ರದ ಸೈನ್ಯವನ್ನು ತೆಗೆದುಕೊಂಡು ಹೋಗಿ ಭಂಡಾಸುರನ ಮೇಲೆ ದಂಡೆತ್ತಿದಳು. ಭಂಡಾಸುರನನ್ನು ವಧಿಸಿದಳು. ಶೋಣಿತಪುರವನ್ನು ನಾಶಮಾಡಿದಳು. ದೇವತೆಗಳನ್ನು ಸಂರಕ್ಷಿಸಿದಳು.

ಈ ಕಥೆಯಲ್ಲಿ ಲಲಿತೆಯ ಉಗಮವು ಇತರೇ ಎಲ್ಲಾ ದೇವಿಯರ ಉಗಮದಂತೆ ಕಾರ್ಯನಿಮಿತ್ತ ಆಗುವುದಾದರೂ, ಭಂಡಾಸುರನ ವೃತ್ತಾಂತವೇ ಅತ್ಯಂತ ಕುತೂಹಲಕರವಾದದ್ದು.

ದಾನವನಾದ ಭಂಡಾಸುರನು ಸಾಮಾನ್ಯವಾಗಿ ಋಷಿಮುನಿಗಳ ಯಜ್ಞಯಾಗಾದಿಗಳನ್ನು ಹಾಳು ಮಾಡುವವರಾದರೂ ಈ ವೃತ್ತಾಂತದಲ್ಲಿ ಅವರು ಯಾಗಾದಿಗಳನ್ನು ಮಾಡುವ ಆರ್ಯರ ವೈದಿಕ ನಡಾವಳಿಗಳನ್ನು ರೂಢಿಸಿಕೊಂಡಿರುತ್ತಾರೆ. ಅವರು ಅವುಗಳನ್ನು ಬಹುಕ್ರಮದಲ್ಲಿ ಮಾಡುತ್ತಾ ದೇವತೆಗಳ ರಾಜನಾದ ಇಂದ್ರನನ್ನೂ, ಇತರ ದೇವತೆಗಳನ್ನೂ ತಮ್ಮ ಅಧಿಕಾರ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾನೆ. ಆದರೂ ಆಡಳಿತಾತ್ಮಕವಾದ, ಅಧಿಕಾರವುಳ್ಳ ಸ್ಥಾನದಿಂದ ವಂಚಿತನಾಗಿದ್ದ ಇಂದ್ರನ ಕಳಾಹೀನತೆಯನ್ನು ನೋಡಿದ ವಿಷ್ಣುವು ಹೆಣ್ಣೊಂದನ್ನು ಕಳುಹಿಸಿ ಭಂಡಾಸುರನನ್ನೂ ಮತ್ತು ಅವನ ಮಂತ್ರಿಗಳನ್ನೂ ಮರಳು ಮಾಡಿ ಕರ್ತವ್ಯ ಭ್ರಷ್ಟರಾಗುವಂತೆ ಮಾಡುತ್ತಾರೆ. ಅದರಿಂದ ದೇವತೆಗಳು ಅವನ ಅಧಿಕಾರ ಪ್ರಭಾವದಿಂದ ಹೊರಗುಳಿಯುತ್ತಾರೆ. ನಂತರ ಅವನು ಆ ಮಾಯೆಯಿಂದ ಹೊರಗೆ ಬಂದರೆ ಮತ್ತೆ ತಮ್ಮ ಸ್ವಾತಂತ್ರ್ಯಕ್ಕೆ ಭಂಗ ಬರುವುದೆಂದು ಅವನನ್ನು ಕೊಲ್ಲಲು ಲಲಿತೆಯನ್ನು ಸೃಜಿಸಿ ಯುದ್ಧಕ್ಕೆ ಕಳುಹಿಸುತ್ತಾರೆ ಮತ್ತು ಅದರಲ್ಲಿ ಸಫಲರಾಗುತ್ತಾರೆ.

ದಾನವರ ಗುರು ಶುಕ್ರಾಚಾರ್ಯನ ಪ್ರಭಾವದಿಂದಾಗಿ ಯಜ್ಞಯಾಗಾದಿಗಳಲ್ಲಿ ತೊಡಗಿದ್ದರೆಂದರೆ, ಆ ಶುಕ್ರಾಚಾರ್ಯನು ಬ್ರಾಹ್ಮಣನಾಗಿದ್ದು ದಾನವರ ಪರವಾಗಿದ್ದವನು ಹಾಗೂ ವೈದಿಕ ಕ್ರಿಯೆಗಳನ್ನು ದಾನವರಿಗೂ ಕೂಡ ಕಲಿಸಿದ್ದನು. ಅವರೂ ಅದೇ ಶ್ರದ್ಧೆಯನ್ನು ಉಳ್ಳವರಾಗಿದ್ದರು. ತಮ್ಮದೇ ಆದಂತಹ ವೈದಿಕ ಕ್ರಿಯೆಗಳನ್ನು ಮಾಡುತ್ತಿದ್ದರೂ ಆರ್ಯರು ಸಹಿಸದಾದ ಕಾರಣ ಪ್ರಾಯಶಃ ಜನಾಂಗೀಯ ದ್ವೇಷ. ದಾನವರು ದ್ರಾವಿಡಾದಿಯಾಗಿ ಮೂಲನಿವಾಸಿಗಳಾಗಿದ್ದು ಆರ್ಯರ ಸಾಂಪ್ರದಾಯಕ ವಿರೋಧಿಗಳಾಗಿದ್ದವರು. ಹಾಗಾಗಿ ಮತ್ತೆ ತಮ್ಮ ತೆಕ್ಕೆಗೇ ಅಧಿಕಾರವನ್ನು ಪಡೆಯಲು ಸ್ತ್ರೀಶಸ್ತ್ರವನ್ನು ಉಪಯೋಗಿಸಿ ನೈತಿಕವಾಗಿಯೂ, ಭೌತಿಕವಾಗಿಯೂ ಅವರನ್ನು ಇಲ್ಲವಾಗಿಸಿದರು ಎಂದು ವಿಶ್ಲೇಷಣೆ ಮಾಡಬಹುದಾಗಿರುತ್ತದೆ.

ಇಲ್ಲೊಂದು ಸ್ವಾರಸ್ಯಕರ ಅಂಶವೆಂದರೆ, ಹಯಗ್ರೀವ ಮುನಿಯಿಂದ ಅಗಸ್ತ್ಯರಿಗೆ ಈ ಕಥೆಯ ಮನನವಾಯ್ತು. ಅಗಸ್ತ್ಯನು ದ್ರಾವಿಡನಾಗಿದ್ದು, ತಮಿಳು ಭಾಷೆಯನ್ನು ಬಲ್ಲವನಾಗಿದ್ದನು. ಅಗಸ್ತ್ಯ ಮುನಿಯು ತನಗೆ ಹಯಗ್ರೀವ ಋಷಿಯಿಂದ ನಿರೂಪಿತವಾದ ಈ ಕಥೆಯೆಂದು ಹೇಳಲಾಗುವ ಇದರಲ್ಲಿ ದಕ್ಷಿಣ ಭಾರತದ ವಾಸನೆ ಢಾಳಾಗಿದೆ. ಅದರಲ್ಲೂ ದ್ರಾವಿಡ ಸಂಪ್ರದಾಯಗಳು ನೇರವಾಗಿ ಕಾಣುತ್ತವೆ.

### ಆದಿಶಕ್ತಿ ಆದಿಮಾ

ಆದಿಮ ಕಾಲದಲ್ಲಿ ದ್ರಾವಿಡರಾದಿಯಾಗಿ ಇತರ ಬುಡಕಟ್ಟುಗಳ ಗಣಗಳು ಉತ್ತರಭಾರತ ದಕ್ಷಿಣ ಭಾರತದ ವ್ಯತ್ಯಾಸವಿಲ್ಲದೇ ಇದ್ದಂತವುಗಳು. ಅವರ ಅರಿವಿನ ಪ್ರಕಾರ ಸ್ತ್ರೀಯೇ ಸೃಷ್ಟಿಕರ್ತೆ. ಪ್ರಾಣಿಸಹಜವಾಗಿ ಕಾರಣ ಪರಿಣಾಮಗಳನ್ನು ತಿಳಿಯದೇ ಬದುಕಿದ್ದ ಆ ಕಾಲದಲ್ಲಿ ಹೆರುತ್ತಿದ್ದ ಹೆಣ್ಣಿನ ಅದ್ಭುತ ಶಕ್ತಿ ಜನ್ಮ ಕೊಡುವುದು ಎಂದು ತಿಳಿದಿದ್ದರು. ಹಾಗಾಗಿ ಅವರು ಹೆಣ್ಣಿನ ಯೋನಿಯನ್ನು ಪೂಜಿಸುತ್ತಿದ್ದರು. ಹಾಗಾಗಿಯೇ ಹೆಣ್ಣಿಂದಲೇ ಬ್ರಹ್ಮಾಂಡದ ಉತ್ಪತ್ತಿ ಎಂದು ಗಾಢವಾಗಿ ನಂಬಿದ್ದರು. ಇದೇ ನಂಬಿಕೆಯು ಪುರಾಣಗಳಲ್ಲಿ ದೇವಿಯಿಂದಲೇ ಬ್ರಹ್ಮಾಂಡ ಸೃಷ್ಟಿಯಾಯಿತು ಎಂದು ವಿವರಣೆಯಾಗಿದೆ. ಆದರೆ ಅವರಿಗೆ ಹೆಣ್ಣಾದವಳು ಮಗುವನ್ನು ಹೆರಲು ಕಾರಣ ಗಂಡಿನೊಡನೆ ನಡೆಸುವ ಲೈಂಗಿಕ ಕ್ರಿಯೆ ಎಂದು ಗೊತ್ತಿರಲಿಲ್ಲ, ಮುಖ್ಯವಾಗಿ ಹೇಳುವುದಾದರೆ ಲೈಂಗಿಕ ಕ್ರಿಯೆಗೂ ಮತ್ತು ಜನ್ಮ ನೀಡುವ ಕ್ರಿಯೆಗೂ ಸಂಬಂಧದ ಅರಿವು ಇರಲಿಲ್ಲ. ಆದರೆ ಕಾಲಾಂತರದಲ್ಲಿ ಪುರುಷನ ಭಾಗವಹಿಸುವಿಕೆಯೂ ಮಗುವಿನ ಜನ್ಮಕ್ಕೆ ಕಾರಣವಾಗುವುದು ಎಂದು ತಿಳಿದನಂತರ ಬಹುಪಾಲು ಅವರ ಪೂಜಾದೃಷ್ಟಿ ಶಿಶ್ನದ ಕಡೆ ಹರಿಯಿತು. ಇನ್ನೂ ನಂತರದ ಕಾಲದಲ್ಲಿ ಎರಡನ್ನೂ ಕೂಡಿಸಿ ಪೂಜಿಸುವ ಸಂಪ್ರದಾಯವು ಬೆಳೆದದ್ದು ಶಿವಶಕ್ತಿಯ ಪರಿಕಲ್ಪನೆಗೆ ಕಾರಣವಾಯಿತು. ಮೇಲ್ಮುಖವಾಗಿರುವ ತ್ರಿಕೋಣವು ಶಿಶ್ನ ಸೂಚಕವಾದರೆ, ಕೆಳಮುಖವಾದ ತ್ರಿಕೋಣವು ಯೋನಿ ಸೂಚಕವಾಯಿತು. ಇವೆರಡನ್ನೂ ಕೂಡಿಸಿದಾಗ ಆಗುವಂತಹ ನಕ್ಷತ್ರಾಕಾರವನ್ನು ಶಿವಶಕ್ತಿಯೆಂದು ಗುರುತಿಸಲಾಯಿತು. ಇದು ದ್ರಾವಿಡ ಕಲ್ಪನೆ. ದ್ರಾವಿಡರ ಮತ್ತು ಇತರ ಬುಡಕಟ್ಟುಗಣಗಳ ಲಿಂಗ-ಯೋನಿ ಸಂಬಂಧಿತ ಆಚರಣೆಗಳು ತಂತ್ರವಿಧಿಗಳ ಮೂಲವಾಗಿವೆ.

ಪೂಜೆಯ ಪರಿಕಲ್ಪನೆಯು ಸಂಪೂರ್ಣವಾಗಿ ದ್ರಾವಿಡರದ್ದು, ಪೂ- ತಮಿಳಿನ ಹೂವು ಎಂಬ ಪದ ಇದರ ಮೂಲ ಪದ. ಆರ್ಯರ ಆಚರಣೆಯಲ್ಲಿ ಪೂಜೆಯೆಂಬುದೇ ಇರಲಿಲ್ಲ, ಅವರೇನಿದ್ದರೂ ಪ್ರಕೃತಿಯನ್ನು ಸ್ತುತಿಸುತ್ತಿದ್ದರು. ಅಲೆಮಾರಿಗಳಾಗಿದ್ದ ಅವರು ಪ್ರಕೃತಿಯಲ್ಲಿನ ಸಂಪನ್ಮೂಲಗಳನ್ನು ತಮ್ಮ ಬಳಕೆಗೆ ಬಯಸುತ್ತಾ ಲೌಕಿಕವಾಗಿ ಪ್ರಾರ್ಥಿಸುತ್ತಿದ್ದರು. ಮುಂದೆ ಪ್ರಕೃತಿಯಲ್ಲಿನ ಸ್ಥಿತಿಗಳಿಗೆ ಅಧಿಪತಿಗಳಾಗಿದ್ದ ದೇವತೆಗಳನ್ನು ಶಕ್ತಿಯುತರನ್ನಾಗಿ ಮಾಡಲು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಅಗ್ನಿಯ ಮೂಲಕವೇ ಅವರ ಆಚರಣೆಗಳು ನಡೆಯುತ್ತಿದ್ದು, ದ್ರಾವಿಡರು ನೀರನ್ನು ಬಹುವಾಗಿ ಆಚರಣೆಯ ಅಂಗವಾಗಿ ಅವಲಂಬಿಸಿದ್ದರು.

ಆರ್ಯ ದ್ರಾವಿಡರ ಪರಸ್ಪರ ಪ್ರಭಾವದಿಂದಾಗಿ ಸೂರ್ಯನಿಗೆ ಅರ್ಘ್ಯ (ನೀರು) ತರ್ಪಣ ನೀಡುವಂತಹ ಮತ್ತು ಆರ್ಯರೂ ಪೂ- ಅಥವಾ ಹೂವನ್ನು ಅರ್ಪಿಸಿ ಪೂಜೆಯನ್ನು ಮಾಡುವಂತಹ ಸಂಪ್ರದಾಯವನ್ನು ರೂಢಿಸಿಕೊಂಡರು.

ಹಾಗೆಯೇ ಹೆಣ್ಣಿಗೆ ಮದುವೆಯ ಸಮಯದಲ್ಲಿ ಮಾಂಗಲ್ಯಧಾರಣೆಯೂ ಕೂಡ ದ್ರಾವಿಡರದಾಗಿದ್ದು, ಅರಿಶಿನದ ಕೊಂಬನ್ನು ಅರಿಶಿನದ ದಾರದಲ್ಲಿ ಕಟ್ಟುತ್ತಲಿದ್ದು, ಅದರ ಬಣ್ಣವನ್ನೇ ಹೋಲುವ ಚಿನ್ನವನ್ನು ಮಾಂಗಲ್ಯವನ್ನಾಗಿ ನಂತರದ ದಿನಗಳಲ್ಲಿ ಸಿರಿವಂತರು ಮಾಡಿಕೊಂಡರು.

ಲಲಿತೋಪಖ್ಯಾನದಲ್ಲಿ ಪೂಜೆ, ಮಾಂಗಲ್ಯ ಇತ್ಯಾದಿಗಳ ದ್ರಾವಿಡ ಅಂಶಗಳು ಧಾರಾಳವಾಗಿ ಕಾಣಬರುವುದರಿಂದ ಲಲಿತೆಯು ದ್ರಾವಿಡ ಮುನಿ ಅಗಸ್ತ್ಯರ ಕೊಡುಗೆಯೆಂದೇ ನನಗೆ ತೋರುತ್ತದೆ.

ಕಾಮೇಶಬದ್ಧ ಮಾಂಗಲ್ಯಸೂತ್ರಶೋಭಿತಕಂಧರಾ - ತನ್ನ ಕಾಮೇಶನಿಂದ ಕಟ್ಟಲ್ಪಟ್ಟ ಮಾಂಗಲ್ಯಸೂತ್ರದಿಂದ ಶೋಭಿಸುತ್ತಿರುವ ಕಂಠವುಳ್ಳವಳು.


### ಕುಲದೇವತೆ

ಮೂಲದಲ್ಲಿ ದ್ರಾವಿಡಾದಿ ಇತರ ಬುಡಕಟ್ಟುಗಣಗಳು ಕುಲಗಳನ್ನು ತಾಯಿಯಿಂದ ಗುರುತಿಸುವ ವಾಡಿಕೆಯಿರುವುದನ್ನು ಸ್ಮರಿಸಿಕೊಳ್ಳುವುದಾದರೆ, ಕುಲಾಂಗನಾ, ಕುಲಸಂಕೇತಪಾಲಿನಿ, ಕುಲಾಂತಸ್ಥಾ, ಕೌಲಿನಿ, ಕುಲಯೋಗಿನಿ -ಈ ಎಲ್ಲಾ ಗುಣನಾಮಗಳು ಅವಳು ಕುಲಕ್ಕೆ ಸೇರಿರುವವಳು, ಕುಲದ ಸಂಕೇತಗಳನ್ನು ಪಾಲಿಸುತ್ತಿರುವವಳು ಎಂದೆಲ್ಲಾ ಹೇಳುತ್ತದೆ. ಕುಲವೆಂದರೆ; ಜನಪದ, ಗೃಹ, ಸಜಾತೀಯ ಗಣ, ಗೋತ್ರ ಇತ್ಯಾದಿಗಳಾಗಿ ಅರ್ಥೈಸಬಹುದು. ಕುಲವೆಂದು ಹೆಣ್ಣಿನ ಹೆಸರಿನಿಂದ ಹೇಳುವುದಾದರೆ ಅದು ಅವೈದಿಕ ಸಂಪ್ರದಾಯದ್ದಾಗಿರುತ್ತದೆ. ವೈದಿಕ ಬ್ರಾಹ್ಮಣರು ಮತ್ತು ಇತರೇ ಆರ್ಯ ವರ್ಣಗಳು ತಮ್ಮ ತಮ್ಮ ಕುಲಗಳನ್ನು ತಂದೆಯ ಗೋತ್ರದಿಂದ ಗುರುತಿಸಿಕೊಳ್ಳಲ್ಪಡುತ್ತವೆ.

ಹೀಗೆಲ್ಲಾ ಲಲಿತೆಯ ದ್ರಾವಿಡ ಮೂಲವನ್ನು ಅರಸುತ್ತಾ ಹೋದರೆ, ಅವಳು ಸುರರ ಮಾತುಗಳನ್ನು ಕೇಳಿಕೊಂಡು ಏಕೆ ಭಂಡಾಸುರರನ್ನು ಕೊಲ್ಲಲು ಹೋದಳು? ಭಂಡಾಸುರನಾದರೂ ಕೂಡ ಆರ್ಯರ ನಡಾವಳಿಗಳನ್ನು, ಸಂಪ್ರದಾಯಗಳನ್ನು ಪಾಲಿಸುತ್ತಿದ್ದು, ಆರ್ಯರನ್ನು ತನ್ನ ಕೈಹಿಡಿತದಲ್ಲಿಟ್ಟುಕೊಂಡಿದ್ದವನು. ಬಹುಶಃ ಶುಕ್ರಾಚಾರ್ಯನು ಆರ್ಯರನ್ನು ಅನುಸರಿಸುತ್ತಾ ಆರ್ಯರ ಸಾಮ್ರಾಜ್ಯವನ್ನು ತಮ್ಮ ಕೈವಶ ಮಾಡಿಕೊಳ್ಳಲು ಯತ್ನಿಸಿದ್ದಿರಬಹುದು. ಆದರೆ ಇದೇ ಆರ್ಯೇತರ ಹೆಣ್ಣು ಭಂಡಾಸುರನ ಕೊಲ್ಲಲು ಪ್ರೇರಿತವಾಗಿದ್ದು ಬಹು ಕುತೂಹಲ. ಅದೇನೇ ಆಗಲಿ, ಐತಿಹಾಸಿಕವಾಗಿ ಈ ಕಥೆಯನ್ನು ಬಿದಕಲು ಸಾಧ್ಯವಾಗದೇ ಹೋದರೂ, ಸಾಂಸ್ಕೃತಿಕವಾಗಿ ಒಂದು ಅಂಶವನ್ನು ಗಮನಿಸಬಹುದು. ಆರ್ಯರ ಪರನಾದ ವಿಷ್ಣುವು, ಶಿವಪರವಾಗಿದ್ದ ದ್ರಾವಿಡರನ್ನು ಕಾಡುತ್ತಿದ್ದನು. ಅವರ ಮೇಲೆ ಅಧಿಪತ್ಯ ಸ್ಥಾಪಿಸಲು ಯತ್ನಿಸುತ್ತಿದ್ದನು. ಆರ್ಯರ ಮತ್ತು ದ್ರಾವಿಡರ ಸಂಘರ್ಷವನ್ನು ಶೈವ ಮತ್ತು ವೈಷ್ಣವ ಸಂಘರ್ಷವೆಂದೇ ಗುರುತಿಸಬಹುದು. ಈ ಸಂಘರ್ಷವು ಬಹು ಗಾಢವಾಗಿದ್ದರೂ ಮುಂದೊಂದು ದಿನದಲ್ಲಿ ದ್ರಾವಿಡ ಬ್ರಾಹ್ಮಣರು (ಸಾಂಪ್ರದಾಯಿಕ ಆರ್ಯ ಬ್ರಾಹ್ಮಣರು ಇಂಥವರನ್ನು ಕರಿ-ಬ್ರಾಹ್ಮಣರು ಎಂದೇ ಆಡಿಕೊಳ್ಳುವ ವಾಡಿಕೆಯಿತ್ತು) ಹುಟ್ಟಿಕೊಂಡಾದ ಮೇಲೆ ಆರ್ಯರ ವಿಷ್ಣುವನ್ನೂ ಮತ್ತು ದ್ರಾವಿಡರ ಶಿವನನ್ನೂ ಸಮವಾಗಿ ಪೂಜಿಸುವ ಪದ್ಧತಿ ಬೆಳೆದಿರಬೇಕು. ಇದರ ಹೊರತಾಗಿ ನೋಡಿದರೆ, ಆರ್ಯರು ಶಿಶ್ನಾರಾಧಕರಲ್ಲ, ಅಂದರೆ ಲಿಂಗಾರಾಧಕರಲ್ಲ, ಪೂಜೆಯನ್ನೂ ಮಾಡುತ್ತಿದ್ದವರಲ್ಲ, ತಾಳಿಯನ್ನು ಕಟ್ಟುತ್ತಿದ್ದವರಲ್ಲ, ಸ್ತ್ರೀ ಪ್ರಾತಿನಿಧ್ಯ ಕೊಡುತ್ತಿದ್ದವರಲ್ಲ.


ಭಂಡನೆಂಬ ಅಸುರನೂ, ಅಸುರನಿಗಿಂತ ಭಯಂಕರ ಮಾರಿಯಾಗಿ ಮಾರ್ಪಡುವ ಸುಂದರಿ ಲಲಿತೆಯನ್ನು ಸಾಂಸ್ಕೃತಿಕವಾಗಿಯಲ್ಲದೇ, ಧಾರ್ಮಿಕವಾಗಿಯಲ್ಲದೇ, ತಾಂತ್ರಿಕ ಆಚರಣಾ ರೀತಿಯಲ್ಲಿ ಅಲ್ಲದೇ ಮನೋವೈಜ್ಞಾನಿಕವಾಗಿ ನೋಡುವ ಒಂದು ಅಪೂರ್ವ ದೃಷ್ಟಿಯೊಂದಿಗೆ. ಅದೇ "ದ ಪವರ್ ಆಫ್ ಸಬ್ ಕಾನ್ಶಸ್ ಮೈಂಡ್"!

# ಕಪ್ಪು ಹಣಕ್ಕೆ ಮೋದಿ ಮಿತ್ರ ಜೇಟ್ಲಿ ಬೆಂಬಲ




ಕಪ್ಪುಹಣದ ಬಗ್ಗೆ ಯುಪಿಎ ಸರ್ಕಾರವನ್ನು ಸಿಕ್ಕಾಬಟ್ಟೆ ತರಾಟೆಗೆ ತೆಗೆದುಕೊಳ್ಳುತ್ತಿರುವ ಮೋದಿ ಮತ್ತಾತನ ಬೆಂಬಲಿಗರಿಗೆ ಬಹುಶಃ ಮರೆವಿನ ಸಮಸ್ಯೆ ಇರಬೇಕು ಅಥವಾ ಅವರು ಉದ್ದೇಶಪೂರ್ವಕವಾಗಿ ಸತ್ಯಾಂಶಗಳನ್ನು ಮರೆಮಾಚುತ್ತಿದ್ದಾರೆ. ಏಕೆಂದರೆ ಇವರ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಖುದ್ದು ಸರ್ಕಾರವೇ ಆಸಕ್ತಿ ವಹಿಸಿ ಕಾಳದಂಧೆಕೋರರಿಗೆ ಸಕಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿತ್ತು, ಬಿಜೆಪಿ ಮತ್ತದರ ಮಿತ್ರ ಪಕ್ಷಗಳ ಸರ್ಕಾರ ಕಾಳದಂಧೆಕೋರರಿಗೆ ಮಂಡಿಯೂರಿದ ಆ ಸ್ವಾರಸ್ಯಕರ ಕತೆ ಇಲ್ಲಿದೆ.

ಕೇಂದ್ರದಲ್ಲಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಆಡಳಿತದಲ್ಲಿದ್ದ ಕಾಲವದು. ಆಗ 2001ರ ಆಸುಪಾಸಿನಲ್ಲಿ ಮಾರಿಷಿಯಸ್ ಮೂಲದ ಹಲವು ಕಂಪೆನಿಗಳು ಏಕಾಏಕಿಯಾಗಿ ಭಾರಿ ದೊಡ್ಡ ಮಟ್ಟದಲ್ಲಿ ಭಾರತದಲ್ಲಿ ಬಂಡವಾಳ ಹೂಡತೊಡಗಿದವು. ಇದು ಆದಾಯ ತೆರಿಗೆ ಇಲಾಖೆಯ ಗಮನಕ್ಕೆ ಬಂದಾಗ ಇದರ ಕುರಿತು ತನಿಖೆ ಆರಂಭವಾಯಿತು. ಅಂದು ಕೆಲವು ಭಾರತೀಯರು ಮಾರಿಷಿಯಸ್‌ನಲ್ಲಿ ಕಂಪೆನಿಗಳನ್ನು ಹುಟ್ಟುಹಾಕಿ ಅವುಗಳ ಮುಖಾಂತರ ಭಾರತದಲ್ಲಿ ಹೂಡಿಕೆ ಮಾಡುತ್ತಿದ್ದ ವಿಷಯ ತನಿಖೆಯಿಂದ ಬಯಲಾಯಿತು. ಆ ಕಾಲದಲ್ಲಿ ಎರಡೆರಡು ಬಾರಿ ತೆರಿಗೆ ಪಾವತಿಯಾಗುವುದನ್ನು ತಪ್ಪಿಸುವುದಕ್ಕಾಗಿ ಉಭಯ ದೇಶಗಳ ನಡುವೆ ಒಂದು ಒಪ್ಪಂದ (ಡಿಟಿಎಸಿ) ಜಾರಿಯಲ್ಲಿತ್ತು. ಕೆಲವು ಜಾಣ ಹೂಡಿಕೆದಾರರು ಏನು ಮಾಡುತ್ತಿದ್ದರೆಂದರೆ ಮಾರಿಷಿಯಸ್‌ನಲ್ಲಿ ಶೂನ್ಯ ತೆರಿಗೆಯ ಸೌಲಭ್ಯವಿರುವ ನಕಲಿ ಕಂಪೆನಿಗಳನ್ನು ಸ್ಥಾಪಿಸಿ ಆ ಕಂಪೆನಿಗಳ ಮೂಲಕ ಭಾರತದಲ್ಲಿ ಹೂಡಿಕೆ ಮಾಡಿ ಇಲ್ಲೂ ತೆರಿಗೆ ವಿನಾಯಿತಿ ಪಡೆಯುತ್ತಿದ್ದರು! ಹಾಗೆ ಉಳಿತಾಯ ಮಾಡಿದ್ದೆಲ್ಲ ಕಪ್ಪುಹಣವಾಗಿತ್ತು!! ತೆರಿಗೆ ಇಲಾಖೆಯ ತನಿಖೆ ವಿವಾದದ ಬಿರುಗಾಳಿಯನ್ನೆ ಎಬ್ಬಿಸಿತು. ಕಾಳಧನ ಸಂಗ್ರಾಹಕರೆಲ್ಲ ಎನ್‌ಡಿಎ ಸರ್ಕಾರದ ಮೊರೆಹೋಗಿ ತಮ್ಮ ನೆರವಿಗೆ ಬರುವಂತೆ ಗೋಗರೆದರು. ಅಂತೆಯೇ 2002ರಲ್ಲಿ ಸುತ್ತೋಲೆಯೊಂದನ್ನು ಹೊರಡಿಸಿದ ಸರ್ಕಾರ ಮಾರಿಷಿಯಸ್ ಅಧಿಕಾರಿಗಳು ಕೊಟ್ಟ ವಾಸ್ತವ್ಯದ ಸರ್ಟಿಫಿಕೇಟುಗಳ ಸಾಚಾತನವನ್ನು ಪರಿಶೀಲನೆಗೊಳಪಡಿಸದೆ ಅವನ್ನು ಹಾಗೆಯೇ ಒಪ್ಪಿಕೊಳ್ಳುವಂತೆ ಇಲಾಖೆಗೆ ಸೂಚಿಸಿತು.




ಆ ಸಂದರ್ಭದಲ್ಲಿ 'ಆಜಾದಿ ಬಚಾವೊ ಆಂದೋಳನ್' ಎಂಬ ಸಂಘಟನೆ ಡಿಟಿಎಸಿ ಮತ್ತು ಈ ಸುತ್ತೋಲೆಯ ವಿರುದ್ಧ ದೆಹಲಿ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ದಾಖಲಿಸಿತು. ಉಚ್ಚನ್ಯಾಯಾಲಯದ ತೀರ್ಪು ಕೂಡ ಆಜಾದಿ ಬಚಾವೊ ಆಂದೋಳನ್ ಪರವಾಗಿ ಬಂತು.

ಆದರೆ ಎನ್‌ಡಿಎ ಸರ್ಕಾರ ಮತ್ತು ಅಂತಾರಾಷ್ಟ್ರೀಯ ಹೂಡಿಕೆದಾರರ ಪ್ರತಿನಿಧಿಯಾದ ಗ್ಲೋಬಲ್ ಬಿಸ್‌ನೆಸ್ ಇನ್‌ಸ್ಟಿಟ್ಯೂಟ್ ಜೊತೆಯಾಗಿ ಈ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದವು (ಅಕ್ಟೋಬರ್ 2002).

'ಆಜಾದಿ ಬಚಾವೊ ಆಂದೋಳನ್' ಪರವಾಗಿ ಪ್ರಶಾಂತ್‌ಭೂಷಣ್ ವಾದಿಸಿದರೆ ಗ್ಲೋಬಲ್ ಬಿಸ್‌ನೆಸ್ ಇನ್‌ಸ್ಟಿಟ್ಯೂಟ್‌ನ ಲಾಯರ್ ಆಗಿದ್ದಾತ ಮೋದಿಯ ಪರಮಾಪ್ತನಾದ ಅರುಣ್ ಜೇಟ್ಲಿ. ಜೇಟ್ಲಿ ತನ್ನ ತಿರುಚು ವಾದಗಳ ಮೂಲಕ ತನ್ನ ಕಕ್ಷಿದಾರರಿಗೆ ಜಯ ಗಳಿಸಿಕೊಟ್ಟ. ಪರಿಣಾಮವಾಗಿ ಕಪ್ಪುಹಣ ಕೂಡಿಹಾಕುವವರಿಗೆ ಹಾದಿ ಸುಗಮವಾಯಿತು.

ಇದೇ ಅರುಣ್ ಜೇಟ್ಲಿ ಮೊನ್ನೆ ದೆಹಲಿಯ ರಾಜಘಾಟ್‌ನಲ್ಲಿ ಧರಣಿ ಕೂತು ವಿದೇಶಗಳಲ್ಲಿರುವ ಕಪ್ಪುಹಣವನ್ನು ಭಾರತಕ್ಕೆ ತರಬೇಕೆಂದು ಕಿರುಚಿದ್ದಾನೆ! ಇದಕ್ಕಿಂತ ದೊಡ್ಡ ವ್ಯಂಗ್ಯ ಇನ್ನಾವುದಿದೆ!! ಮೋದಿ ಮತ್ತಾತನ ಬೆಂಬಲಿಗರ ಆಷಾಢಭೂತಿತನಕ್ಕೆ ಇದೊಂದು ಬಹುಚಿಕ್ಕ ಉದಾಹರಣೆ ಅಷ್ಟೇ.

(http://www.truthofgujarat)


# ರಾಮದೇವ ಎಂಬ 'ರೋಗ' ಗುರು

ಪತಂಜಲಿ ಯೋಗ ಹಾಗು ಯೋಗಾಶ್ರಮದ ಹೆಸರಲ್ಲಿ ಕೋಟ್ಯಾಂತರ ಹಣ ಹಾಗು ಹೆಸರನ್ನು ಸಂಪಾದಿಸಿರುವ 'ರೋಗ ಗುರು' ರಾಮದೇವನನ್ನು ಈ ದೇಶದಿಂದ ಯೋಗ ಬಂಧುಗಳೇ ಹೊಡೆದೋಡಿಸಬೇಕಾಗಿದೆ.

ಈತ ಉಲ್ಲೇಖಿಸುತ್ತಿರುವ ಪತಂಜಲಿ ಮಹರ್ಷಿಯ ಅಷ್ಟಾಂಗ ಯೋಗ ಸೂತ್ರ ಅತ್ಯಂತ ಕಡಿಮೆ ಮಿತಿಯ ಶ್ಲೋಕಗಳಿಂದ ರಚಿತವಾದ ಸೂತ್ರ ಎನ್ನುವುದುಂಟು (ಬಿಂದಾಸ್ ಆಗಿ ಇಲ್ಲಿ ಶಬ್ದಗಳನ್ನು ಬಳಸಲಾಗಿಲ್ಲವಂತೆ). ಈ ಯೋಗ ಸೂತ್ರ ಆರಂಭಗೊಳ್ಳುವುದೇ "ಯೋಗ ಚಿತ್ತವೃತ್ತಿ ನಿರೋಧಃ" ಎಂಬ ಶ್ಲೋಕದಿಂದ. ಅಂದರೆ ಮನಸ್ಸಿನ ಚಿತ್ತವೃತ್ತಿ (ಮನೋ ಮೂಲದ ಅಸೂಯೆ, ದುರಾಸೆ, ದ್ವೇಷ, ಅಸಹನೆ, ಅಹಂ ಕ್ರೋಧಾದಿ)ಗಳನ್ನು ಹದ್ದುಬಸ್ತಿನಲ್ಲಿಡುವುದೇ "ಯೋಗ" ಎಂದು. ಆದರೆ ಪತಂಜಲಿ ಹೆಸರಲ್ಲಿ ಬೇಳೆಬೇಯಿಸಿಕೊಳ್ಳುತ್ತಿರುವ ರಾಮದೇವ ಮಾಡುತ್ತಿರುವುದು ಮಾತ್ರ ಇದಕ್ಕೆ ತದ್ವಿರುದ್ಧ.

ಕೋತಿಗೆ ಕಳ್ಳು ಕುಡಿಸಿದಂತೆ ಆಗಾಗ ಪೆಂಗನಂತಾಡುವ ಇವನ 'ಚಿತ್ತವೃತ್ತಿ' ಈತನ ಹತೋಟಿ ತಪ್ಪಿ ಕಾಲವೇ ಸರಿದಿದೆ. ಹಣದ ದುರಾಸೆ, ವಂಚನೆ, ದ್ವೇಷ ಸಾಧನೆಯ ಮಾತುಗಳು, ಬದ್ಧತೆಯಿಲ್ಲದಿರುವಿಕೆ, ಗೋಸುಂಬೆತನ, ಪುಕ್ಕಲುತನ ಇವನ್ನೆಲ್ಲ ಮೈಗೂಡಿಸಿಕೊಂಡಿರುವ ಈತ ಯೋಗಿ ಎಂದರೆ ಅದು ಯೋಗ ಪಿತಾಮಹ ಪತಂಜಲಿಗೇ ಮಾಡಿದಂತಹ ಅವಮಾನವಲ್ಲದೇ ಬೇರೇನಲ್ಲ.

ಸನ್ಯಾಸಿಯೆನಿಸಿಯೂ ರಾಜಕಾರಣಿಗಳಿಗಿಂತಲೂ ಕೀಳಾಗಿ ಈತ ವರ್ತಿಸಬಲ್ಲ, ಭಯಕ್ಕೆ ಬಿದ್ದಾಗ ಹೆಂಗಸರ ಬಟ್ಟೆ ಧರಿಸಿ ಓಡಿಹೋಗಲೂ ಅಂಜದ ಧೀರೋದ್ಧಾತನೀತ. ಮೋದಿಯ ಭಕ್ತನಾದ ಈತ ಮೋದಿಗೆ ಪ್ರತಿಯಾಗಿ ಬಿಂಬಿತವಾದ ರಾಹುಲ್ ಗಾಂಧಿಯನ್ನು ಟೀಕಿಸುವ ಭರದಲ್ಲಿ ದಲಿತರನ್ನು ಹಾಗು ಮಹಿಳೆಯರನ್ನು ಅವಮಾನಿಸುವಂತಹ ಮಾತನ್ನಾಡಿ ತನ್ನ ನಿಜ ವ್ಯಕ್ತಿತ್ವವನ್ನು ತೋರ್ಪಡಿಸಿಕೊಂಡಿದ್ದಾನೆ.



ಮಲಿನ ಮನಸ್ಸಿನಿಂದ ಕೂಡಿದ ಈ ರೋಗ ಗುರು ವಿಗಾಗಿ ಕಂಬಿ ಹಿಂದಿನ ಏಕಾಂತ ಸ್ಥಳ ಕಾದಿರಿಸಲ್ಪಟ್ಟಿದೆ ಎನ್ನುವುದು ನಿಚ್ಚಳಗೊಳ್ಳುತ್ತಿದೆ.

-ರವಿ ಪುತ್ತೂರ, ದ.ಕ.

## ಮೋದಿ ಅಡಿ ಕನ್ನಡಕ್ಕೆ ಉಳಿಗಾಲವಿಲ್ಲ

'ಅಭಿವೃದ್ಧಿ ಎಂದರೆ ಕೇವಲ ಔದ್ಯಮಿಕ ಅಭಿವೃದ್ಧಿ ಮಾತ್ರವಲ್ಲ, ಆಯಾ ರಾಜ್ಯಗಳ ಭಾಷೆಗಳೂ ಅಭಿವೃದ್ಧಿ ಆಗಬೇಕು. ಆದರೆ ಬಿಜೆಪಿಯ ಆಡಳಿತದಲ್ಲಿ ಕೇವಲ ಹಿಂದಿಗೆ ಪ್ರಾಮುಖ್ಯತೆ ಸಿಕ್ಕಿ ಉಳಿದ ಪ್ರಾದೇಶಿಕ ಭಾಷೆಗಳು ವಿನಾಶ ಹೊಂದುವ ಸಾಧ್ಯತೆಯೇ ಹೆಚ್ಚಿರುವಂತಿದೆ. ಆರ್‌ಎಸ್‌ಎಸ್‌ನವರ ಅಂತರಂಗದ ಭಾಷೆ ಸಂಸ್ಕೃತ ಮತ್ತು ಸಂಸ್ಕೃತದ ನೇರ ಮಗಳಾದ ಹಿಂದಿ ಭಾಷೆ. ದಕ್ಷಿಣ ಭಾರತದಲ್ಲಿಯೂ ಆರ್‌ಎಸ್‌ಎಸ್‌ನ ಬೈಠಕ್‌ಗಳಲ್ಲಿ ಕೇವಲ ಹಿಂದಿ ಮಾತ್ರ ಬಳಸಲಾಗುತ್ತದೆ, ಸ್ಥಳೀಯ ಭಾಷೆಗಳನ್ನು ಕಡೆಗಣಿಸಲಾಗುತ್ತದೆ.

ಮೋದಿಗೆ ಗುಜರಾತಿ ಮತ್ತು ಹಿಂದಿ ಭಾಷೆ ಬಿಟ್ಟರೆ ಬೇರೆ ಯಾವುದೇ ಭಾಷೆ ಬರುವುದಿಲ್ಲ. ಹಾಗಾಗಿ ಮೋದಿಯ ಕೈಗೆ ಅಧಿಕಾರ ಸಿಕ್ಕರೆ ಹಿಂದಿಗೆ ಅತೀ ಹೆಚ್ಚು ಪ್ರಾಮುಖ್ಯತೆ ಸಿಗುವುದು ಖಂಡಿತ. ಅದರಲ್ಲೂ ಕೇಂದ್ರ ಸರಕಾರದ ಕಚೇರಿ, ರೈಲ್ವೆ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಿಂದಿ ಭಾಷೆಯ ದಬ್ಬಾಳಿಕೆಯಿಂದ ಕರ್ನಾಟಕದೊಳಗೆಯೇ ಕನ್ನಡದ ಅವನತಿ ಖಂಡಿತ. ಈಗಾಗಲೇ ಉತ್ತರ ಭಾರತ ಮೂಲದ ರಾಷ್ಟ್ರೀಕೃತ ಸೆಂಟ್ರಲ್ ಬ್ಯಾಂಕಿನ ಕರ್ನಾಟಕದ ಕ್ಷೇತ್ರೀಯ ಕಾರ್ಯಾಲಯದಲ್ಲಿ ಒಬ್ಬ ಕನ್ನಡಿಗ ಅಧಿಕಾರಿಯು ಹಿಂದಿ ಹೇರಿಕೆ ವಿರೋಧಿಸಿದ್ದಕ್ಕಾಗಿ ಮತ್ತು ಕನ್ನಡ ಭಾಷೆಗೆ ಪ್ರಾಮುಖ್ಯತೆ ಕೊಡಬೇಕು ಎಂದು ವಾದಿಸಿದ್ದಕ್ಕಾಗಿ ಅವನ ಮೇಲೆ ಬೇರೆ ಯಾವುದೋ ನೆಪದಲ್ಲಿ ಸೈಬರ್ ಕ್ರೈಂ ಕೇಸು ದಾಖಲಿಸುವಂತಹ ಧಾರ್ಷ್ಟ್ಯ ಹಿಂದಿ ಭಾಷಿಕ ಮೇಲಧಿಕಾರಿಗಳು ತೋರಿಸಿದ್ದಾರೆ. ಇನ್ನು ಮೋದಿಯಂತಹ ಸರ್ವಾಧಿಕಾರಿ ಮನೋಭಾವದವರ ನಾಯಕತ್ವವುಳ್ಳ ಬಿಜೆಪಿಯಂತಹ ಹಿಂದಿ ಪಕ್ಷಪಾತಿ ಸರಕಾರ ಅಧಿಕಾರಕ್ಕೆ ಬಂದರೆ ಕನ್ನಡಕ್ಕೆ ಇನ್ನೂ ಹೆಚ್ಚು ಅಪಾಯ ಇದೆ. ಹಾಗಾಗಿ ನಮ್ಮ ಪ್ರಾದೇಶಿಕ ಭಾಷೆಗಳು ಉಳಿದುಬೆಳೆಯಬೇಕಾದರೆ ಹಿಂದಿಗೆ ಹೆಚ್ಚು ಪ್ರಾಮುಖ್ಯತೆ ಕೊಡದಿರುವ ಮತ್ತು ಪ್ರಾದೇಶಿಕ ಭಾಷೆಗಳಿಗೆ ಹೆಚ್ಚು ಗೌರವ ಕೊಡುವ ಪಕ್ಷವೇ ಅಧಿಕಾರಕ್ಕೆ ಬರಲೆಂದು ಹಾರೈಸೋಣ.

ಕರ್ನಾಟಕ ಕೇರಳ ಗೋವಾದಲ್ಲಿ ಕೊಂಕಣಿ ಭಾಷೆಗೆ ಕನ್ನಡ/ಮಲೆಯಾಳಿ/ ರೋಮನ್/ಅರೇಬಿಕ್ ಲಿಪಿಗಳ ಬದಲು ಕೇವಲ ದೇವನಾಗರಿ ಲಿಪಿ ಮಾತ್ರ ಬಳಸಬೇಕೆಂದು ಒತ್ತಡ ಹೇರುತ್ತಿರುವವರು ಇದೇ ಮನುವಾದಿ ಮಾನಸಿಕತೆಯವರು ಎಂಬುದನ್ನೂ ನಾವು ನೆನಪಿಡಬೇಕಾದುದು ಅಗತ್ಯ.

- ರವಿ ಬಿ. ಶೆಣಾವ, ಮಂಗಳೂರು

## ರಂಗೀಲಾ ಕಟೀಲನೂ, ರಸಿಕ ಪೀಪಿಯೂ

ಮಂಗಳೂರಿನ ಚೆಡ್ಡಿ ಸಂಸದ ನಳಿನ್ ಕಟೀಲನ ರಂಗೀಲಾ ರಗಳೆಗಳನ್ನು ಮತದಾನಕ್ಕೆ ಕೇವಲ ಒಂದು ದಿನ ಮುಂಚೆ ಒಬ್ಬ ಸ್ವತಂತ್ರ ಅಭ್ಯರ್ಥಿಯ ಮೂಲಕ ಮಾಧ್ಯಮಗಳಿಗೆ ಬಹಿರಂಗಪಡಿಸಿರುವ ಲೀಡರ್ ಪೀಪಿ ಸಹ ನಳಿನರಿಗಿಂತ ಹೆಚ್ಚು ರಂಗೀಲಾ ಕಥೆಗಳನ್ನು ಹೊಂದಿರುವ ಮಹಾರಸಿಕ (ಲಂಕೇಶ್, ಮೇ 7ರ ಸಂಚಿಕೆ).

ಜೈನಧರ್ಮವು ಅಪ್ಪಟ ಅಹಿಂಸಾವಾದಿ ಧರ್ಮವಾದರೂ ಈ ಪಾಪಿ ಪೀಪಿ ಮಾತ್ರ ಮೂಲತಃ ಅತಿ ಹಿಂಸಾಪ್ರವರ್ತಕ. ಅತಿ ದುಷ್ಟ ಕ್ರಿಮಿನಲ್ಲುಗಳ ಕೇಸ್‌ಗಳ ವಕಾಲತ್ತು ವಹಿಸಿಕೊಂಡು ಕೋರ್ಟಿನಲ್ಲಿ ಗೆದ್ದರೆ ಆ ಕ್ರಿಮಿನಲ್ಲುಗಳಿಂದ ಭಾರೀ ಫೀಸಿನೊಂದಿಗೆ ಇತರ ಸೇವೆಯನ್ನೂ ಪಡೆಯುವ ರಸಿಕನೀತ.




ಮುಸ್ಲಿಮ್ ಭೂಗತ ಲೋಕದ ಹಿಟ್-ಲಿಸ್ಟಿನಲ್ಲಿ ತನ್ನ ಹೆಸರು ಪ್ರಮುಖವಾಗಿದೆ. ಹಾಗಾಗಿ ಭಯೋತ್ಪಾದಕರಿಂದ ತನ್ನ ಜೀವಕ್ಕೆ ಅಪಾಯವಿದೆ ಎಂದು ತಾನೇ ಸುಳ್ಳು ಸುದ್ದಿ ಹಬ್ಬಿಸಿ ಸ್ಥಳೀಯ ಪೇಪರ್‌ಗಳಿಗೆ ಹಣ ಕೊಟ್ಟು ಈ ಬಗ್ಗೆ ಅತಿರಂಜಿತ ಸುದ್ದಿ ಹಾಕಿಸಿಕೊಂಡು ಪೊಲೀಸು ಇಲಾಖೆಯಿಂದ ತನ್ನ ಸಂರಕ್ಷಣೆಗೆ ಒಬ್ಬ ಉಚಿತ ಪೊಲೀಸ್ ಪೇದೆ

# 'ಸಿಗರೇಟ್ ತರಹ ಇವತ್ತಿನ ರಾಜಕೀಯ'

'ಗಾಂಧಿನಗರ', 'ಜಮಾನ', 'ನೈಂಟಿ', 'ದೇವ್ರಾಣೆ' ಹಾಗೂ 'ಸಿಗರೇಟ್' ಚಿತ್ರಗಳನ್ನು ನಿರ್ದೇಶಿಸಿರುವ, 'ಗೆರಿಲ್ಲಾ' ಎಂಬ ಚಿತ್ರದ ಮೂಲಕ ನಾಯಕನಟರಾಗಿ ಅಭಿನಯಿಸಿರುವ ನಟ, ನಿರ್ದೇಶಕ ಲಕ್ಕಿ ಶಂಕರ್ ಇಲ್ಲಿ ಮಾತಾಡಿದ್ದಾರೆ.



** ನೀವು ಹುಟ್ಟಿದ್ದು, ಬೆಳೆದಿದ್ದು, ಓದಿದ್ದು ಹಾಗೂ ನಿಮ್ಮ ಕುಟುಂಬದ ಹಿನ್ನೆಲೆ ಕುರಿತು ಹೇಳ್ತೀರಾ?*


ಹುಟ್ಟಿದ್ದು ಬೆಳೆದಿದ್ದು ಎಲ್ಲಾ ಬೆಂಗಳೂರೇ. ಅಪ್ಪ ಸೆಲ್ವಂ ಬೇಕರಿ ಇಟ್ಟಿದ್ರು. ಅಮ್ಮ ವಿಜಯ ಗೃಹಿಣಿ. ಓದಿದ್ದು ಡಿಪ್ಲೋಮಾ ಇನ್ ಫಾರ್ಮಸಿ. ಜೊತೆಗೆ, ಚಿತ್ರಕಲಾ ಪರಿಷತ್‌ನಲ್ಲಿ ಎರಡು ವರ್ಷ ಕಲಿತೆ.

** ನಿಮ್ಮ ಬಾಲ್ಯದ ದಿನಗಳ ಬಗ್ಗೆ ಹೇಳ್ತೀರಾ?*

ನನ್ನ ಬಾಲ್ಯ ಶ್ರೀರಾಂಪುರ, ಪ್ರಕಾಶ ನಗರ, ಓಕಳಿಪುರದ ಗಲ್ಲಿಗಳಲ್ಲಿ ಕಳೆಯಿತು. ಸದಾ ಹುಡುಗರ ಗುಂಪು ಕಟ್ಟಿಕೊಂಡು ಒಂದಿಲ್ಲೊಂದು ಆಟಗಳಲ್ಲಿ ಮಗ್ನನಾಗಿರುತ್ತಿದ್ದೆ. ಮಹಾಲಕ್ಷ್ಮಿ ಲೇಔಟ್‌ನ ಆಂಜನೇಯಸ್ವಾಮಿ ದೇವಾಲಯದ ಹಿಂದೆ ಒಂದು ಕಾಡಿತ್ತು, ಅಲ್ಲಿ ನಾವು ಹುಡುಗರೆಲ್ಲ ಆಟವಾಡುತ್ತಿದ್ದೆವು. ಹಾಗೇನೆ, ಅಪ್ಪನಿಗೆ ಬೇಕರಿ ಕೆಲಸಗಳಲ್ಲಿ ಸಹಕರಿಸುತ್ತಿದ್ದೆ ಕಥೆ ಪುಸ್ತಕಗಳನ್ನು ಓದುತ್ತಿದ್ದೆ ಸಿ.ಎನ್.ಮುಕ್ತಾ ಅವರ ಕಥೆಗಳೆಂದರೆ ನನಗಾಗ ಬಲು ಇಷ್ಟ. ರಾಜಕೀಯ ವಿಷಯಗಳ ಕುರಿತ ಲೇಖನಗಳೂ ನನಗೆ ಇಷ್ಟವಾಗುತ್ತಿದ್ದವು. ದಿನಾ ಪತ್ರಿಕೆ ಓದುತ್ತಿದ್ದೆ. ಅಲ್ಲಲ್ಲಿ ಹುಡುಗಾಟಕ್ಕೆ ಕಿರಿಕ್ ಕೂಡ ಮಾಡಿದ್ದುಂಟು.

** ಸಿನಿಮಾ ಕಡೆ ಆಸಕ್ತಿ ಬಂದಿದ್ದು ಯಾವಾಗ? ಯಾಕೆ?*

ನನಗೆ ಬಾಲ್ಯದಿಂದಲೂ ಸಿನಿಮಾಗಳ ಆಸಕ್ತಿ. ಟಿವಿಯಲ್ಲಿ ಬರುತ್ತಿದ್ದ ಸಿನಿಮಾಗಳ ಪೈಕಿ ಒಂದನ್ನೂ ಬಿಡುತ್ತಿರಲಿಲ್ಲ. ಅವುಗಳ ಪೈಕಿ ಮಣಿರತ್ನಂ ಅವರ 'ನಾಯಗನ್', 'ರೋಜ', 'ಬಾಂಬೆ', 'ಗೀತಾಂಜಲಿ' ನನ್ನ ಇಷ್ಟದ ಸಿನಿಮಾಗಳು. ಹಾಗೇನೆ 'ಮುತ್ತಿನಹಾರ', 'ಘರಿಂದಾ', 'ಕೂಲಿ', 'ಶೋಲೆ', 'ಗುಣ', 'ಅಪೂರ್ವ ಸಹೋದರರು' ಕೂಡ ನನ್ನನ್ನು ಕಾಡಿದ ಸಿನಿಮಾಗಳು. ಇನ್ನು ಥಿಯೇಟರಿನಲ್ಲಿ ನಾನು ನೋಡಿದ ಮೊದಲ ಸಿನಿಮಾ ಎಂದರೆ, ಶಿವರಾಜಕುಮಾರ್ ಅಭಿನಯದ, ಉಪೇಂದ್ರ ನಿರ್ದೇಶನದ 'ಓಂ'. ಆ ಚಿತ್ರ ನನ್ನೊಳಗೆ ಅನೇಕ ಅಚ್ಚರಿ, ಹೊಳಹುಗಳನ್ನು ಹುಟ್ಟುಹಾಕಿದ್ದರಲ್ಲಿ ಎರಡು ಮಾತಿಲ್ಲ.



** ಸಿನಿಮಾರಂಗದತ್ತ ಆಸಕ್ತಿ ಯಾವಾಗ ಬಂದಿದ್ದು? ನಿಮ್ಮ ಸಿನಿಮಾ ಬದುಕು ಹೇಗೆ ಶುರುವಾಯ್ತು?*

ಕಥೆಗಾರನಾಗಿ ಚಿತ್ರರಂಗದಲ್ಲಿ ನೆಲೆಕಂಡುಕೊಳ್ಳಬೇಕು ಎಂದು ಮೊದಲಿಗೆ ಆಸೆ ಪಟ್ಟೆ. ಆ ನಿಟ್ಟಿನಲ್ಲಿ ಒಂದೆರಡು ಕಡೆ ಅವಕಾಶಗಳಿಗಾಗಿ ಹುಡುಕಾಡಿದ್ದೂ ಉಂಟು. ಪಾಲ್ ಸುದರ್ಶನ್, ನಾಗಾಭರಣ, ಜಿ.ಕೆ.ಮುದ್ದುರಾಜ್ ಆ ಪೈಕಿ ಈಗ ನೆನಪಾಗುತ್ತಾರೆ. ಕಡೆಗೆ ರವಿ ಗರಣಿಯವರು ನನಗೆ ಮೊದಲಿಗೆ ಅವಕಾಶ ನೀಡಿದವರು. ಸಿನಿಮಾರಂಗಕ್ಕೆ ಅವರ ಮೂಲಕವೇ ನನಗೆ ಪ್ರವೇಶ ಸಿಕ್ಕಿದ್ದು. ಅವರ 'ಶಕ್ತಿ' ಧಾರಾವಾಹಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುವುದರ ಜೊತೆಗೆ, ಆ ಮೆಗಾ ಧಾರಾವಾಹಿ ಮುಗಿಯುವುದರೊಳಗೆ ಎಲ್ಲ ವಿಭಾಗಗಳಲ್ಲೂ ತಾಂತ್ರಿಕವಾಗಿ ಒಂದಿಷ್ಟು ತಿಳಿದುಕೊಳ್ಳಲು ಸಾಧ್ಯವಾಯಿತು. ಆನಂತರ ಜಿ.ವಿ.ಅಯ್ಯರ್ ಅವರ ಬಳಿ ಅಸೋಸಿಯೇಟ್ ಡೈರೆಕ್ಟರಾಗಿ ಸೇರಿಕೊಂಡೆ. ಅವರ ಜೊತೆ 'ಕೃಷ್ಣಲೀಲೆ', 'ನಾಟ್ಯರಾಣಿ ಶಾಂತಲ', 'ಕಾದಂಬರಿ' ಸೇರಿದಂತೆ ಒಂದಿಷ್ಟು ಪ್ರಾಜೆಕ್ಟ್‌ಗಳಿಗೆ ವರ್ಕ್ ಮಾಡಿದೆ.

** ನೀವು ನಿರ್ದೇಶಿಸಿದ ಚೊಚ್ಚಲ ಸಿನಿಮಾ ಯಾವುದು? ಆ ಅವಕಾಶ ಹೇಗೆ ಒದಗಿಬಂತು?*

ನಿರ್ದೇಶಕನಾಗಿ ನನ್ನ ಮೊದಲ ಸಿನಿಮಾ 'ಗಾಂಧಿನಗರ'. ಆ ಅವಕಾಶ ಒದಗಿಬಂದಿದ್ದು ಕಳ್ಳ ಪೊಲೀಸ್ ರಾಜೇಂದ್ರ ಅವರಿಂದ. ನಡೆದದ್ದು ಏನೆಂದರೆ, ನಾನು ಹೀರೋ ಆಗಿ ನಟಿಸಬೇಕಾಗಿದ್ದ ಒಂದು ಚಿತ್ರಕ್ಕೆ ಫೈನಾನ್ಸ್ ಬೇಕಿತ್ತು. ಆ ಕುರಿತು ಮಾತಾಡಲು ಕಳ್ಳ ಪೊಲೀಸ್ ರಾಜೇಂದ್ರ ಅವರನ್ನು ಸಂಪರ್ಕಿಸಲು ಹೋದೆ. ಕುತೂಹಲಕ್ಕೆ ಕಥೆ ಕೇಳಿದರು. ಕಥೆ ಅವರಿಗೆ ಇಷ್ಟವಾಗಿ ತಾವೇ ಪ್ರೊಡ್ಯೂಸ್ ಮಾಡುವುದಾಗಿಯೂ, ತಾವೇ ಹೀರೋ ಆಗಿ ನಟಿಸುವುದಾಗಿಯೂ ಹೇಳಿ ಆ ಚಿತ್ರಕ್ಕೆ ನಾನು ನಿರ್ದೇಶಕ ಆಗುವಂತೆ ಮಾಡಿದರು. ಹಾಗಾಗಿ ನನ್ನ ನಿರ್ದೇಶನದ 'ಗಾಂಧಿನಗರ' ಚಿತ್ರವು ರೆಡಿಯಾಯಿತು.

** ಆನಂತರ ಯಾವ್ಯಾವ ಚಿತ್ರಗಳನ್ನು ನಿರ್ದೇಶನ ಮಾಡಿದ್ದೀರಿ?*

'ಗಾಂಧಿನಗರ'ದ ನಂತರ 'ಜಮಾನ' ಎನ್ನುವ ಸಿನಿಮಾ ನಿರ್ದೇಶಿಸಿದೆ. ಆ ಚಿತ್ರದ ಮೂಲಕ ಬಾಲಿವುಡ್‌ನ ಜಾಕಿ ಶರಾಫ್ ಅವರನ್ನು ಕನ್ನಡಕ್ಕೆ ತಂದ ಹೆಮ್ಮೆ. 'ಜಮಾನ'ದ ನಂತರ ಹುಟ್ಟಿಕೊಂಡ ಚಿತ್ರವೇ 'ನೈಂಟಿ'. ಈ ಚಿತ್ರಕ್ಕೆ ಸಾಧುಕೋಕಿಲ ಅವರೇ ನಿರ್ಮಾಪಕರು. ನಾನು ಮತ್ತು ನನ್ನ ಸ್ನೇಹಿತ ಲೋಕಿ ಒಮ್ಮೆ ಮೈಸೂರಿನ ಬಾರೊಂದರಲ್ಲಿ ಕುಡಿದ ಮಂದಿಯ ವರ್ತನೆಯನ್ನು ನೋಡಿ 'ಕುಡುಕರದೇ ವಸ್ತು ಇಟ್ಟುಕೊಂಡು ಒಂದು ಸಿನಿಮಾ ಮಾಡಿದರೆ ಹೇಗೆ?' ಅಂತ ತಮಾಷೆಗೆ ಯೋಚಿಸಿದೆವು. ಕಡೆಗೆ ಅದನ್ನು ಗಂಭೀರವಾಗಿ ತಗೊಂಡಿದ್ರಿಂದ 'ನೈಂಟಿ' ಸಿನಿಮಾ ನಿರ್ಮಾಣವಾಯಿತು. ಚಿತ್ರಕ್ಕೆ ಎಲ್ಲ ಕಡೆಯಿಂದಲೂ ಒಳ್ಳೆ ರೆಸ್ಪಾನ್ಸ್ ಬಂದುದರ ಜೊತೆಗೆ ಚಿತ್ರವು ಕೋಟ್ಯಂತರ ರೂಪಾಯಿಗಳ ವಹಿವಾಟು ಮಾಡಿತು. 'ನೈಂಟಿ'ಯ ನಂತರ 'ದೇವ್ರಾಣೆ' ಎಂಬ ಚಿತ್ರವೊಂದನ್ನು ಮಾಡಿದೆ.

** ಈಗ 'ಸಿಗರೇಟ್' ಎನ್ನುವ ಒಂದು ಸಿನಿಮಾ ಮಾಡ್ತಾ ಇದೀರಿ. ಅದರ ಬಗ್ಗೆ ಹೇಳ್ತೀರಾ?*

'ಧೂಮಪಾನ ಹಾನಿಕರ' ಎಂಬ ಸಂದೇಶವನ್ನು ಹೊತ್ತ ಸಿನಿಮಾ 'ಸಿಗರೇಟ್'. ಹಾಗಂತ ಚಿತ್ರದಲ್ಲಿ ಮನರಂಜನೆ ಇಲ್ಲ ಅಂತೇನೂ ಇಲ್ಲ, ಪ್ರತಿ ದೃಶ್ಯವನ್ನು ಪ್ರೇಕ್ಷಕರು

## ಸಂದರ್ಶನ

ಎಂಜಾಯ್ ಮಾಡುತ್ತಾರೆ ಎಂಬುದು ನನ್ನ ವಿಶ್ವಾಸ. ಇಲ್ಲಿ ಒಂದು ವಿಷಯ ಹೇಳಬಯಸುತ್ತೇನೆ: ಇವತ್ತಿನ ರಾಜಕೀಯ ಸ್ಥಿತಿ ಥೇಟು ಸಿಗರೇಟ್ ಥರಾನೇ. ಮೇಲೆ ಮಾತ್ರ ಬಿಳಿ. ಒಳಗೆ ಅಪಾಯಕಾರಿ ಟೊಬ್ಯಾಕೋದಂತಹ ಕಲುಷಿತ ಮನಗಳು. ಆ ಮೂಲಕ ದೇಶದಲ್ಲಿ ಸ್ವಾಸ್ಥ್ಯವನ್ನು ಕೆಡಿಸುವ ವಾತಾವರಣದ ನಿರ್ಮಾಣವಾಗುತ್ತಿದೆ ಎಂದು ಭಾವಿಸುತ್ತೇನೆ. 'ಸಿಗರೇಟ್' ಚಿತ್ರದ ಮಾತುಗಳ ಭಾಗದ ಚಿತ್ರೀಕರಣ ಮುಗಿದಿದ್ದು, ಒಂದು ಹಾಡಿನ ಚಿತ್ರೀಕರಣ ಮಾತ್ರ ಬಾಕಿ ಇದೆ. ಜೂನ್‌ನಲ್ಲಿ ಚಿತ್ರ ಬಿಡುಗಡೆಯಾಗುತ್ತದೆ. ಇಂದ್ರಸೇನ ಅದ್ಭುತವಾಗಿ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. 'ಶ್ವಾಸಕೋಶ ಸರ್ವನಾಶ' ಹಾಡು ಈ ವರ್ಷದ ಸೂಪರ್‌ಹಿಟ್ ಹಾಡಾಗುತ್ತದೆ ಎಂಬ ಭರವಸೆ ನನಗಿದೆ. ಹಾಗೇನೆ 'ಒಂದು ಮನಸು ಇನ್ನೊಂದು ಮನಸು' ಎಂಬ ಗೀತೆ ಅರ್ಥಪೂರ್ಣ ಸಾಲುಗಳಿಂದ ಕೂಡಿದ್ದು ದೀರ್ಘಕಾಲ ಕಾಡುವಂಥ ಹಾಡಾಗಬಲ್ಲದು. ರಮೇಶ್ ರಾಜ್ ಕ್ಯಾಮೆರಾ ವರ್ಕ್ ಚಿತ್ರಕ್ಕಿದೆ.

** 'ಗೆರಿಲ್ಲಾ' ಎನ್ನುವ ಚಿತ್ರದಲ್ಲಿ ನೀವು ನಾಯಕ ನಟರಾಗಿ ನಟಿಸಿದ್ದೀರಿ. ಆ ಅನುಭವ ಹೇಗಿತ್ತು ಅಂತ ಹೇಳ್ತೀರಾ?*

'ಗೆರಿಲ್ಲಾ' ಒಂದು ವಿಶಿಷ್ಟ ಅನುಭವ ಕೊಟ್ಟಂಥ ಸಿನಿಮಾ. ಒಂದು ಹಾಡು ಮತ್ತು ಒಂದು ಫೈಟ್‌ನ ಚಿತ್ರೀಕರಣ ಮುಗಿದರೆ ಇಡೀ ಚಿತ್ರದ ಚಿತ್ರೀಕರಣ ಮುಗಿದಂತಾಗುತ್ತದೆ. ಈ ಚಿತ್ರಕ್ಕೆ ಸಾಧುಕೋಕಿಲ ಅವರೇ ನಿರ್ಮಾಪಕರು. ಮುತ್ತು ಎಂಬ ಯುವಕ ನಿರ್ದೇಶಿಸಿರುವ ಈ ಚಿತ್ರಕ್ಕೆ ಸಾಧು ಕೋಕಿಲ ಅವರ ಮಗ ಸುರಾಗ್ ಮ್ಯೂಸಿಕ್ ಡೈರೆಕ್ಟರ್. 'ಗೆರಿಲ್ಲಾ' ಆಗಸ್ಟ್‌ನಲ್ಲಿ ತೆರೆಗೆ ಬರಲಿದೆ. 'ಗೆರಿಲ್ಲಾ' ನಂತರ ಇನ್ನೊಂದಿಷ್ಟು ಚಿತ್ರಗಳಲ್ಲಿ ಹೀರೋ ಆಗಿ ನಟಿಸಲು ಅವಕಾಶಗಳು ಬರುತ್ತಿವೆ. ಆ ಕುರಿತು ಮಾತುಕತೆ ನಡೆಯುತ್ತಿದೆ.


** ನಿಮ್ಮ ಮುಂದಿನ ಯೋಜನೆಗಳೇನು?*

ಪಾಲುದಾರ ಶಿವು ಕಬ್ಬಣ ಅವರ ಜೊತೆಗೂಡಿ 'ಶಿವಶಂಕರ್ ಫಿಲಂ ಫ್ಯಾಕ್ಟರಿ' ಎಂಬ ನಮ್ಮದೇ ನಿರ್ಮಾಣ ಸಂಸ್ಥೆ ಈಗಾಗಲೇ ಆರಂಭವಾಗಿದ್ದು ಈ ಬ್ಯಾನರ್ ಅಡಿಯಲ್ಲಿ ಈಗಾಗಲೇ 'ದೇವ್ರಾಣೆ' ಹಾಗೂ 'ಸಿಗರೇಟ್' ಚಿತ್ರಗಳು ನಿರ್ಮಾಣವಾಗಿರುತ್ತವೆ. ಮುಂದಿನ ದಿನಗಳಲ್ಲಿ ನಮ್ಮ ಬ್ಯಾನರ್ ಅಡಿಯಲ್ಲಿ ಮತ್ತಷ್ಟು ಒಳ್ಳೆಯ ಸಿನಿಮಾಗಳನ್ನು ನಿರ್ಮಾಣ ಮಾಡುವ ಯೋಜನೆಗಳಿವೆ. ಆ ಮೂಲಕ ಒಂದಿಷ್ಟು ಉತ್ಸಾಹಿ ಪ್ರತಿಭಾವಂತರಿಗೆ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು ಎಂಬುದು ನಮ್ಮ ಉದ್ದೇಶ. ಉಳಿದಂತೆ ನಟನೆಯ ಜೊತೆಗೆ ನನ್ನ ಎಂದಿನ ಇಷ್ಟದ ಕಾಯಕ ನಿರ್ದೇಶನವನ್ನು ಮುಂದುವರಿಸುತ್ತೇನೆ. ಸಮಯ ತಗೊಂಡು ಒಳ್ಳೆಯ ಸ್ಕ್ರಿಪ್ಟ್ ರೆಡಿ ಮಾಡಿಕೊಂಡು ಒಳ್ಳೊಳ್ಳೆಯ ಸಿನಿಮಾಗಳನ್ನು ನಿರ್ದೇಶಿಸುವ ಆಕಾಂಕ್ಷೆ ಹೊತ್ತಿದ್ದೇನೆ. ಸದ್ಯಕ್ಕೆ ನನ್ನೆದುರು 'ಸಿಗರೇಟ್' ಹಾಗೂ 'ಗೆರಿಲ್ಲಾ' ಚಿತ್ರಗಳಿವೆ.



ಸಂದರ್ಶಕ: ಹೃದಯಶಿವ


---



...ಪಡೆದುಕೊಂಡಿರುವ ಖದೀಮ ಇವನು. ಈ ಬಾರಿ ನಳಿನ್ ಕಟೀಲನ ಹೆಸರು ಕೆಡಿಸಿ ಮಂಗಳೂರು ಕ್ಷೇತ್ರದ ಟಿಕೆಟನ್ನು ಎಗರಿಸಲು ಪ್ರಯತ್ನಿಸಿ ಸೋತ ಮೇಲೆ, ಈ ಪೀಪಿ ತನ್ನದೇ ಪಾರ್ಟಿಯ ನಳಿನನ್ನು ಸೋಲಿಸಲು ಒಬ್ಬ ಸ್ವಜಾತಿ ಸ್ವತಂತ್ರ ಅಭ್ಯರ್ಥಿಯ ಮೂಲಕ ಮತದಾನಕ್ಕೆ ಒಂದು ದಿನ ಮುಂಚೆ ನಳಿನನ ಫೋನ್‌ಕಾಲ್ ಲಿಸ್ಟ್ ಬಹಿರಂಗಪಡಿಸಿ ಸಿಕ್ಕಿಬಿದ್ದನು.

ತನ್ನ ಮೇಲೆ ಭಯಂಕರ ಸಿಟ್ಟಾಗಿರುವ ಬಿಜೆಪಿ ನೇತಾರರನ್ನು ಹಾದಿ ತಪ್ಪಿಸಲು ಇಲ್ಲಿಯ ಒಂದು ಸಂಜೆ ಪತ್ರಿಕೆಯಲ್ಲಿ 'ಈ ಕುತಂತ್ರ ನಡೆಸಿದ್ದು ಟಿಕೆಟ್ ಆಕಾಂಕ್ಷಿಗಳಾಗಿದ್ದ ಬೆಳ್ತಂಗಡಿಯ ಒಬ್ಬ ಚೆಡ್ಡಿ ಕೊಂಕಣಿಗ ಮತ್ತು ಬಂಟವಾಳದ ಒಬ್ಬ ಗುತ್ತಿನ ಬಂಟ' ಎಂಬ ಸುಳ್ಳು ಸುದ್ದಿ ಹಬ್ಬಿಸಿ ಬಿಜೆಪಿಗರನ್ನು ಹಾದಿ ತಪ್ಪಿಸಲು ನೋಡಿದ್ದ.

ಚುನಾವಣೆ ಫಲಿತಾಂಶದ ನಂತರ ಈ ಮನೆಹಾಳನನ್ನು ಹೊರಹಾಕುವ ಪ್ರಕ್ರಿಯೆ ಬಿಜೆಪಿಯೊಳಗೆ ಈಗಾಗಲೇ ಶುರುವಾಗಿರುವುದರಿಂದ ಸ್ವ-ಜಾತಿಯ ರಸಿಕಬಾಂಧವ ಧನಂಜಯ 'ಐಶ್ವರ್ಯ' ಕುಮಾರನ ಮೂಲಕ ಜೆಡಿಎಸ್





'ಸೇರಲು' ಈಗಿನಿಂದಲೇ ಪ್ರಯತ್ನಿಸುತ್ತಿದ್ದಾನೆ. ಒಟ್ಟಾರೆ ಬಿಜೆಪಿಯು ರಂಗೀಲಾ ಕಚ್ಚೆ ಹರುಕ ಚೆಡ್ಡಿಗಳ ಒಂದು ಒಡೆದ ಮನೆ ಅಷ್ಟೇ.

*- ಅಭಿಷೇಕ್ ಎ ಪಡಿವಾಳ್, ಸುಳ್ಯ*

### ನೀವು ಏನೇ ಮಾಡಿದರೂ ಮೋದಿ ಪ್ರಧಾನಿ

ನಾನು ಹಲವು ತಿಂಗಳುಗಳಿಂದ ನಿಮ್ಮ ಪತ್ರಿಕೆಯನ್ನು ಓದುತ್ತಿದ್ದೇನೆ. ನಿಮ್ಮ 'ಆಚಿಟ ಮೋದಿ' ಕಾಲಂಗಳನ್ನು ತಪ್ಪದೆ ಓದುತ್ತಿರುವ. ನಿಮ್ಮ ಲೇಖನಗಳನ್ನ ನೋಡಿದರೆ ನರೇಂದ್ರ ಮೋದಿಯ ಮೇಲೆ ನಿಮಗಿರುವ ಭಯ ಎಷ್ಟೆಂದು ತಿಳಿಯುತ್ತದೆ. ಮೋದಿಯವರನ್ನು ಕಂಡರೆ ಪಾಕಿಸ್ತಾನ ಹೆದರುವಂತೆ ನೀವೂ ಹೆದರುತ್ತೀರಿ ಎನಿಸುತ್ತದೆ.

ಆದರೆ ಮೋದಿ ವಿರುದ್ಧ ಕಾಂಗ್ರೆಸ್, ಎನ್‌ಜಿಓ, ಮಾಧ್ಯಮ, ಟಿವಿ ಚಾನೆಲ್‌ಗಳು, ಮಾನವ ಹಕ್ಕು ಹೋರಾಟಗಾರರ ಆಟ ನಡೆಯುವುದಿಲ್ಲ. ಗೌರಿ ಲಂಕೇಶರಿಗೂ, ಮೋದಿ ವಿರೋಧಿ ಮೇಧಾ ಪಾಟ್ಕರ್ ಅವರಿಗೂ ಹಲವಾರು ಸಾಮ್ಯತೆಗಳಿವೆ. ಆ ಕಾರಣಕ್ಕೇ



ನಿಮ್ಮ ಪತ್ರಿಕೆಯಲ್ಲಿ ಮೋದಿಯ ಬಗ್ಗೆ ಏಕವಚನದಲ್ಲಿ ಬರೆಯುತ್ತೀರಿ. ನೀವು ಆಪ್ ಬೆಂಬಲಿಗರು ಎಂದು ನನಗನ್ನಿಸುತ್ತದೆ. ಏಕೆಂದರೆ ಆಪ್ ಕೂಡ ಮೋದಿಯನ್ನು ವಿರೋಧಿಸುತ್ತದೆ.

ಕೊನೆಯ ಮಾತು: ನೀವು ಮೋದಿಯನ್ನು ಎಷ್ಟೇ ವಿರೋಧಿಸಿದರೂ ಅವರು ಪ್ರಧಾನಿ ಆಗುವುದನ್ನು ನಿಮ್ಮಂಥವರಿಂದ ತಡೆಯಲಾಗುವುದಿಲ್ಲ.

*-ಓರ್ವ ಮೋದಿ ಅಭಿಮಾನಿ*

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 14-05-2014 RNI No. KARKAN2005/14648

## ಜಂಗಮ ಬರುತಾನೆ ದಾರಿಬಿಡಿ



ಬಾವಿಲಿ ಡಬ್ಬಕ್ಕೆ ಕಲ್ಲು ಹಾಕಿ ಈತ ಕುಲುಕಿದರೆ ಇಡೀ ಊರಿಗೂರೇ ಈತನ ಕಡೆ ತಿರುಗುತ್ತದೆ. ಅಂತಹ ವಿಶಿಷ್ಟ ಪ್ರತಿಭೆ ಹೊಂದಿರುವ ವ್ಯಕ್ತಿಯ ಹೆಸರೇ ಪ್ರೇಮ್. ಆರಂಭದಿಂದಲೂ ಉಪೇಂದ್ರ ಮಾರ್ಗದಲ್ಲಿ ನಡೆದುಬಂದ ಈ ವ್ಯಕ್ತಿ ಈಗ ಶಿವಣ್ಣನನ್ನು ಹಾಕಿಕೊಂಡು ಒಂದು ಸಿನಿಮಾ ಮಾಡುವ ಪ್ಲಾನ್ ಮಾಡಿದ್ದಾರೆ. ಚಿತ್ರದ ಹೆಸರು 'ಜಂಗಮ'. ಜಾನಪದೀಯ ಹಿನ್ನೆಲೆಯುಳ್ಳ ಈ ಟೈಟಲ್ ನಿಜಕ್ಕೂ ಶಿವಣ್ಣನಿಗೆ ಹೇಳಿಮಾಡಿಸಿದಂತಿದೆ. ಶಿವಣ್ಣನ ಕೈಗೆ ಕಂಸಾಳೆ ಚೆನ್ನಾಗಿ ಹೊಂದುತ್ತದೆ ಎಂದುಕೊಳ್ಳುವುದರ ಜೊತೆಗೆ ಶಿವಣ್ಣನ ಕೈಗೆ 'ಜೋಗಿ'ಗೂ ಮೊದಲೇ 'ಜನುಮದ ಜೋಡಿ'ಯಲ್ಲಿ ನಾಗಾಭರಣ ಅವರು ಕಂಸಾಳೆ ಕೊಟ್ಟಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಸಂಗೀತ ನಿರ್ದೇಶಕ ಯಾರೇ ಇರಲಿ, ಹಾಡುಗಳನ್ನು ಚೆನ್ನಾಗಿ ಮಾಡಿಸಿಕೊಳ್ಳಬಲ್ಲಂಥ ಸಾಮರ್ಥ್ಯವಿರುವ ಪ್ರೇಮ್, ತೆರೆಯ ಮೇಲೆ ಹಾಡುಗಳನ್ನು ಕಲರ್‌ಫುಲ್ಲಾಗಿ ತೋರಿಸುವುದಷ್ಟೇ ಸಿನಿಮಾ ಎಂಬ ಭ್ರಮೆಯಿಂದ ಹೊರಬಂದು ಗಟ್ಟಿ ಕಥೆ, ಚಿತ್ರಕತೆ, ತೂಕಬದ್ಧ ಸಂಭಾಷಣೆಗಳೊಂದಿಗೆ 'ಜಂಗಮ' ಗೆಲ್ಲುವಂತೆ ಮಾಡಲಿ. ಬರೀ ಪ್ರಚಾರದಿಂದಷ್ಟೇ ಸಿನಿಮಾ ಗೆಲ್ಲಿಸಲಾಗದು ಎಂಬ ಅರಿವು ಪ್ರೇಮ್‌ಗೆ 'ಜೋಗಯ್ಯ'ದಲ್ಲೇ ಆಗಿದೆಯೆಂದು ಭಾವಿಸೋಣ.

ಅಂದಹಾಗೆ, ಪ್ರೇಮ್ ಫಾಲೋ ಮಾಡಿಕೊಂಡು ಬಂದಿರುವ ಉಪೇಂದ್ರರೊಳಗಿನ ನಿರ್ದೇಶಕನಿಗೆ ಯಾವತ್ತೋ ಗ್ರಹಣ ಬಡಿದಾಗಿದೆ. ಅದಕ್ಕೆ ಸಾಕ್ಷಿಯಾಗಿ ನಾನಿದೀನಿ ಎಂದು 'ಸೂಪರ್' ನೆನಪಿಸುತ್ತದೆ. ಸದ್ಯದ ಸ್ಥಿತಿಯಲ್ಲಿ ಒಂದು ಕಡೆ ಪ್ರಶಸ್ತಿಗಳಿಗಷ್ಟೇ ಸಿನಿಮಾ ಮಾಡುವ ಜುಬ್ಬಧಾರಿಗಳಿದ್ದರೆ, 'ಕತೆಯೆಂದರೆ ಏನದು?' ಎಂಬಂತೆ ಜೀವಿಸುತ್ತ ಬರೀ ಮಾತುಕತೆಯನ್ನೇ ನೆಚ್ಚಿಕೊಂಡವರ ಗ್ಯಾಂಗು ಇನ್ನೊಂದು ಕಡೆಗಿದೆ. ಈ ನಡುವೆ ದೇಸಿತನದ ಬಗ್ಗೆ ಕಿಂಚಿತ್ತಾದರೂ ಪ್ರಜ್ಞೆ ಹೊಂದಿರುವ ಪ್ರೇಮ್ ಸೀರಿಯಸ್ಸಾಗಿ 'ಜಂಗಮ'ನಿಗೊಂದು ಸಂಭ್ರಮದ ಸಕ್ಸಸ್ ತಂದುಕೊಡಲಿ, ಆ ಮೂಲಕ ಅವರೊಳಗಿನ ನಿರ್ದೇಶಕ ಜೀವಂತವಾಗಿರಲಿ ಎಂಬುದು ನಮ್ಮ ಆಶಯ.

## ಸುದೀಪ್ ಎಂಬ ತೆಲುಗು ಸ್ಟಾರ್



ಕನ್ನಡಿಗನೊಬ್ಬ ನಟಿಸಿರುವ ಚಿತ್ರವೊಂದು ನೆರೆ ರಾಜ್ಯದಲ್ಲಿ ಬರೋಬ್ಬರಿ ಮುನ್ನೂರು ಥಿಯೇಟರುಗಳಲ್ಲಿ ಬಿಡುಗಡೆಯಾಗುತ್ತಿದೆ ಎಂಬ ಸುದ್ದಿಯೇ ಕನ್ನಡಿಗರ ಪಾಲಿಗೆ ಹೆಮ್ಮೆಯ ಸಂಗತಿ. ಇಂಥದೊಂದು ಹೆಮ್ಮೆಗೆ ಕಾರಣವಾಗಿರುವ ಸಿನಿಮಾ ಎಂದರೆ, ಸುದೀಪ್ ಅಭಿನಯದ 'ಬಚ್ಚನ್' ಚಿತ್ರ. ಹೌದು, 'ಬಚ್ಚನ್' ಚಿತ್ರದ ತೆಲುಗು ಅವತರಣಿಕೆ ಇದೇ ತಿಂಗಳು ಆಂಧ್ರದಾದ್ಯಂತ ಬಿಡುಗಡೆಯಾಗುತ್ತಿದೆ. ಇಷ್ಟಕ್ಕೂ ಸುದೀಪ್ ಚಿತ್ರವೊಂದು ಪಕ್ಕದ ರಾಜ್ಯದಲ್ಲಿ ಈ ಮಟ್ಟದಲ್ಲಿ ಬಿಡುಗಡೆಯಾಗುವುದರ ಹಿಂದೆ ಕೆಲವೊಂದಿಷ್ಟು ಪವಾಡಗಳು ನಡೆದಿರುವುದು ಪ್ರಾಯಶಃ ನಿಮಗೂ ಗೊತ್ತಿರುತ್ತದೆ.

'ಮಗಧೀರ'ದಂಥ ಸಿನಿಮಾ ಕೊಟ್ಟ ರಾಜಮೌಳಿ ನಿರ್ದೇಶನದಲ್ಲಿ ಸುದೀಪ್ ನಟಿಸಿದ್ದ 'ಈಗ' ಚಿತ್ರವು ಯಾವಾಗ ಹೊರಬಂತೋ, ಭರ್ಜರಿಯಾಗಿ ಗೆದ್ದಿತೋ ಅಲ್ಲಿಗೆ ಸುದೀಪ್ ತೆಲುಗು ನಟರ ಪೈಕಿ ತಾವೂ ಒಬ್ಬರಾಗಿಬಿಟ್ಟರು. ಈ 'ಈಗ' ಪವಾಡಕ್ಕೆ ವೇದಿಕೆ ಎಂಬಂತೆ ರಾಮಗೋಪಾಲ್ ವರ್ಮ ನಿರ್ದೇಶನದಡಿ ಸುದೀಪ್ ನಟಿಸಿದ್ದ 'ಫೂಂಕ್' ಹಾಗೂ 'ರಣ್' ಚಿತ್ರಗಳು ಹಿಂದಿಯಲ್ಲಿ ಬಂದಿದ್ದವು. 'ರಣ್' ಚಿತ್ರದಲ್ಲಿ ಅಮಿತಾಬ್ ಬಚ್ಚನ್ ಜೊತೆ ನಟಿಸಿ ಸೈ ಎನ್ನಿಸಿಕೊಂಡಿದ್ದ ಸುದೀಪ್ ಅಷ್ಟು ಹೊತ್ತಿಗಾಗಲೇ ದಕ್ಷಿಣದ ಖ್ಯಾತ ನಿರ್ದೇಶಕರ ಕಣ್ಣಿಗೆ ಬಿದ್ದಿದ್ದರು.

ಇಂತಿಪ್ಪ ಇತಿಹಾಸವಿರುವ ಸುದೀಪ್ ಅಭಿನಯದ 'ಬಚ್ಚನ್' ಆಂಧ್ರದಲ್ಲಿ ಹೀಗೆ ದೊಡ್ಡಮಟ್ಟದಲ್ಲಿ ಬಿಡುಗಡೆಯಾಗುತ್ತಿರುವುದು ಮೆಚ್ಚುಗೆ ವ್ಯಕ್ತಪಡಿಸಬೇಕಾದ ವಿಚಾರ. ಸುದೀಪ್ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ. ಗಾಂಧಿನಗರದ ಗಲೀಜು ಅಂಟಿಸಿಕೊಳ್ಳದಂತೆ ಕನ್ನಡದಲ್ಲೂ ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಲಿ. ಹಾಗೇನೆ, ಸಕ್ಸಸ್ ಕುದುರೆಯೇರುವ ಅಮಲಿನಲ್ಲಿ ತಲೆತಿರುಗದಿರಲಿ. ಕಮಲ್ ಹಾಸನ್ ಬಾಲಿವುಡ್‌ನಲ್ಲಿ ನಿಲ್ಲದಂತಾಗಲು ಈ ಸಕ್ಸಸ್‌ನ ತಲೆತಿರುಗುವಿಕೆಯೇ ಕಾರಣವಾಗಿತ್ತು ಎಂಬ ಕಟುಸತ್ಯ ಸುದೀಪ್‌ಗೆ ಗೊತ್ತಿರುತ್ತೆ ಅಂದುಕೊಳ್ಳೋಣ!

## ಕವಿಯೊಬ್ಬನ ಶೃಂಗಾರಕಾವ್ಯ



ನೆಮ್ಮದಿಯಾಗಿ ಹಾಡು ಬರೆದುಕೊಂಡಿದ್ದ ಗೀತಸಾಹಿತಿ ನಾಗೇಂದ್ರ ಪ್ರಸಾದ್ ವರ್ಷಗಳ ಹಿಂದೆ 'ನಲ್ಲ' ಎಂಬ ಹೆಸರಿನಡಿ ಸುದೀಪ್ ಹಾಕಿಕೊಂಡು ಒಂದು ಸಿನಿಮಾ ನಿರ್ದೇಶಿಸಿದರು. 'ನಲ್ಲ' ಚಿತ್ರದ ಮೂಲಕ ನಿರ್ದೇಶಕನಾಗಿ ನಾಗೇಂದ್ರ ಪ್ರಸಾದ್ ಅಂದುಕೊಂಡಷ್ಟು ಮಟ್ಟದಲ್ಲಿ ಸಕ್ಸಸ್ ಕಾಣದಿದ್ದರೂ ಆ ಚಿತ್ರಕ್ಕಾಗಿ 'ಮಲಗೇ ಮಲಗೇ ಗುಬ್ಬಿ ಮರಿ' ಎಂಬ ಚೆಂದದ ಸಾಲುಗಳನ್ನು ಬರೆಯುವ ಮೂಲಕ ಗೀತರಚನಕಾರರಾಗಿ ಗೆದ್ದುಬಿಟ್ಟರು. ಅನಂತರ 'ಅಂಬಿ' ಎಂಬ ಪಕ್ಕಾ ಕಮರ್ಷಿಯಲ್ ಸಿನಿಮಾ ನಿರ್ದೇಶಿಸಿದರೂ ಗೆಲುವು ಒಲಿದು ಬರಲಿಲ್ಲ. ಇನ್ನು 'ಮೇಘವೇ ಮೇಘವೇ' ಅನ್ನುವ ಸಿನಿಮಾವನ್ನು ನಾಗೇಂದ್ರ ಪ್ರಸಾದ್ ಯಾಕೆ ಮಾಡಿದರು ಎಂಬುದು ಇನ್ನೂ ಸ್ಪಷ್ಟವಾಗಲಿಲ್ಲ.

ಇದೆಲ್ಲ ಯಾಕೋ ಸರಿಬರುತ್ತಿಲ್ಲವೆಂದು ಭಾವಿಸಿ, ರೈಟ್‌ಟ್ರಾಕ್‌ನಲ್ಲೇ ಹೋಗುವುದು ಕ್ಷೇಮವೆನಿಸಿ, 'ಪುಣ್ಯವಂತ' ಎಂಬ ಟೈಟಲ್ ಇಟ್ಟುಕೊಂಡು ಶಿವಣ್ಣನೊಂದಿಗೆ ಒಂದು ಸಿನಿಮಾ ಮಾಡಬೇಕೆಂದುಕೊಂಡರು. ಯಾಕೋ ಅದೂ ಕೂಡ ಕಾರ್ಯರೂಪಕ್ಕೆ ಬರಲಿಲ್ಲ. ಹೀಗೆ ನಿರ್ದೇಶಕನಾಗಿ ಗಟ್ಟಿಯಾಗಿ ನಿಲ್ಲಬೇಕೆಂದು ದಶಕದಿಂದ ಪ್ರಯತ್ನಿಸಿದರೂ ನಾಗೇಂದ್ರ ಪ್ರಸಾದ್ ಅವ... ಅದೇಕೋ ಸಕ್ಸಸ್ ಎಂಬುದು ಮರೀಚಿಕೆಯಾಗತೊಡಗಿತು. ಸ್ವತಃ ... ಚಿತ್ರಕಥೆ, ಸಂಭಾಷಣೆ ಬರೆದರೂ ತಮ್ಮ ನಿರ್ದೇಶನದಲ್ಲಿ ಒಂದೇ ಒಂ... ಚಿತ್ರವನ್ನು ಗೆಲ್ಲಿಸಿಕೊಡಲಾಗಲಿಲ್ಲ.

ಇಂತಹ ನಾಗೇಂದ್ರ ಪ್ರಸಾದ್ ಈಗ ಮತ್ತೊಂದು ಕನಸು ಹೊ... ಅಖಾಡಕ್ಕಿಳಿದಿದ್ದಾರೆ. ಅದೇನಪ್ಪಾ ಅಂದ್ರೆ, ರವಿಚಂದ್ರನ್ ನಾಯಕತ್ವದಲ್ಲಿ 'ಶೃಂಗಾ... ಎನ್ನುವ ಸುಂದರ ಹೆಸರಿನ ಸಿನಿಮಾ ಆರಂಭಿಸಿದ್ದಾರೆ. ಚಿತ್ರದ ಟೈಟಲ್‌ನಂತೆಯ... ಚಿತ್ರವೂ ಶೃಂಗಾರವಾಗಿ ಮೂಡಿಬರಲಿ. ಕಳೆದ ಹತ್ತಾರು ವರ್ಷಗಳಲ್ಲಿ ನೂರಾ... ಅದ್ಭುತ ಹಾಡುಗಳನ್ನು ಕನ್ನಡಿಗರಿಗೆ ಕೊಟ್ಟಿರುವ ನಾಗೇಂದ್ರ ಪ್ರಸಾದ್ ... ಬಾರಿಯಾದರೂ ನಿರ್ದೇಶಕರಾಗಿ ಸಕ್ಸಸ್ ಕಾಣಲಿ ಅಲ್ಲವೇ?

## ಇಂಥವರೂ ಇರುತ್ತಾರೆ

ಪ್ರಚಾರದ ಚೊಲು ಮನುಷ್ಯನನ್ನು ಯಾವ ಮಟ್ಟಕ್ಕೆ ಇಳಿಸಿಬಿಡುತ್ತ... ಎಂಬುದು ನಿಮಗೆ ಗೊತ್ತಾಗಬೇಕಾದರೆ ದಯಮಾಡಿ ಒಮ್ಮೆ 'ಮಳೆ' ಚಿತ್ರ... ಪೋಸ್ಟರ್ ಡಿಸೈನ್ ನೋಡಬೇಕಾಗಿ ವಿನಂತಿ. ಈ ಚಿತ್ರದ ನಿರ್ಮಾಪ... ಆರ್.ಚಂದ್ರು ಯಾವ ಪರಿಯ ಪ್ರಚಾರಪ್ರಿಯ ಎಂಬುದು ನಿಮಗಾ... ತಿಳಿಯುತ್ತದೆ. ಸಾಮಾನ್ಯವಾಗಿ ನಿರ್ಮಾಪಕನೊಬ್ಬ ತಾನು ನಿರ್ಮಿಸುವ ಚಿತ್ರದ... ಎಲ್ಲೋ ಒಂದು ಕಡೆ ನಿರ್ಮಾಪಕ ಅಂತ ತನ್ನ ಹೆಸರು ಹಾಕಿಕೊಳ್ಳುವುದ... ರೂಢಿ. ಆದರೆ 'ಮಳೆ' ಚಿತ್ರದ ಪೋಸ್ಟರಿನಲ್ಲಿ ಏನಾಗಿದೆ? ಆರ್. ಚಂದ್ರು ಎಲ್ಲೆಲ್ಲಿ ತನ್ನ ಹೆಸರು ಹಾಕಿಕೊಳ್ಳಲು ಸಾಧ್ಯವೋ ಅಲ್ಲೆಲ್ಲ ಅಚ್ಚುಕಟ್ಟಾ... ಹಾಕಿಕೊಂಡಿದ್ದಾರೆ.

ಮೊದಲಿಗೆ 'ಆರ್.ಚಂದ್ರು ಮೂವೀಸ್' ಅಂತ ಒಂದು ಕಡೆ ತಮ... ಹೆಸರು ಹಾಕಿಕೊಂಡಿದ್ದಾರೆ... ಹಾಕಿಕೊಳ್ಳಲಿ, ತಪ್ಪೇನಿಲ್ಲ. ಇನ್ನು 'ನಿರ್ಮಾಪಕ-ಆರ್. ಚಂದ್ರು' ಅಂತ ಅದೇ ಪೋಸ್ಟರಿನಲ್ಲಿ ಇನ್ನೊಂದು ಕಡೆ ದೊಡ್ಡದಾಗಿ ಕಾಣುವಂ... ನೋಡಿಕೊಂಡಿದ್ದಾರೆ. ಅದೂ ಒತ್ತಟ್ಟಿಗಿರಲಿ, ಇಷ್ಟಾದ ಮೇಲೆ 'ಮಳೆ' ಟೈಟಲ್... ಕೆಳಗಡೆ 'ಎ.ಆರ್.ಚಂದ್ರು ಪ್ರೊಡಕ್ಷನ್ಸ್ ಫಿಲ್ಮ್' ಎಂದು ಹಾಕಿಕೊಳ್ಳು... ಜರೂರತ್ತಾದರೂ ಏನಿತ್ತು? ಎಂಬ ಪ್ರಶ್ನೆಗಳು ಎಂಥವರಿಗೂ ಕಾಡಬಲ್ಲವು. ... ಜಾಗದಲ್ಲಿ 'ಎ ತೇಜಸ್ ಫಿಲ್ಮ್' ಅಂತ ಹಾಕಿದರೆ ನಿರ್ದೇಶಕ ತೇಜಸ್ ಎ... ಫೇಮಸ್ ಆಗಿಬಿಡುತ್ತಾರೋ ಎಂಬ ಆತಂಕ ಚಂದ್ರುಗೆ ಇದ್ದಿರಲೂಬಹುದೇನೋ... ಇದರ ಜೊತೆಗೆ 'ಕಥೆ-ಚಿತ್ರಕಥೆ: ಆರ್.ಚಂದ್ರು' ಅಂತ ಸೇಮ್ ಪೋಸ್ಟರಿ... ಮತ್ತೊಂದು ತುದಿಯಲ್ಲಿ ಚಂದ್ರು ಫೋಟೋ ಜೊತೆಗೆ! ಅಲ್ಲಿಗೆ ಒಂದು... ಪೋಸ್ಟರಿನಲ್ಲಿ ನಾಲ್ಕು ಕಡೆ ಆರ್.ಚಂದ್ರು ಹೆಸರು ಬಂದಂತಾಯಿತ... ವಿಪರ್ಯಾಸವೆಂದರೆ, 'ನಿರ್ದೇಶಕ-ತೇಜಸ್' ಎಂಬುದು ಪೋಸ್ಟರಿ... ಒಂದು ಮೂಲೆಯಲ್ಲಿ ತಣ್ಣಗೆ ಕುಳಿತಿದೆ!! ಇಷ್ಟಕ್ಕೂ 'ಮುಂಗಾರುಮಳೆ' ಚಿತ್ರದ ಫಾಂಟ್‌ಗಳನ್ನು ಯಥಾವತ್ತು ನಕ... ಮಾಡಿ ತಮ್ಮ 'ಮಳೆ' ಚಿತ್ರದ ಟೈಟಲ್‌ಗೆ ಬಳಸಿಕೊಂಡಿರು... ಚಂದ್ರುಗೆ ಕ್ರಿಯೇಟಿವಿಟಿಗಿಂತ ಪ್ರಚಾರದ ತೆವಲು ಎಷ್ಟಿದೆ ಎಂಬುದು ಇಲ್ಲೇ ತಿಳಿಯುತ್ತದೆ. ಕೊನೆಯದಾಗಿ ಅನಿಸುವುದೇನೆಂದರೆ ಚಿತ್ರ... ಹೆಸರನ್ನು 'ಮಳೆ' ಬದಲಿ... 'ಆರ್.ಚಂದ್ರು' ಅಂತಲೇ ಇಡಬಹುದಿತ್ತಲ್ಲ!!!






PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com